ಶ್ರೀ ಬಿ.ಎಸ್. ಯಡಿಯೂರಪ್ಪ:- ಸ್ಟೇಟ್‌ಮೆಂಟ್ ಮಾಡಿ ಅಥವಾ ಏನಾದರೂ ವಿವರ ನನಗೆ ಕೊಡಿ. ನಾನು ಹೇಳಿರುವುದಕ್ಕೆ ಹೊರಟಿರುವಂತಾದ್ದು ಏನು ಎಂದರೆ 5.7.90ರಂದು ನಡೆದಿರುವ ಘಟನೆ ಇದು. ಇದು ಡಿಲೇ ಆಗುತ್ತಾ ಹೋದರೆ, ಕೊಲೆಗಾರ ತಪ್ಪಿಸಿಕೊಳ್ಳುತ್ತಾನೆ, ಸಾಕ್ಷ್ಯಾಧಾರಗಳು ಸಿಗುವುದಿಲ್ಲ. ಇಲ್ಲಿ ಪ್ರಭಾವಿ ವ್ಯಕ್ತಿಗಳು ಉದ್ದೇಶಪೂರ್ವಕವಾಗಿ ಈ ಒಂದು ಕೊಲೆ ಸಂದರ್ಭದಲ್ಲಿ ಸಂಬಂಧಪಟ್ಟಿರುವುದರಿಂದ ಇದನ್ನು ಮುಚ್ಚಿ ಹಾಕುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಇದು ಮೊದಲನೆಯ ಘಟನೆ ಅಲ್ಲ. ಮೂರು ಈ ರೀತಿ ಕೊಲೆಗಳು ಅಲ್ಲಿ ಆಗಿದೆ. ಆರೇಳು ಜನ ಈ ರೀತಿ ಜೈನ ಸಮಾಜದ ಹೆಣ್ಣು ಮಕ್ಕಳನ್ನು ವ್ಯಭಿಚಾರಕ್ಕೋಸ್ಕರ ಹೊರಗಡೆ ಕರೆದುಕೊಂಡು ಹೋಗಿದ್ದಾರೆ. ಆದಿಚುಂಚನಗಿರಿ ಸ್ವಾಮಿಗಳು ಅಲ್ಲಿಗೆ ಬಂದು ಎಂಟನೇ ಹೆಣ್ಣು ಮಗಳನ್ನು ಈ ರೀತಿ ಹೊತ್ತುಕೊಂಡು ಹೋಗುವಂತಹ ಪ್ರಯತ್ನ ನಡೆದಾಗ ಅವರು ಮಧ್ಯೆ ಪ್ರವೇಶ ಮಾಡಿ ಅದೇ ಊರಿನಲ್ಲಿಯೇ ಉಳಿದುಕೊಂಡು, ಮೂರು ದಿವಸದೊಳಗೆ ಹೆಣ್ಣು ಮಕ್ಕಳನ್ನು ವಾಪಸ್ ತರದೇ ಹೋದರೆ ನಿಮ್ಮನ್ನು ಬಿಡುವುದಿಲ್ಲ ಎಂದು ಹೇಳಿದ ಮೇಲೆ ವ್ಯಭಿಚಾರಕ್ಕೋಸ್ಕರ ಹಿಡಿದುಕೊಂಡು ಹೋಗಿದ್ದವಳನ್ನು ವಾಪಸ್ ತಂದು ಬಿಟ್ಟಿದ್ದಾರೆ. ಈ ರೀತಿ ಪದೇ ಪದೇ ಈ ಘಟನೆ ನಡೆದಿದೆ. ಉದ್ದೇಶ ಪೂರ್ವಕವಾಗಿ ವ್ಯವಸ್ಥಿತವಾಗಿ ಕೊಲೆ ಆಗುತ್ತಿದೆ. ಅನೇಕ ಪ್ರಭಾವ ವ್ಯಕ್ತಿಗಳ ಕೈವಾಡದಿಂದ ಇದನ್ನು ಮುಚ್ಚಿ ಹಾಕುವಂತಹ ಪ್ರಯತ್ನ ನಡೆಯುತ್ತಾ ಇರಬೇಕಾದರೆ, ನಾಳೆ ಅಲ್ಲಿ ಅಶಾಂತಿಯ ವಾತಾವರಣ ಉಂಟಾಗುತ್ತಿದೆ. ಅಲ್ಲಿ ಶಾಂತಿಯ ವಾತಾವರಣ ಬರಬೇಕಾಗಿದೆ. ಅಲ್ಲಿನ ಪೋಲೀಸ್ ಅಧಿಕಾರಿ ಆ ರುಂಡ ಅವನ ಮನೆ ಮುಂದೆ ಸಿಕ್ಕಿರಬೇಕಾದರೆ ಅವನ ಮನೆಯನ್ನು ಜಪ್ತಿ ಮಾಡಿದ್ದಾರೆ. ಅನೇಕ ಕಳ್ಳತನದ ಸಾಮಾನುಗಳು ಅವನ ಮನೆಯಲ್ಲಿ ಸಿಕ್ಕಿದೆ. ನಾನು ಹೇಳುವಂತಾದ್ದು ಹೀಗಿರಬೇಕಾದರೆ ಸರ್ಕಾರ ಇದುವರೆಗೆ ಇದರ ಬಗ್ಗೆ ಸ್ಟೇಟ್‌ಮೆಂಟ್ ಮಾಡದೇ ಇರುವಂತಾದ್ದು ಸರಿಯಲ್ಲ. ಅರೆಸ್ಟ್ ಸಹ ಮಾಡಿಲ್ಲ. ಎಲ್ಲದಕ್ಕೂ ಸ್ಟೇಟ್‌ಮೆಂಟ್ ಮಾಡಬೇಕಾಗಿಲ್ಲ. ಆದರೆ, ನನಗೆ ಏನು ಭಯ ಅಂದರೆ ಇದುವರೆಗೆ ಅರೆಸ್ಟ್ ಮಾಡಿಲ್ಲ. ಕಂಪ್ಲೈಟ್ ಕೊಟ್ಟಿದ್ದರೂ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಇದು ನಮಗೆ ಭಯ ತಂದಿರುವಂತಹದು. ದಯವಿಟ್ಟು ಈ ಬಗ್ಗೆ ವಿವರ ಬೇಕು;

ಶ್ರೀ ಟಿ.ಎನ್. ನರಸಿಂಹ ಮೂರ್ತಿ:- ನಾನು ಸರ್ಕಾರದ ಪರಿಯಿಂದ ಏನು ಪುನರುಚ್ಚಾರ ಮಾಡುತ್ತೇನೆಂದರೆ, ಈ ಸಂಜೆಯೊಳಗೆ ನಾನು ಗೃಹ ಖಾತೆಯ ಕಾರ್ಯದರ್ಶಿಗಳಿಗೆ ಮತ್ತು ಡೈರಕ್ಟರ್ ಜನರಲ್ ಆಫ್ ಪೋಲೀಸ್ ಅವರಿಗೆ ಹೇಳಿ ಈ ಒಂದು ಬೆಳ್ಳೂರಿನಲ್ಲಿ ನಡೆದಿರತಕ್ಕ ಕೊಲೆ ಪ್ರಕರಣ ಏನು ಇದೆ, ಅದರ ಬಗ್ಗೆ ಶೀಘ್ರವಾಗಿ ತನಿಖೆ ಮಾಡಬೇಕು ಮತ್ತು ಈಗಾಗಲೇ ಏನಾದರೂ ಮಾಹಿತಿ ಸಿಕ್ಕಿದ್ದರೆ ಅದನ್ನು ಸರ್ಕಾರಕ್ಕೆ ಕಳಿಸಿಕೊಡಬೇಕೆಂದು ಹೇಳುತ್ತೇನೆ. ಮಾನ್ಯ ಸದಸ್ಯರಾದ್ದ ಶ್ರೀಯಡಿಯೂರಪ್ಪನವರು ಒಂದು ಮಾತನ್ನು ಆತುರದಲ್ಲಿ ಮಾತನಾಡುವಾಗ ಹೇಳಿದರು. ಇಲ್ಲಿ ಪೋಲೀಸ್ ಇಲಾಖೆ ಬದುಕಿದೆಯಾ ಎಂದು. ಪೋಲೀಸ್ ಇಲಾಖೆ ಏನಾದರೂ ಸತ್ತರೆ ನಾವು ಯಾರೂ ಇಲ್ಲಿ ಗೌರವಯುತವಾಗಿ ಬರುವುದಕ್ಕೆ ಸಾಧ್ಯ ಇಲ್ಲ. ಇಲಾಖೆ ಬದುಕಿದೆ ಕರ್ತವ್ಯ ಲೋಪ ಆಗಿದ್ದರೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡೋಣ. ಮತ್ತು ಅದನ್ನು ಪುಲ್ ಅಪ್ ಮಾಡೋಣ. ಸತ್ಯವಾದ ಮಾಹಿತಿಯನ್ನು ತರಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಉಪಾಧ್ಯಕ್ಷರು:- ಈಗ 68ರ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆಯನ್ನು ಮಾನ್ಯ ಚಂದ್ರೇಗೌಡರು ಪ್ರಾರಂಭ ಮಾಡಬಹುದು

ವಿಷಯ: ಬಳ್ಳಾರಿ ಅಭಿವೃದ್ಧಿ ಪ್ರಾಧಿಕಾರದವರು ಸರ್ವೆ ನಂ.839ಬಿ, 839ಸಿ, 841ಎ, 841ಬಿ, ಜಮೀನಿನಲ್ಲಿ ನಿವೇಶನಗಳನ್ನು ಹಂಚಿರುವುದರ ಬಗ್ಗೆ.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷಿಣಿ ಅವರೇ ಇದು ಒಂದು ಸಾರ್ವಜನಿಕ ಮಹತ್ವದ ವಿಚಾರ ಚರ್ಚೆ ಮಾಡಬೇಕು ಎಂದು ಹೇಳಿ ನಾನು 16

17 ದಿವಸಗಳಿಂದ ಪ್ರಯತ್ನ ಮಾಡುತ್ತಿದ್ದೇನೆ. ನಾನು ಕಾಲಿಂಗ್ ಅಟೆನ್‌ಷನ್ ನೋಟೀಸ್ ಅನ್ನು ಈ ಬಗ್ಗೆ ಇದೇ ತಿಂಗಳು. ಮೂರನೇ ತಾರೀಖು ಅಂದರೆ ಸುಮಾರು 15 ದಿವಸದ ಕೆಳಗೆ ಕೊಟ್ಟು, ಅದು ಇಲ್ಲಿ ಚರ್ಚೆ ಆಗತಕ್ಕಂಥ ಸಂದರ್ಭದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ವಿಷಯದ ಗಂಭೀರತೆಯನ್ನು ಗಮನಿಸಿ ಇದನ್ನು 68ರ ನಿಯಮದ ಪ್ರಕಾರ ಚರ್ಚೆಗೆ ಈ ದಿವಸ ಅನುಮತಿಯನ್ನು ಕೊಟ್ಟಿದ್ದಾರೆ. ಇದು ಚರ್ಚೆ ಆಗಬೇಕು ಎಂದು 4 ಬಾರಿ ನಮ್ಮ ಕಾರ್ಯಕ್ರಮದ ಪಟ್ಟಿಯಲ್ಲಿ ಬರುತ್ತಾ ಇತ್ತು. ಇವತ್ತು ವಿಶೇಷವಾಗಿ ಕೊನೇ ದಿವಸ ಚರ್ಚೆಗೆ ಹಾಕಿದ್ದಾರೆ. ಅದಕ್ಕಾಗಿ ನಾನು ಸಭಾಧ್ಯಕ್ಷರನ್ನು ಅಭಿನಂದಿಸುತ್ತೇನೆ. ಹಾಗೆ ಮಾಡಿದ್ದರ ಉದ್ದೇಶವೇನೆಂದರೆ, ಸಭಾಧ್ಯಕ್ಷರಿಗೆ ಕೂಡ ಈ ಒಂದು ವಿಷಯದ ಗಂಭೀರತೆ ಅರ್ಥವಾಗಿದೆ ಎನ್ನುವುದು ಸದನಕ್ಕೆ ಗೊತ್ತಾಗಲಿ, ಸರ್ಕಾರಕ್ಕೆ ಗೊತ್ತಾಗಲಿ ಎನ್ನುವ ದೃಷ್ಟಿಯಿಂದ ಅಷ್ಟೇ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದೆ. ಮಾನ್ಯ ಸಭಾಧ್ಯಕ್ಷಿಣಿಯವರೆ, ಎಲ್ಲ ನಗರಗಳಲ್ಲಿ ಜನಸಂದಣಿ ಜಾಸ್ತಿಯಾದ ಹಾಗೆ ಜಾಗಕ್ಕೆ ಸೈಟುಗಳಿಗೆ ಒತ್ತಡ ಬರತಕ್ಕಂಥಾದ್ದು ಸಹಜವೇ. ಹಾಗೆಯೇ ಬಳ್ಳಾರಿ ನಗರದಲ್ಲಿ ಕೂಡ ನಗರಾಭಿವೃದ್ಧಿ ಮಂಡಲಿಯವರು ವಿಶೇಷವಾದಂಥ ಆಸಕ್ತಿ ವಹಿಸಿ ಕಳೆದ 8-9 ವರ್ಷಗಳಿಂದ ಅಲ್ಲಿಯ ಜನಕ್ಕೆ ಬೇಕಾಗಿರತಕ್ಕಂತ ಸೈಟುಗಳನ್ನು ಕೊಡುವುದಕ್ಕಾಗಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ. ನಾನು ಆ ವಿವರಗಳಿಗೆ ಹೋಗುವುದಕ್ಕೆ ಮುಂಚೆ ಈ ಸದನದಲ್ಲಿ ಜುಲೈ 3ನೇ ತಾರೀಖು 1990ರಲ್ಲಿ ಮಾನ್ಯ ಸಚಿವರು ಈ ಸಂಬಂಧ ಒಂದು ಚರ್ಚೆ ಹೇಳಿಕೆಯನ್ನು ಕೊಟ್ಟಿದ್ದಾರೆ. ನಾನು ಈ ವಿಷಯವನ್ನು ತಿಳಿದುಕೊಳ್ಳಬೇಕು, ಈ ವಿಷಯದ ಗಂಭೀರತೆಯನ್ನು ಸದನದ ಮೂಲಕ ಸಾರ್ವಜನಿಕರ ಗಮನಕ್ಕೆ ತರಬೇಕು ಎನ್ನತಕ್ಕಂಥ ಒಂದು ಪ್ರಯತ್ನ ಮಾಡಿದ್ದೆ. ಆದರೆ ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗುವಂಥ ಪ್ರೇರಣೆಯನ್ನು ಮಾನ್ಯ ಮಂತ್ರಿಗಳು ನನಗೆ ಒದಗಿಸಿದ್ದಾರೆ. ಅದಕ್ಕೆ ನಾನು ಅವರಿಗೆ ಅಭಿನಂದನೆ ಸಲ್ಲಿಸಬೇಕೋ ಅಥವಾ ವ್ಯಥೆ ಪಡಬೇಕೊ ನನಗೆ ತಿಳಿಯಲೊಲ್ಲದು. ತಮ್ಮ ಹೇಳಿಕೆಯ ಕೊನೆಯ ಪ್ಯಾರದಲ್ಲಿ ಈ ರೀತಿ ಇದೆ:

'Sport decisions to cancel de-notification order already announced by me on the Floor of the Council. This is the best piece of nail on the allegations of under-hand dealings behind the earlier decisions made by the Hon.Minister of the House."

ಇದನ್ನು ನಾನು ಮಾಡಿರಲಿಲ್ಲ. ಈಗ ಅವರು ಚಂದ್ರೇಗೌಡರಾಗಲಿ ಅಥವಾ ಇದಕ್ಕೆ ಸಹಿ ಹಾಕಿರತಕ್ಕ ಸಿಂಧ್ಯರವರಾಗಲಿ, ಏಕಾಂತಯ್ಯನವರಾಗಲಿ ಏನೋ ಇದರಲ್ಲಿ ಅಂಡರ್ ಹ್ಯಾಂಡ್ಲಿಂಗ್ ಡೀಲಿಂಗ್ ನಡೆದಿದೆ ಎಂದು ಆಪಾದನೆ ಮಾಡಿದ್ದರೆ ಅದಕ್ಕೆ ಉತ್ತರ ಕೊಡಬಹುದು. ಆ ರೀತಿ ನಾವು ಏನೇನೂ ಹೇಳಲಿಲ್ಲ. ಅವರೇ ಹೇಳಿದ್ದಾರೆ. ಕನ್ನಡದಲ್ಲಿ ಒಂದು ಗಾದೆ ಇದೆ. ಕುಂಬಳಕಾಯಿ ಕಳ್ಳ ಅಂದರೆ ಹೆಗಲುಮುಟ್ಟಿ ನೋಡಿಕೊಂಡ ಎಂದು. ಇವರು ಸುಮ್ಮನಾದರೂ ಇರಬಹುದು. ಈ ಕೆಲಸದಿಂದ ಪ್ರಾರಂಭವಾಯಿತು.

This is the complete contrast to the manner in which the previous Government had been dealing with numerous land scandals which are now a part of history."

ಇದು ಅವರ ಹೇಳಿಕೆ. ಇದನ್ನು ನಾನು ಕೇಳಿರಲಿಲ್ಲ. I was confining myself to Bellary.

ಮತ್ತು ರಾಘವೇಂದ್ರ ನಗರದಲ್ಲಿ ಸೈಟುಗಳ ಹಂಚಿಕೆ ಬಗ್ಗೆ ಏನು ಮಾಡಿದ್ದೀರಿ ಎಂದು ಕೇಳಿದ್ದೆ. ಇಲ್ಲಿ ಹಿಂದಿನ ಸರ್ಕಾರದ್ದು ಚರಿತ್ರೆ ಒಂದು ಇದೆಯೆಂದು ಹೇಳಿದ್ದಾರೆ. ನಾನು ಮೊದಲು ಮಂತ್ರಿಗಳನ್ನು ಕೇಳುತ್ತೇನೆ. ದಯುಮಾಡಿ ಆ ಚರಿತ್ರೆಯೆಲ್ಲವನ್ನೂ ನಿಮ್ಮ ಕಾಲದಲ್ಲಿ ಇಟ್ಟುಬಿಡಿ. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಂದ ತನಿಖೆ ಆಗುತ್ತದೆ, ಸಾರ್ವಜನಿಕರ ಚರ್ಚೆಗೆ ವಸ್ತುವಾಗುತ್ತದೆ. ಆದರೆ ಇಲ್ಲಿ ಏನು ನಡೆದಿದೆ ಎಂಬುದರ ವಿವರಣೆ ಸ್ವಲ್ಪ ಕೊಡಬೇಕು.

This decision was taken on the basis of concurrent opinion furnished by two consecutive Advocate Generals viz., Sri C.Shivappa on 3-11-89 and Sri B.V. Acharya on 9-3-90 within these two months, a decision was taken.

11 ರಿಂದ 3ನೇ ತಾರೀಖು 4 ತಿಂಗಳು ಅಥವಾ 5 ತಿಂಗಳಲ್ಲಿ ಕಾನ್ಸಿಕ್ಯುಟೀವಾಗಿ ಎರಡು ಜನ ಅಡ್ವೋಕೇಟ್ ಜನರಲ್‌ಗಳು ಸರ್ಕಾರದ ಪರವಾಗಿ ತೀರ್ಮಾನ ಕೊಟ್ಟಿದ್ದಾರೆ, ಬಹಳ ಸಂತೋಷ.

ಅದಕ್ಕಿಂತ ಹಿಂದೆ ಎಷ್ಟು ಸಲ ಆಗಿತ್ತು, ಯಾವ ಯಾವ ಅಡ್ವೋಕೇಟ್ ಜನರಲ್‌ಗಳು ಸರ್ಕಾರಕ್ಕೆ ಏನೇನು ಸಲಹೆ ಕೊಟ್ಟಿದ್ದಾರೆನ್ನುವುದನ್ನು ನೋಡೋಣ. ಮುಖ್ಯವಾಗಿ ಇವರ ಸಲಹೆಯನ್ನು ಆಧರಿಸಿ ಸರ್ಕಾರ ಏನು ತೀರ್ಮಾನ ತೆಗೆದುಕೊಂಡಿದೆ, ಅದು ಎಲ್ಲಾ ಶಾಸನಗಳ ಎಲ್ಲೆಯನ್ನು ಮೀರಿ, ಬುದ್ಧಿವಾದ ಹೇಳತಕ್ಕಂಥ ನೈತಿಕ ಸ್ಥೈರ್ಯವನ್ನು ಕಳೆದುಕೊಂಡು ನಾನು ವಾಪಸ್ಸು ತೆಗೆದುಕೊಂಡುಬಿಟ್ಟಿದ್ದೇನೆ ಎಂದು ಹೇಳಿದರು. ಸ್ವಾಮಿ, ಇಲ್ಲಿ ನಡೆದಿರುವುದಾದರೂ ಏನು? ಬಳ್ಳಾರಿ ನಗರಾಭಿವೃದ್ಧಿ ಮಂಡಲಿ ಸುಮಾರು 1982ನೇ ಇಸವಿ ಡಿಸೆಂಬರ್ 14ನೇ ತಾರೀಖು, ಅದಕ್ಕಿಂತ ಮುಂಚೆ ಬಹಳ ಪ್ರಯತ್ನ ಮಾಡಿದ್ದಾರೆ. ಶ್ರೀಮಾನ್ ಆರ್.ಗುಂಡೂರಾಯರು ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಕಾಲಕ್ಕೆ 14.12.82 ರಲ್ಲಿ ಗೆಜೆಟ್ ನೋಟಿಫಿಕೇಷನ್ ಬರುತ್ತದೆ. ಬಳ್ಳಾರಿ ನಗರಾಭಿವೃದ್ಧಿ ಮಂಡಲಿಯ ಸಲಹೆ ಏನಿತ್ತು, ಅವರು ಕೊಟ್ಟಿರತಕ್ಕ ಸ್ಕೀಮು ಏನಿದೆ, ಅದನ್ನು ಗೆಜೆಟ್ ನೋಟಿಫಿಕೇಷನ್ ಮಾಡುತ್ತಾರೆ. ಅಲ್ಲಿಂದ ಈ ಫೈಲ್ 5 ಸರ್ಕಾರಗಳನ್ನು ನೋಡಿದೆ. ಶ್ರೀಮಾನ್ ಗುಂಡೂರಾಯರು, ಶ್ರೀಮಾನ್ ರಾಮಕೃಷ್ಣ ಹೆಗಡೆಯವರು, ಶ್ರೀಮಾನ್ ಬೊಮ್ಮಾಯಿಯವರು, ನಂತರ ಗೌರ್ನರ್ ಆಡಳಿತ ಪುನಃ ವೀರೇಂದ್ರಪಾಟೀಲರ ಆಡಳಿತಕ್ಕೆ ಬಂದಿದ್ದೇವೆ. ಈ ಮಧ್ಯೆ 82ರಿಂದ 90ರವರೆಗೆ ಕಾಂಗ್ರೆಸ್ ಸರ್ಕಾರಗಳು ಇರಲಿಲ್ಲ. ಇದು ತೀರ್ಮಾನವಾಗುವುದಕ್ಕೆ ಕಾಂಗ್ರೆಸ್‌ನ ಸರ್ಕಾರವೇ ಬರಬೇಕೇನೋ ಎಂದು 8 ವರ್ಷಗಳು ಕಾದಿದೆ. ಆ ಮೇಲೆ ತಾವೇ ಒಪ್ಪಿಕೊಂಡ ಸ್ಕೀಮನ್ನು 25-5-90ರಲ್ಲಿ ಇತಿಶ್ರೀ ಮಾಡಿದರು. ನಾನು ಈ ಸಂಬಂಧವನ್ನು ಕಲ್ಪಿಸುವುದಕ್ಕೆ ಕಾರಣ ಏನೆಂದರೆ 83 ರಿಂದ 88 ಮತ್ತು 89ರವರೆಗೆ ಅನೇಕ ಸಾಮ್ರಾಜ್ಯಗಳು ಮೇಲಿಂದ ಕೆಳಗೆ ಉರುಳಿ ಬಿದ್ದವು ಎಂದು ಹೇಳಿದ್ದಾರೆ. 82ರಲ್ಲಿ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿ ಕಾಲದಲ್ಲಿ ನಡೆದಂಥ ಘಟನೆ 90ರಲ್ಲಿ ಯಾವ ತಿರುವು ತೆಗೆದುಕೊಂಡಿತು ಎನ್ನುವುದನ್ನು ನಾವು ನೋಡಬೇಕಾಗಿದೆ. 29-4-83ರಲ್ಲಿ ಲ್ಯಾಂಡ್ ಅಕ್ವಿಜಿಷನ್ ಆಫೀಸರ್‌ನ್ನು ಅಲ್ಲಿ ಬದಲಾವಣೆ ಮಾಡುತ್ತಾರೆ. ಬೋರ್ಡು 9-1-84ರಲ್ಲಿ ರೆಸ್ಯೂಲ್ಯೂಷನ್ ಮಾಡುತ್ತದೆ. ನಾವು ಕೊಟ್ಟ ಸ್ಕೀಮನ್ನು ಸರ್ಕಾರ ಒಪ್ಪಿಕೊಂಡಿದೆ, ಈ ಸ್ಕೀಮನ್ನು ಜಾರಿಗೊಳಿಸತಕ್ಕ ನಿರ್ಣಯವನ್ನು ಅಲ್ಲಿ ಇದ್ದಂತ ನಗರಾಭಿವೃದ್ಧಿ ಮಂಡಲಿ 9-1-84ಕ್ಕೆ ತೀರ್ಮಾನ ಮಾಡುತ್ತದೆ. ಆದರೆ, ಅಲ್ಲಿ ವಿಜಯನಗರ ಸ್ಟೀಲ್ ಪ್ಲಾಂಟ್ ಬರುವುದರಿಂದ, ಅವರ ಅಭಿಪ್ರಾಯವನ್ನು ಕೇಳಬೇಕೆಂದು ಅವರ ಅಭಿಪ್ರಾಯವನ್ನು ಕೇಳಿದ್ದಾರೆ. ವಿಜಯನಗರ ಸ್ಟೀಲ್ ಅಥಾರಟಿಯವರು 9-2-84ರಲ್ಲಿ ನಮ್ಮದು ಏನೇನು ತೊಂದರೆ ಇಲ್ಲ, ಈ ಲೇ ಔಟ್ ಅಪ್ರೂವ್ ಮಾಡಬಹುದು ಎಂದು ಹೇಳಿದ್ದಾರೆ. ಆ ಸಂದರ್ಭ ಸುಮಾರು 84ರಲ್ಲಿ ಅಂದರೆ 19-6-84ರಲ್ಲಿ ಈ ಭೂಮಿ 4 ಜನಕ್ಕೆ ಸೇರಿತ್ತು. 1967ರಲ್ಲಿ 30 ಸಾವಿರಕ್ಕೆ ಈ ಭೂಮಿಯನ್ನು ತೆಗೆದುಕೊಂಡಿದ್ದಾರೆ. ಆ ಮಾಲೀಕರಲ್ಲಿ ಒಬ್ಬರಾದ ಶ್ರೀಮತಿ ಇಂದ್ರಾಣಿಯವರು ಹೈಕೋರ್ಟಿಗೆ ರಿಟ್‌ಪಿಟಿಷನ್ ಹಾಕುತ್ತಾರೆ. ನಂ.8701:84 ಹೈಕೋರ್ಟಿನವರು ಈ ರಿಟ್‌ಪಿಟಿಷನ್ ಮೂಲಕ ಬಳ್ಳಾರಿ ನಗರಾಭಿವೃದ್ಧಿ ಮಂಡಲಿಗೆ ಮುಂದುವರಿಯಬೇಡಿ ಎಂದು ತಡೆಯಾಜ್ಞೆ ಕೊಡುತ್ತಾರೆ. 20-5-85ರಲ್ಲಿ ಈ ತಡೆಯಾಜ್ಞೆಯನ್ನು ವಜಾ ಮಾಡಿ, ಕೇಸನ್ನೂ ವಜಾ ಮಾಡುತ್ತಾರೆ, ಆದಾದ ಮೇಲೆ ಹೈಕೋರ್ಟಿನವರು ತಡೆಯಾಜ್ಞೆಯನ್ನು ಹಿಂದಕ್ಕೆ ತೆಗೆದುಕೊಂಡು, ಕೇಸನ್ನು ವಜಾ ಮಾಡುತ್ತಾರೆ. ಇದಾದ ಮೇಲೆ ಕೋರ್ಟಿನ ಕೆಲಸ ಮುಗಿಯಿತು. ನಂತರ ಮಾಲೀಕರುಗಳು ಸರ್ಕಾರಕ್ಕೆ ಬರುತ್ತಾರೆ. ಕೋರ್ಟಿನಲ್ಲಿ ಏನು ಪ್ರಯೋಜನವಾಗಲಿಲ್ಲ ಅಂತ ಸರ್ಕಾರದ ಹತ್ತಿರ ಬರುತ್ತಾರೆ. ಸರ್ಕಾರದಲ್ಲಿ 29-6-88ರಲ್ಲಿ ಕಂದಾಯ ಮಂತ್ರಿಗಳು ಒಂದು ಸ್ಕೀಮನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ತಡೆಯಾಜ್ಞೆ ಕೊಡುತ್ತಾರೆ. ಮತ್ತೆ ಅದನ್ನು 23-11-85ರಲ್ಲಿ ವೆಕೇಟ್ ಮಾಡುತ್ತಾರೆ. ಪುನಃ ಶ್ರೀಮಾನ್ ಡಿ. ಪುಲ್ಲಯ್ಯ ಎಂಬುವರು ಕಂದಾಯ ಇಲಾಖೆ ಏಕೋ ಸರಿ ಹೋಗಲಿಲ್ಲ ಎಂದು ಹೇಳಿ ನಗರಾಭಿವೃದ್ಧಿ ಸಚಿವರ ಹತ್ತಿರ

ಹೋಗುತ್ತಾರೆ. ಒಂದು ಸಾರಿ ಹೈಕೋರ್ಟು ಸ್ಟೇ ಕೊಟ್ಟು ವಜಾ ಆಯಿತು; ಒಂದು ಸಾರಿ ಕಂದಾಯ ಮಂತ್ರಿಗಳು ಕೊಟ್ಟ ಸ್ಟೇ ಅನ್ನು ವೆಕೇಟ್ ಮಾಡಿದರು. ಈಗ ಎಷ್ಟು ಬುದ್ಧಿವಂತಿಕೆ ಅಂದರೆ, ಮತ್ತೆ ಹೆಚ್.ಯು.ಡಿ. ಮಿನಿಸ್ಟರ್ ಹತ್ತಿರ ಹೋಗಿ ಸ್ಟೆ ತಂದರು. ಸಮಾಜದಲ್ಲಿ ಬಹಳ ಗೌರವಾನ್ವಿತ ಮನುಷ್ಯ ಎನ್ನುವ ಕಾರಣಕ್ಕೆ ಅವರು ಒಂದು ಸ್ಟೇ ಕೊಟ್ಟರು.

23-9-1986ಕ್ಕೆ ಆ ಸ್ಟೇ ನೂ ಕೂಡ ಮತ್ತೆ ವಜಾ ಆಗುತ್ತದೆ. ಇಷ್ಟೆಲ್ಲಾ ಆದ ಮೇಲೆ ಕಂದಾಯ ಮಂತ್ರಿಗಳದ್ದು, ಹೆಚ್.ಯು.ಡಿ. ಮಿನಿಸ್ಟರದ್ದು, ಹೈಕೋರ್ಟ್‌ದ್ದು ಹೀಗೆ ಎಲ್ಲಾ ಮುಗಿದಮೇಲೆ ಅವಾರ್ಡ್ ಪಾಸ್ ಮಾಡುತ್ತಾರೆ. ಫಾರ್ ಅಕ್ವಿಸಿಷನ್ ಆಫ್ ದಿ ಲ್ಯಾಂಡ್ 4(1) ಆಯಿತು. 6(1) ಆಯಿತು. ಎಲ್ಲಾ ಅಕ್ವಿಸಿಷನ್ ಮುಗಿದುಹೋಯಿತು. 24-9-1986ಕ್ಕೆ ಅಕ್ವಿಸಿಷನ್ ಕೆಲಸ ಮುಗಿದುಹೋಯಿತು. ಇನ್ನು ಯಾರು ಯಾರು ಭೂ ಮಾಲೀಕರು ಇದ್ದಾರೆ, ಅವರಿಗೆ ಪರಿಹಾರ ಕೊಡತಕ್ಕಂಥ ಕಾರ್ಯ ಸುಮಾರು 5ಲಕ್ಷದ 31ಸಾವಿರ ರೂಪಾಯಿಯನ್ನು 30-9-1986ಕ್ಕೆ ಈ ಭೂಮಿಗೆ ಸಂಬಂಧಪಟ್ಟಂತೆ ಪರಿಹಾರ ಕೊಡುತ್ತಾರೆ. ಈ ಸ್ಟೇಜು ಮುಗಿಯಿತು. ಇದು ಆದಮೇಲೆ ಸರ್ಕಾರ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುತ್ತದೆ. ಈಗ ಭೂಮಿ ಸ್ವಾಧೀನ ತೆಗೆದುಕೊಂಡಾಗ ಇದರ ಸ್ಥಿತಿ ಏನು? ನಾನು ಅಲ್ಲಿಗೆ ಹೋಗುವುದಕ್ಕೆ ಮುನ್ನ ಹೈಕೋರ್ಟ್ ಮತ್ತು ಸುಪ್ರೀಮ್ ಕೋರ್ಟಿನ ತೀರ್ಮಾನ ಏನು? ಭೂಮಿ ಸರ್ಕಾರದ ಸ್ವಾಧೀನಕ್ಕೆ ಬಂದಮೇಲೆ, ಇದು ಸರ್ಕಾರಿ ಭೂಮಿ ಆಗುತ್ತದೆ. ಅದು ಜಸ್ಟಿಸ್ ಸದಾನಂದಸ್ವಾಮಿ ಅವರ ಜಡ್ಜ್‌ಮೆಂಟ್ ಇರಬಹುದು, ಕೆ.ಸ್ವಾಮಿ ಅವರದು ಇರಬಹುದು. ಇಲ್ಲವೇ ಸುಪ್ರೀಮ್ ಕೋರ್ಟಿನ ತೀರ್ಮಾನ ಇರಬಹುದು. ಅಂತಿಮವಾಗಿ ಸರ್ವೋಚ್ಚ ನ್ಯಾಯಾಲಯದವರು ಹೇಳುತ್ತಾರೆ. ಪೊಸಿಷನ್ ಆಫ್ ದಿ ಲ್ಯಾಂಡ್ ಆದ ಮೇಲೆ ಇದು ಸರ್ಕಾರಿ ಜಮೀನು ಆಗುತ್ತದೆ. ಈ ಸರ್ಕಾರಿ ಜಮೀನು ಮತ್ತೆ ಏನಾದರೂ ಮಾಲೀಕರಿಗೆ ಹೋಗಬೇಕಾದರೆ, ರೀ ನೋಟಿಫೈ ಮಾಡಿ ಕೊಡಲಿಕ್ಕೆ ಆಗುವುದಿಲ್ಲ. ರೀಕನ್‌ವೆ ಮಾಡಿ ಕೊಡಲಿಕ್ಕೆ ಸಹ ಆಗುವುದಿಲ್ಲ. ಗ್ರ್ಯಾಂಟ್‌ಮಾಡಬೇಕಾದರೆ ಅವೇಲಿಬಿಲಿಟಿ ಲಿಸ್ಟ್‌ಗೆ ತಂದು ಆ ಭೂಮಿಯನ್ನು ಗ್ರ್ಯಾಂಟ್ ಮಾಡಿಕೊಳ್ಳಬೇಕಾಗುತ್ತದೆ. ಎಲ್ಲಿ ಶಾಸನಗಳು ವಂಚನೆಯಾಗಿದೆ ಎಂದು ಹೇಳುತ್ತಿದ್ದೇನೆ. ರೀ ನೋಟಿಫೈ ಮಾಡಿ ಅಥವಾ ಅವೇಲಿಬಿಲಿಟಿ ಲಿಸ್ಟ್‌ಗೆ ತಂದು ಆ ಭೂಮಿಯನ್ನು ಮತ್ತೆ ಮಂಜೂರು ಮಾಡಬೇಕು. ಆದರೆ ಅದು ಇಲ್ಲ. ಆ ಕಾರಣ ಸರ್ವೋಚ್ಚನ್ಯಾಯಾಲಯಗಳ ತೀರ್ಪುಗಳೂ ವಿರುದ್ಧ, ಶಾಸನಕ್ಕೂ ವಿರುದ್ಧ, ಮಂತ್ರಿಗಳಿಗೆ ಕೊಟ್ಟ ಸ್ಟೇ ಆರ್ಡರ್ ತೆಗೆದುಕೊಂಡಿರುವುದಕ್ಕೂ ಇವೆಲ್ಲದರ ವಿರುದ್ಧ ಅಡ್ವೋಕೇಟ್ ಜನರಲ್ ಪರವಾಗಿ ಬರೆಯುತ್ತಾರೆ ಸರ್ಕಾರಕ್ಕೆ ಕೊಡಿ ಎಂದು ಹೇಳಿದರೆ, ಏನಾದರೂ ಶಂಕೆ ನಮ್ಮ ಮನಸ್ಸಿನಲ್ಲಿ ಉತ್ಪನ್ನ ಆದರೆ ಅದನ್ನು ಮಂತ್ರಿಗಳು ಕ್ಷಮಿಸುತ್ತಾರೆ ನೀವು ಒಪ್ಪುತ್ತೀರಿ ಎಂದು ನನ್ನ ಭಾವನೆ ಇದು ಆಯಿತು. ಸ್ವತ್ತು ಸ್ವಾಧೀನ ತೆಗೆದುಕೊಂಡಮೇಲೆ, ನೋಟಿಫಿಕೇಷನ್ ಮಾಡಿ ಸೈಟುಗಳನ್ನು ಹಂಚುತ್ತೇವೆಂದು ಅಪ್ಲಿಕೇಷನ್ ಕರೆಯುತ್ತಾರೆ. 7.10.1986, 9.10.1986 ಈ ಎರಡು ನೋಟಿಫಿಕೇಷನ್ ಹೋದ ಮೇಲೆ ಸಾರ್ವಜನಿಕರು ದುಡ್ಡು ಕಟ್ಟಿ ಅರ್ಜಿ ಹಾಕುತ್ತಾರೆ. ಒಂದು ಸೈಟಿಗೆ 20 ಸಾವಿರ ರೂಪಾಯಿ ಪ್ರಕಾರ ಏನೋ ಲೆಕ್ಕ ಹಾಕಿ, ಮೂರು, ನಾಲ್ಕು ಸಾವಿರ ರೂಪಾಯಿ ಏನೋ ದಾಮಾಷ ಲೆಕ್ಕ ಹಾಕಿ ಕಟ್ಟಿಸಿಕೊಳ್ಳುತ್ತಾರೆ. ಇದು ಆದಮೇಲೆ ಮತ್ತೊಂದು ಫ್ರೆಷ್ ನೋಟಿಫಿಕೇಷನ್ ಆಗುತ್ತದೆ. 1-6-1987ರಲ್ಲಿ ಈ ನೋಟಿಫಿಕೇಷನ್ ಆದಮೇಲೆ, ಈ ಸೈಟುಗಳನ್ನು ಹಂಚತಕ್ಕ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ಈ ಹಂಚತಕ್ಕ ಕಾಲದಲ್ಲಿ ಸ್ವಲ್ಪ ವ್ಯತ್ಯಾಸಗಳು ಬರುತ್ತವೆ. ಅದಕ್ಕಾಗಿ ಕೋರ್ಟ್‌ಗೆ ಹೋಗುತ್ತಾರೆ. ಅಲ್ಲಿ ಕ್ರಮವಾಗಿ ಸೈಟುಗಳನ್ನು ಹಂಚಿಲ್ಲ ಎನ್ನುವ ಕಾರಣಕ್ಕಾಗಿ ಕೋರ್ಟ್‌ನಲ್ಲಿ 26-6-1987ರಲ್ಲಿ ಗವರ್ನ್‌ಮೆಂಟ್ ಕ್ಯಾನ್ಸಲ್ ದಿ ಅಲಾಟ್‌ಮೆಂಟ್, ಬರೀ ಅಲಾಟ್‌ಮೆಂಟ್ ಕ್ಯಾನ್ಸಲ್ ಮಾಡುವುದಷ್ಟಕ್ಕೆ ನಿಲ್ಲುವುದಿಲ್ಲ. ಮುಂದಕ್ಕೆ ಸೂಪರ್‌ಸೀಡ್ ಮಾಡುತ್ತಾರೆ. ಬಳ್ಳಾರಿ ನಗರಾಭಿವೃದ್ಧಿ ಮಂಡಲಿಯನ್ನು ಸೂಪರ್‌ಸೀಡ್ ಮಾಡಿ ಈಗ ಛೇರ್ಮನ್ ಮತ್ತು ಅಡ್ಮಿನಿಸ್ಟ್ರೇಟರ್ ಯಾರು ಅಂದರೆ, ಆ ಜಿಲ್ಲೆಯ ಜಿಲ್ಲಾಧಿಕಾರಿಗಳು ದಿಸ್ ಈಸ್ ದಿ ಪೈಟಲ್. ನಾನು ಜಿಲ್ಲಾಧಿಕಾರಿಗಳು ಎಂದು ಹೇಳುವಾಗ ಯಾವ ಅಧಿಕಾರಿಗಳ ಮೇಲೂ ಗೂಬೆ ಕೂರಿಸಲಿಕ್ಕೆ

ಹೇಳುತ್ತಿಲ್ಲ. ಅಲ್ಲಿಯವರೆಗೆ ಇದ್ದಂಥ ವ್ಯವಸ್ಥೆ ಅಂದರೆ, ಅಧಿಕಾರೇತರರು ಅಧ್ಯಕ್ಷರು, ಅಧಿಕಾರೇತರರುಗಳ ಒಂದು ಸಮಿತಿ, ಇವೆಲ್ಲಾ ಹೋಗಿ, ಈಗ ಜಿಲ್ಲಾಧಿಕಾರಿಗಳ ವಶದಲ್ಲಿದೆ. ಆಗ ಡಿ ನೋಟಿಫೈ ಆಗುತ್ತದೆ, ಇದು ಮುಖ್ಯ ಇದು ಇಷ್ಟಕ್ಕೇ ನಿಲ್ಲಲಿಲ್ಲ. ರಾಜ್ಯಪಾಲರ ಆಡಳಿತದಲ್ಲಿ, ಪುನಃ ಒಂದು ಪ್ರಯತ್ನ ನಡೆಯುತ್ತದೆ. ಆಗಲೂ ಕೂಡ, ವೆಂಕಟಸುಬ್ಬಯ್ಯನವರಿಗೂ ಅವರಿಗೂ ಹತ್ತಿರ ಸಂಬಂಧ ಇತ್ತು ಎಂದು ಹೇಳಲಿಕ್ಕೆ ನಾನು ಹೋಗುವುದಿಲ್ಲ. ಪ್ರಯತ್ನ ಮಾಡಿದ್ದಾರೆ.ಆ ಪ್ರಯತ್ನ ತಾನು ಸಹಾಯ ಮಾಡಬೇಕೆಂದು ಅವರು ಇಚ್ಛೆ ಪಟ್ಟರೂ ಕೂಡ ಕಾನೂನು ಇದಕ್ಕೆ ಅವಕಾಶ ಕೊಡುವುದಿಲ್ಲ ಅನ್ನತಕ್ಕಂತಹ ಪ್ರಜ್ಞೆ ಮಾಹಿತಿ ತರಿಸಿಕೊಂಡು ಅವರಿಗೆ ಇದ್ದಂತಹ ಸಲಹೆಗಾರರು ಏನು ಇದ್ದರು, ರಾಜ್ಯಪಾಲರ ಆಡಳಿತದಲ್ಲಿ, ಅವರದ್ದು ಒಂದು ಸಭೆ ಸೇರಿ ಆ ಸಭೆ ತೀರ್ಮಾನ ಮಾಡುತ್ತದೆ, ಅವರಿಗೆ ಈ ಭೂಮಿಯನ್ನು ವಾಪಸ್ ಕೊಡುವುದು ಯೋಗ್ಯವಲ್ಲ ಎಂದು ಇಷ್ಟೆಲ್ಲಾ ಪ್ರಕ್ರಿಯೆಗಳು ನಡೆದ ಮೇಲೆ....

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:- ಆ ಲ್ಯಾಂಡ್ ಓನರ್ಸ್ ಯಾರು ಇದ್ದಾರೆ, ಅವರು ಹಿಂದಿನ ಹೆಚ್.ಯು.ಡಿ ಮಂತ್ರಿಗಳ ಹತ್ತಿರ ಹೋಗಿ ನಮ್ಮ ನಮಗೇ ಇದನ್ನು ರೀ ಕನ್‌ವೇ ಮಾಡಿ, ನಿಮಗೆ ಆಲ್‌ಟರ್‌ನೇಟ್ ಲ್ಯಾಂಡ್ 11 ಎಕರೆಯನ್ನು ಕೊಡುತ್ತೇವೆಂದು ಹೇಳಿದಾಗ ಅವರು ಎಂಡಾರ್ಸ್‌ಮೆಂಟ್ ಮಾಡಿ ಇದನ್ನು ಕೊಡುವುದಕ್ಕೆ ಬರುತ್ತದೆಯೋ ಹೇಗೆ ಎನ್ನುವುದನ್ನು ಪರಿಶೀಲನೆ ಮಾಡಿಕೊಡುವುದಕ್ಕೆ ಬಂದರೆ ಅದನ್ನು ವಾಪಸ್ ಕೊಡಿ ಎಂದು ಅವರು ಹೇಳಿದ್ದಾರೆ ಎನ್ನುವುದು ಒಂದು, ಇದು ನಾನು ಕೇಳಿದ್ದು ಬೇಕಾದರೆ ಈ ಇಲ್ಲ ಎಂದು ಹೇಳಿ. ಆ ಮೇಲೆ ಎರಡನೆಯದು, ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿ ಬಳ್ಳಾರಿಗೆ ಹೋದಾಗ ಅವರೂ ಕೂಡ, ಸಹಾಯ ಮಾಡುವುದಕ್ಕೆ ಬಂದರೆ ಮಾಡಿಬಿಡಿ ಎಂದು ಅವರು ಕೊಟ್ಟ ಅರ್ಜಿ ಮೇಲೆ ಬರೆದಿದ್ದಾರೆಂದು ಸುದ್ದಿ ಇದೆ. ಅದಕ್ಕೆ ಹೆಚ್.ಯು.ಡಿ. ಮಂತ್ರಿಗಳು ಮತ್ತು ಸಿ.ಎಂ. ಇಬ್ಬರೂ ಬರೆದು ಮೇಲೆ ಅವರು ನಿಮ್ಮ ಮನ ಒಲಿಸಿಕೊಂಡಿರಬಹುದು. ನೀವು ಎಂಡಾರ್ಸ್‌ಮೆಂಟ್ ಮಾಡಿದಿರಿ, ಅದಕ್ಕೆ ನಿಮ್ಮ ಹೆಚ್.ಯು.ಡಿ. ಮಿನಿಸ್ಟರ್ ಹಾಗೆ ಮಾಡಿದ್ದರು ಎಂದು ನಾನು ಹೇಳುತ್ತಿದ್ದೇನೆ. ಒಂದು ವೇಳೆ ಈಗಿನವರು ಮಾಡಿದ್ದರೆ ಅದೂ ಸಹ ಹೊರ ಬರುತ್ತದೆ, ಆದರೆ ನಿಮ್ಮ ಕಾಲದಲ್ಲಿ ಈ ರೀತಿ ನಡೆದಿತ್ತೇ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಎರಡು ಮೈನಸ್‌ಗಳು ಸೇರಿದರೆ ಒಂದು ಪ್ಲಸ್ ಆಗುತ್ತದೆ ಅದು ತಾನೆ ನಿಮ್ಮ ವಾದ. ಆ ಕಾಲಕ್ಕೆ ಹೆಚ್.ಯು.ಡಿ. ಮಂತ್ರಿಗಳು ಮಾಡಿದ್ದರು ಎಂದು ಹೇಳಲು ನಿಮ್ಮ ಪತ್ತಿಗ ಏನು ಇಲ್ಲವಲ್ಲ. ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯದಿಂದ ತನಿಖೆ ಮಾಡಿಸುವುದಾದರೆ ಮಾಡಿಸಿ. ಅವರು ಅಪರಾಧಿಯಾದರೆ ಪುನಃ ಅವರನ್ನು ಇಲ್ಲಿ ತಂದು ನಿಲ್ಲಿಸಿ: ನೇಣುಗಂಬಕ್ಕೆ ಏರಿಸಿ ಆಗ ಮಾಡಿದ್ದು ಸರಿ ಈಗ ಮಾಡಿದ್ದು ತಪ್ಪು ಎಂದು ನಾನು ವಾದ ಮಾಡುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು:- ಅವರು ತಪ್ಪು ಮಾಡಿದ್ದಾರೆಂದು ಹೇಳಲಿಲ್ಲ, ಒಳ್ಳೆಯ ದೃಷ್ಟಿಯಿಂದ ಒಳ್ಳೆ ಡಿಸಿಷನ್ ತೆಗೆದುಕೊಂಡಿದ್ದಾರೆಂದು ನಾವು ಅಪ್ರಿಷಿಯೇಟ್ ಮಾಡುತ್ತಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ:- ನಿಮಗೆ ಅನುಕೂಲ ಆಗಿದ್ದರೆ ಅದನ್ನು ಅಪ್ರಿಷಿಯೇಟ್ ಮಾಡುತ್ತೀರಿ ಅನಾನುಕೂಲ ಆದರೆ ಶಾಸನಸಭೆಯಲ್ಲಿ ಚರ್ಚೆ ಮಾಡುತ್ತೀರಿ;

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:- ಆಗ ಅನುಕೂಲವಿದ್ದು ಸುಮ್ಮನೆ ಕೂತಿರಿ; ಈಗ ಅನಾನುಕೂಲವಿದೆ ನೋಡೋಣವೆಂದು ಹಾಕಿದ್ದೀರಿ; ಅಷ್ಟೆ;

ಶ್ರೀ ಡಿ.ಬಿ. ಚಂದ್ರೇಗೌಡ:- ಪುಲ್ಲಯ್ಯನವರು ಯಾರೆಂದು ನಾನು ಹೇಳಿರಲಿಲ್ಲ, ಈಗ ಅವರೆಲ್ಲಾ ಹೇಳಿದ್ದರಿಂದ ನಾನು ಹೇಳಬೇಕಾಗಿದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:- ಪುಲ್ಲಯ್ಯನವರು ಯಾರೆಂದು ನಾನು ಹೇಳಲಿಲ್ಲ. ಇದರಲ್ಲಿ ಯಾರು ಇದ್ದಾರೆಂದು ಕೂಡ ಹೇಳಲಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಅವರು ನಿಮಗೆ ಗೊತ್ತಿಲ್ಲ, ನನಗೆ ಗೊತ್ತಿತ್ತು. ಏಕೆಂದರೆ ನನ್ನ ಜೊತೆ ಸಂಸತ್ತಿನ ಸದಸ್ಯರಾಗಿದ್ದವರು ಅವರು ಆ ಕಾರಣದಿಂದ ನಾನು ಹೇಳುತ್ತಿದ್ದೇನೆ. ಬಹುಶಃ

ಪುಲ್ಲಯ್ಯನವರು ನನ್ನ ಹತ್ತಿರ ಬಂದಿದ್ದರೆ ನಾನೂ ಹೇಳಿರಬಹುದು. ನನಗೆ ಗೊತ್ತಿರಲಿಕ್ಕಿಲ್ಲ. ನಾನು ನಿಮ್ಮ ಪತ್ತಿರ ಬೇರೆಯವರ ಕೆಲಸವನ್ನು ಮಾಡಿಕೊಡಿ ಇದನ್ನು ನೋಡಿ ಎಂದು ಹೇಳಬಹುದು, ಅದನ್ನೇ ಅಪರಾಧವೆಂದು ನಾನು ಭಾವಿಸುವುದಿಲ್ಲ ಹೇಳಿರಬಹುದು. ಇನ್ನೂ ಯಾರಾದರೂ ಅವರಿಗೆ ಗೊತ್ತಿರುವ ಆಗಿನ ಸಂಸತ್ ಸದಸ್ಯರಿಗೆ ಈಗಿನ ಮಂತ್ರಿಗಳಿಗೆ ಬರೆದಿರಬಹುದು. ಆ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಅಥವಾ ಆಗಿನ ಮಂತ್ರಿಗೆ ಇನ್ಯಾರಾದರು ಹೋಗಿ ಹೇಳಿರಬಹುದು, ಆಗ ಅವರು ಇಂತಹವರು ಹೇಳಿದ್ದಾರೆ, ಏನೋ ಇರಬಹುದು, ಕನ್‌ಸಿಡರ್ ಮಾಡಿ ಎಂದು ಬರೆದಿರಬಹುದು. ಹಾಗೆ ಬರೆದಿದ್ದೇ ತಾನೆ ಜ್ಯುಡಿಷಿಯಲ್ ಎನ್‌ಕ್ವೈರಿಯಾದದ್ದು. ಈಗ ಇಲ್ಲಿ ಚರ್ಚೆ ನಿಜವಾಗಿ ಮಾಡಬಾರದು. ಏಕೆಂದರೆ ಕೈಯಲ್ಲಿ ಆರ್ಡರ್ ಇದೆ. ಮಂತ್ರಿಗಳು ಒಪ್ಪಿಕೊಳ್ಳುತ್ತಾರೆ. ಈಗ ಏನು ಮಾಡಬೇಕು ಹೇಳಿ. ನಾನು ನಗರಾಭಿವೃದ್ಧಿ ಮಂಡಲಿಯಲ್ಲಿ 26-6-87ರಲ್ಲಿ ನಿವೇಶನ ಮಂಜೂರು ಮಾಡಿದ ಬಗ್ಗೆ ಮಾಹಿತಿ ಬೇಕು ಎನ್ನುವ ಒಂದು ಕಾರಣಕ್ಕಾಗಿ ಪ್ರಶ್ನೆ ಕೇಳಿದಾಗ, ಅವರು ನಿವೇಶನವನ್ನು ಈ ಮೇಲ್ಕಂಡ ದಿನಾಂಕದಲ್ಲಿ ಮಂಜೂರು ಮಾಡಿರತಕ್ಕಂತಹ ಮತ್ತು ಸ್ಟೇಟ್ ಬ್ಯಾಂಕ್‌ಗೆ ದುಡ್ಡು ಕಟ್ಟಿ ಎಂದು ಹೇಳಿರತಕ್ಕಂತಹ ಪತ್ರ ನನ್ನಲ್ಲಿದೆ. ಬಳ್ಳಾರಿ ನಗರ ಸಭೆಯ ಆಡಳಿತ ಮಂಡಲಿ ನಂ.58/87 ದಿನಾಂಕ 26-6-87ರಲ್ಲಿ ನಂಬರ್ 252ರಲ್ಲಿ ರಾಘವೇಂದ್ರನಗರ, ಬಳ್ಳಾರಿ ಇಲ್ಲಿಗೆ ಬಿ. ಅಬ್ದುಲ್ ಹಜೀಜ್ ಎನ್ನುವವರಿಗೆ ಕಳಿಸಿದಂಥ ತಿಳುವಳಿಕೆ ಪತ್ರ ಕೂಡ ನನ್ನ ಹತ್ತಿರ ಇದೆ. ಈಗ ಪ್ರಶ್ನೆ ಎಲ್ಲಿಗೆ ಬರುತ್ತದೆ, City Inprovement Board - Allotment of 175 sites in Raghavendranagar, Bellary. ಇದಕ್ಕೆ ಸಂಬಂಧಪಟ್ಟಂತೆ ದಾಖಲೆಗಳು ಬೇಕೆಂಬ ಕಾರಣಕ್ಕಾಗಿ ನಾನು ಪ್ರಶ್ನೆ ಕೇಳಿದ್ದು. ಜೊತೆಗೆ ನಗರಾಭಿವೃದ್ಧಿ ಮಂಡಲಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಮುಂಗಡ ಹಣವನ್ನು ಕಟ್ಟುವುದಕ್ಕೆ ರಿಯಾಯಿತಿ ಕೊಡಬೇಕೆಂಬ ಕಾರಣಕ್ಕೆ 9-10-86ರಲ್ಲಿ ಮತ್ತೊಂದು ಪ್ರಕಟಣೆಯನ್ನು ಹೊರಡಿಸಿದ್ದಾರೆ. ಅದು ಏನೆಂದರೆ: " ಈ ಬಡಾವಣೆಯಲ್ಲಿ ನಿವೇಶನ ಮಂಜೂರಾತಿಗೆ ಅರ್ಜಿ ಸಲ್ಲಿಸಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಮುಂಗಡ ಠೇವಣಿ ಹಣವನ್ನು ಬ್ಯಾಂಕ್‌ನಲ್ಲಿ ಕಟ್ಟಿ ಅರ್ಜಿ ಸಲ್ಲಿಸಬಹುದು. ಇತ್ಯಾದಿ ಎಲ್ಲ ಪ್ರಕ್ರಿಯೆಗಳೂ ಬಂದುವು. ಇಷ್ಟೆಲ್ಲಾ ಮುಗಿದಮೇಲೆ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂತು. ಆ ಕಾಲದಲ್ಲಿ ಇದ್ದಂಥ ಅಡ್ವೊಕೇಟ್ ಜನರಲ್‌ರವರು ಸುಪ್ರೀಂ ಕೋರ್ಟ್‌ನ ತೀರ್ಪಿನ ವಿರುದ್ಧ ಮತ್ತು ಉಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ಸರ್ಕಾರಕ್ಕೆ 3-11-89ರಲ್ಲಿ ಶ್ರೀಮಾನ್ ಶಿವಪ್ಪ ಎನ್ನುವವರು, 9-3-90ರಲ್ಲಿ ಶ್ರೀ ಬಿ.ವಿ.ಆಚಾರ್ಯ ಎನ್ನುವವರು ಸರ್ಕಾರ ಇದನು ಡಿ ನೋಟಿಫೈ ಮಾಡಬಹುದೆಂದು ತೀರ್ಮಾನ ಕೊಟ್ಟರು. ಹಾಗಾದರೆ ಸರ್ಕಾರಕ್ಕೆ ಇವರು ಏನು ಹೇಳುತ್ತಾರೆಂದರೆ

"The decision was taken on the basis of the concurrent opinions furnished by the consecutive Advocate Generals to the effect that there was no legal bar under the Karnataka Urban Development Authorities Act, to denotify the land" ಎಂದು ಹಾಗಾದರೆ ನಮ್ಮ ಅಡ್ವೊಕೇಟ್ ಜನರಲ್‌ರವರು ಎಷ್ಟು ಬುದ್ಧಿವಂತರಿದ್ದಾರೆಂಬುದು ಗೊತ್ತಾಗುತ್ತದೆ. It cannot be done. ನಮ್ಮ ರಾಜ್ಯದಲ್ಲಿ ಮಾನ್ಯ ಮಂತ್ರಿಗಳನ್ನು ಎಷ್ಟರಮಟ್ಟಿಗೆ ದಾರಿತಪ್ಪಿಸುವ ಕೆಲಸವನ್ನು ಮಾಡುತ್ತಾರೆ ಎಂದರೆ, ಇಲ್ಲವೇ ಅವರು ತಪ್ಪು ಮಾಡಿರಬಹುದು ಇಲ್ಲದಿದ್ದರೆ ಇವರು ತಪ್ಪು ಮಾಡಿರಬಹುದು.....

ಶ್ರೀ ಕಾಗೋಡು ತಿಮ್ಮಪ್ಪ:- ಲ್ಯಾಂಡ್ ಅಕ್ವಿಸಿಷನ್ ಆದಮೇಲೆ denotification was done, whether under the Land Acquisition Act or under the Karnataka Urban Development Act?

SRI D.B. CHANDRE GOWDA:- You please enlighten me. According to me, under both the Acts, it cannot be done.

SRI KAGODU THIMMAPPA:- You are arguing a case. I want to know, whether it is your argument that the denotification should not be done under the Land Acquisition Act?

SRI D.B. CHANDRE GOWDA:- I would seek the guidance of the Hon.Minister. Since he has said that both the Advocate Generals has given concurrent opinion I would like to know under what Act and under what provision! According to me under both the Acts, denotification is not permissible. that is the ruling of the Supreme Court After the land was taken possession by the Government-not earlier and denotify the lands in question in case the Government was of the view.. ಈ ಆಫರ್‌ನ್ನು ಕೊಟ್ಟಿದ್ದರು ಎಂದು ಮಾನ್ಯ ರಾಜ್ಯಪಾಲರ ಆಡಳಿತ ಇದ್ದಾಗ ಇಲ್ಲಿ ಸ್ವಲ್ಪ ದಾಖಲೆಗಳು ಸಿಕ್ಕುತ್ತವೆ. ಆ ಕಾಲಕ್ಕೆ ಸುಮಾರು 18 ಎಕರೆ ಜಾಗ. ತಾವು 11 ಎಕರೆ ಎಂದು ಹೇಳಿದಿರಿ. ನನಗೆ ಗೊತ್ತಿಲ್ಲ. subject to corrections ಈ ಭೂಮಿಗಿಂತ 3 ಕಿಲೋಮೀಟರ್ ದೂರದಲ್ಲಿರತಕ್ಕ ಭೂಮಿಯನ್ನು ಮುಫತ್ತಾಗಿ ಕೊಡುತ್ತೇವೆಂದು ಹೇಳಿದ್ದಾರೆ. ಸ್ವಾಮಿ, ನಮ್ಮ ಈ ವಿಧಾನ ಸೌಧದ ಸುತ್ತಮುತ್ತ ಎಷ್ಟು ಜಾಗ ಇರಬಹುದು? ಸುಮಾರು 200 ಎಕರೆ ಜಾಗ ಇರಬಹುದು. ನೀವು 50 ಎಕರೆಯನ್ನು ಇದರಲ್ಲಿ ಕೊಡುವುದಾದರೆ ನಾನು ಇದಕ್ಕೆ ಬದಲಾಗಿ 5 ಸಾವಿರ ಎಕರೆಯನ್ನು ಎಲ್ಲಿಯಾದರೂ ಕೊಡುವುದಕ್ಕೆ ನಾನು ಸಿದ್ಧನಾಗಿದ್ದೇನೆ. ಇದು ವಾದವ್ವೋ? ಇಷ್ಟೆಲ್ಲಾ ಅನಾಪ್ರುತಗಳು ನಡೆದು ಕಡೆಗೆ 25-5-90ಕ್ಕೆ ಅಡ್ವೊಕೇಟ್ ಜನರಲ್‌ರವರು ಕೊಟ್ಟಂಥ ಅಭಿಪ್ರಾಯವನ್ನು ಅಥವಾ ಅವರ ಬುದ್ಧಿವಾದವನ್ನು ಕೇಳಿ ಡಿ ನೋಟಿಫೈ ಮಾಡಿದ್ದೇವೆಂದು ಸರ್ಕಾರದವರು ಹೇಳಿದ್ದಾರೆ. ಇಷ್ಟರಮಟ್ಟಿಗೆ ನಿಮ್ಮ ಸರ್ಕಾರ ನಡೆಯುವುದಾದರೆ ಈ ಸರ್ಕಾರ ತಾನೆ ಏತಕ್ಕೆ ಇರಬೇಕು. ಏತಕ್ಕೆಂದರೆ ಈ ಕೇಸ್ ಇವತ್ತಿನದು ನಿನ್ನೆಯದಲ್ಲ. ಮಂತ್ರಿಗಳು ಹೊಸಬರಿರಬಹುದು. ಕೇಸ್ ಹಳೆಯದು, 1982ನೇ ಇಸವಿಯಿಂದ 1990ನೇ ಇಸವಿವರೆಗೆ ಏನೇನು ನಡೆದಿದೆ, ಯಾವ ಯಾವ ಅಡ್ವೊಕೇಟ್ ಜನರಲ್‌ಗಳು ಏನೇನು ಅಭಿಪ್ರಾಯ ಕೊಟ್ಟಿದ್ದಾರೆ ಎಂದು ಪೂರ್ಣವಾಗಿ ವಿಮರ್ಶೆ ಮಾಡಬೇಕಾಗಿದೆ. ಖಾಸಗಿ ಆಗಿ ಕಾಗದ ಬರೆದಿದ್ದನ್ನು ನೀವು ಹೇಳುತ್ತೀರಿ, ಚಂದ್ರೇಗೌಡರು ಬರೆದಿದ್ದರು, ಪಿ.ಜಿ.ಆರ್.ಸಿಂಧ್ಯ ಬರೆದಿದ್ದರು ಮತ್ತೊಬ್ಬರು ಬರೆದಿದ್ದರು ಎಂದು; ಇಂಥ ಒಂದು ಪೊಲಿಟಿಕಲ್ ಕನ್‌ಸಿಡರೇಷನ್‌ಗೆ ನೀವು ಮಾಡಿದ್ದರೆ ನಾನು ಆ ಪ್ರಶ್ನೆಯನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಸಿದ್ಧವಿಲ್ಲ. ನೀವು ಲೀಗಲ್ ಒಪಿನಿಯನ್ ತೆಗೆದುಕೊಂಡು ಮಾಡಿದ್ದೇನೆ ಎಂದರೆ what is relevant in this House is the legal opinion. Who tendered the legal opinion? If he is Government Advocate General, he should have been warned or he should have been sent back or you should have asked him to look into certain cases. ಏತಕ್ಕೆಂದರೆ, ನಿನ್ನೆ ನಾನು ನೋಡುತ್ತಿದ್ದೆ, ಜಸ್ಟೀಸ್ ಸ್ವಾಮಿಯವರದ್ದು ಒಂದು ತೀರ್ಪು ಇದೆ. ಮತ್ತು ಜಸ್ಟೀಸ್ ಬೋಪಣ್ಣನವರದು ಒಂದು ತೀರ್ಪು ಇದೆ. ಆ ಜಡ್ಜ್‌ಮೆಂಟ್ ಏನು? ಕನ್‌ಕರೆಂಟ್ ಜಡ್ಜ್‌ಮೆಂಟ್ಸ್ ಏನು? ಬಿ.ಡಿ.ಎ.ಗೆ ಬಲ್ಕ್ ಅಲಾಟ್‌ಮೆಂಟ್ ಮಾಡುವುದಕ್ಕೆ ಅವಕಾಶವೇ ಇಲ್ಲವೆಂದು. ಅದೇ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಸಂಪೂರ್ಣ ಅವಕಾಶ ಬಿ.ಡಿ.ಎ.ಗೆ ಇದೆ ಎಂದು ಬರೆಯುತ್ತಾರೆ. They may differ. I don't say that. they are welcome to differ. Advocate General is there to guide a Government on point of law. He can look into all the details. ಆ ಕಾರಣಕ್ಕಾಗಿ ಅವರಿಗೆ ಈ ಅಭಿಪ್ರಾಯವನ್ನು ಹೀಗೆ ಕೊಟ್ಟರೆ ಅಲ್ಲಿ ಮತ್ತೊಂದು "political influence prevented any allotment of sites by the then Ministers of Janata party" ನಾನು ಅದಕ್ಕೆ ಹೇಳಿದೆ, ನಾನು ಕೂಡ ಏನಾದರೂ ಸಂದರ್ಭ ಬಂದರೆ ಮಾನ್ಯ ಮಂತ್ರಿಗಳಿಗೆ ಸ್ವಾಮಿರಾಯರು ಹೇಳಿದ್ದರೆ ದಯವಿಟ್ಟು ಪರಿಶೀಲಿಸಿ ಎಂದು ಕೇಳಬಹುದು, ಅಥವಾ ಸ್ವಾಮಿರಾಯರು ನನ್ನ ಪರವಾಗಿ ಚಂದ್ರೇಗೌಡರು ಹೇಳಿದ್ದಾರೆ

ಎಂದು ಹೇಳಬಹುದು. ಅದು ತಪ್ಪಲ್ಲ. Could it be a part of this? ಸ್ವಾಮಿರಾಯರು ಹೇಳಿದ್ದಾರೆಂದು ಇಲ್ಲಿ ಬರೆದುಬಿಟ್ಟರೆ is that a consideration for taking the decision? ಆದ್ದರಿಂದ ಇಲ್ಲಿ ಏನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆಂದರೆ ಇಷ್ಟೆಲ್ಲ ಶಾಸನಗಳನ್ನು ಮೀರಿ, ನಮ್ಮದು ಸತ್ಯವಂತ ಸರ್ಕಾರ, ಸತ್ಯಹರಿಶ್ಚಂದ್ರರು, ಉಳಿದವರೆಲ್ಲ ಟ್ರಾನ್ಸ್‌ಫರ್‌ನಲ್ಲಿ ದುಡ್ಡುಹೊಡೆದಿದ್ದಾರೆಂದು ಸಭಾನಾಯಕರು ಮಾತನಾಡಿ ಈ ಸಮಾಜದ ಸ್ವಚ್ಛತೆಯ ಬಗ್ಗೆ ಸುಧೀರ್ಘವಾದ ಹೇಳಿಕೆಯನ್ನು ಕೊಟ್ಟರು. ಅದು ಪತ್ರಿಕೆಗಳಲ್ಲಿ ಬಂದಿದೆ. ಜನತಾದಳ ಮತ್ತು ಜನತಾ ಶಾಸಕರು ಸ್ವಲ್ಪ ಹೆಚ್ಚು ಕಡಿಮೆ ಆ ಪದ ಬಳಸಬಹುದೊ ಇಲ್ಲವೋ ಗೊತ್ತಿಲ್ಲ, ಅಯೋಗ್ಯರು ಎನ್ನುವ ಮಟ್ಟಕ್ಕೆ ನಮ್ಮನ್ನು ತಂದು ನಿಲ್ಲಿಸಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅವರು ಆ ರೀತಿ ಏನೂ ಹೇಳಲಿಲ್ಲ. ಆದರೂ ಅವರ ಬಾಯಿಂದ ಹೇಳಿದರೆಂದು ಏತಕ್ಕ ಹೇಳಿಕೊಳ್ಳುತ್ತೀರಿ. ಬೇಕಾದರೆ ತಮ್ಮ ಬಾಯಿಂದ ಹೇಳಿಕೊಳ್ಳಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಹೆಚ್ಚು ಕಡಿಮೆ ಎಂದು ಹೇಳಿದ್ದೇನೆ..

ಶ್ರೀ ಕಾಗೋಡು ತಿಮಪ್ಪ:- ಮುಖ್ಯಮಂತ್ರಿಗಳು ನಿನ್ನೆ ಉತ್ತರ ಹೇಳುವಂಥ ಕಾಲದಲ್ಲಿ ಹೆಚ್ಚು ಕಡಿಮೆ ಅಯೋಗ್ಯರು ಅಂತ ಹೇಳಿದರು ಎಂದು ಹೇಳಿದರು. ಆದರೆ ಆ ರೀತಿ ಯಾವ ಪದವನ್ನು ಬಳಸಲೇ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಸ್ವಾಮಿ, ನಿಮಗೆ ಅನುಕೂಲವಾಗುವಂತೆ ನೀವು ಹೇಳಿಕೊಳ್ಳಿ, ನಾನು ಬೇಡವೆಂದು ಹೇಳುವುದಿಲ್ಲ. ಮಾನ್ಯ ಕಾಗೋಡುತಿಮ್ಮಪ್ಪನವರೇ, ಇಲ್ಲಿ ರಾಜಕೀಯವನ್ನು ಬಿಟ್ಟು ಚರ್ಚೆ ಮಾಡೋಣ. ಇದು ನಿಮಗೂ ಆಗುತ್ತದೆ ನಾಳೆ ನನಗೂ ಆಗುತ್ತದೆ. ನಾವು ಏನು ಅಪರಾಧ ಮಾಡಿದ್ದೇವೆಂದು ನಾವು ಇಲ್ಲಿ ತಾಳಿಕೊಂಡು ಇರಬೇಕು. ಯಾವ ಅಪರಾಧ ಮಾಡಿದ್ದೇವೆಂದು ನಾವು ತಾಳಿಕೊಂಡಿರಬೇಕು. ಇದುವರೆಗೂ ನಾವು ಪ್ರಾಮಾಣಿಕವಾಗಿ ಬದುಕಿದ್ದು ಈ ಹೊರೆಯನ್ನು ಹೊತ್ತುಕೊಳ್ಳುವುದಕ್ಕಾಗಿಯೇ?

ಶ್ರೀ ಕಾಗೋಡು ತಿಮ್ಮಪ್ಪ:- ಯಾರೋ ಮಾಡಿದ ಪಾಪವನ್ನು ನೀವು ಏತಕ್ಕೆ ಹೊತ್ತುಕೊಳ್ಳುವುದಕ್ಕೆ ಹೋಗುತ್ತೀರಿ.

ಶ್ರೀ ಡಿ.ಬಿ. ಚಂದ್ರೇಗೌಡ:- ನೀವು ಹಿಂದಿನ ಸಲ ಬಂದಿದ್ದರಲ್ಲ; ಈಗಲೂ ಬಂದಿದ್ದೀರಿ. ಅಂದರೆ ನೀವು ಇಲ್ಲದಿದ್ದಾಗ ನಿಮಗೆ ಏನು ಬೇಕಾದರೂ ಹೇಳುವುದು, ನೀವು ಬಂದಾಗ ಸರಿಯಾಗಿ ಇಟ್ಟುಕೊಳ್ಳುವುದು ಅಂತೋಲೊ? ಏನಾದರೂ ಒಂದು ನಿಯಮ ಇರಬೇಕಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ನಾನು ಏಕೆ ಹೇಳಿದೆ ಎಂದರೆ ಪ್ರಾಸ್ತಾವಿಕವಾಗಿ ನಾನು ಈ ಚರ್ಚೆಯನ್ನು ಪ್ರಾರಂಭಿಸಿದಾಗ ನನಗೆ ವ್ಯಥೆಯಾಗುತ್ತಿದೆ, ವಿರೋಧ ಪಕ್ಷದ ನಾಯಕರು ಮತ್ತಿತರ ಸ್ನೇಹಿತರು, ಮುಖ್ಯವಾಗಿ ಹೆಗಡೆಯವರು ಈ ಚರ್ಚೆಯ ಕಾಲದಲ್ಲಿ ಇರಬೇಕಾಗಿತ್ತು ಎಂದು ನಾನು ಕಾಡಿ ಕಾಡಿ ಕೇಳಿಕೊಂಡೆ.

ಒಬ್ಬ ಮಾನ್ಯ ಸದಸ್ಯರು:- ಮತ್ತೆ ನೋಟೀಸ್ ಕೊಡಿ, ಮತ್ತೊಮ್ಮೆ ಚರ್ಚೆಯಾಗಲಿ. ಮತ್ತೆ ಮತ್ತೆ ಇದೇ ಚರ್ಚೆ ಆಗಲಿ.

ಶ್ರೀ ಡಿ.ಬಿ. ಚಂದ್ರೇಗೌಡ:- ನಿಮ್ಮ ಅಭಿಪ್ರಾಯ ಹೇಳುವುದಕ್ಕೆ, ನಿಮ್ಮ ಸ್ವಾತಂತ್ರ್ಯಕ್ಕೆ ನಾನು ಅಡ್ಡಿ ಬರುವುದಿಲ್ಲ. ಆದರೆ ಇನ್ನೊಬ್ಬರ ಚಾರಿತ್ರ್ಯಹರಣ ಮಾಡುವಾಗ ನಾವು ಗಾಜಿನ ಮನೆಯಲ್ಲಿದ್ದೇವೆಂಬುದು ತಮಗೆ ನೆನಪಿಗೆ ಬರಬೇಕು. ಎಲ್ಲರಿಗೂ ಸಾರಾಸಗಟು ಹೇಳಿ ಈ ಕೆಲಸ ಮಾಡಬಾರದು. ನೀವು ಬಳ್ಳಾರಿಯಲ್ಲಿ ಮಾಡಿದ್ದೀರಲ್ಲ ಇಂಥ ಕೆಲಸ ಮಾಡಬಾರದು. ಇದೇ ನನ್ನ ಆರೋಪ. ಜುಡಿಶಿಯಲ್ ಎನ್‌ಕ್ವೈರಿ ಮಾಡಿ. ರಾಜೀನಾಮೆ ಕೊಡಿ. ಮುಖ್ಯ ಮಂತ್ರಿಯವರೆಗೆ ರಾಜೀನಾಮೆ ಕೊಟ್ಟರೆ ಸಾಕು. ರಾಷ್ಟ್ರಾಗ್ರ್ಯಂತ ಪ್ರಧಾನ ಮಂತ್ರಿಗಳ ಜಾಗಕ್ಕೆ ರಾಜೀನಾಮೆ ಕೊಟ್ಟದ್ದು ಸಾಕು. ನಾನು ಇಡೀ ರಾಜ್ಯ ಸರ್ಕಾರದ ರಾಜೀನಾಮೆ ಕೊಡಬೇಕೆಂದು ಹೇಳುತ್ತೇನೆ. ಮುಖ್ಯ ಮಂತ್ರಿಯಾಗಿ ಆ ಹೊಣೆಗಾರಿಕೆ ಇಲ್ಲವೇನು? ಇನ್ನೊಬ್ಬರ ಹೊಣೆಗಾರಿಕೆ ಬಗ್ಗೆ ಬೆಳಗಿನಿಂದ ಸಂಜೆಯವರೆಗೆ ಕೇಳುತ್ತಿದ್ದೀರಲ್ಲ, ಈ ಪ್ರಕರಣದಲ್ಲಿ ಯಾರು ರಾಜಿನಾಮೆ ಕೊಡಬೇಕು? ಈ ಕೆಲಸ

ಏನು ನಡೆದಿದೆ, ಇದಕ್ಕೆ ಜುಡಿಶಿಯಲ್ ಎನ್‌ಕ್ವೈಯರಿ ಆಗಿ ತೀರ್ಪು ಆಗಬೇಕಲ್ಲ. ಅಪರಾಧವಾಗಿದೆ ಎಂದು ಮುಖ್ಯ ಮಂತ್ರಿಗಳು ಒಪ್ಪಿಕೊಳ್ಳುತ್ತಾರೆ. ಅಪರಾಧ ಮಾಡಿದವರಿಗೆ ಶಿಕ್ಷೆ ಇಲ್ಲವೆ? ಇನ್ನೊಬ್ಬರಿಗೆ ಬುದ್ಧಿ ಹೇಳುವ ಅಧಿಕಾರಹೊಂದಿದ್ದಾರೆಯೆ? ಇಲ್ಲಿ ಯಾರು ಮಾರಲ್ ಸ್ಪೀಚ್ ಮಾಡಿದರು, ಆ ಮುಖ್ಯ ಮಂತ್ರಿಗಳೇ ಇದಕ್ಕೆ ಉತ್ತರ ಹೇಳಬೇಕು. ತನ್ನ ಸರ್ಕಾರದ ಹೊಣೆಗಾರಿಕೆ ಏನು, ನೀತಿ, ಸಂಯಮ, ಆಡಳಿತದಲ್ಲಿ ಸುಧಾರಣೆ ಅದಕ್ಕೆ ಒಂದು ಸಮಿತಿ, ಇದಕ್ಕೆ ಒಂದು ಸಮಿತಿ ಮಾಡಿದ್ದಾಯಿತು. ಈಗ ಏನು ಇಲ್ಲದೆ ಆರೋಪ ಬಂದಿದೆ. ಇನ್ನೂ ಅನೇಕ ಆರೋಪಗಳು ಬರುತ್ತವೆ. ಬಹಳ ದಿನಗಳು ಏನು ಇಲ್ಲ ಇಷ್ಟರಲ್ಲೇ ಬರುತ್ತವೆ. ಅದಕ್ಕಾಗಿ ಮುಖ್ಯ ಮಂತ್ರಿಗಳಿಂದ ಇದಕ್ಕೆ ನಾನು ಉತ್ತರ ನಿರೀಕ್ಷೆ ಮಾಡಿದ್ದೆ. ಈ ಹಿನ್ನೆಲೆಯಲ್ಲಿ ಸರ್ಕಾರ ರಾಜೀನಾಮೆ ಕೊಡಬೇಕೆಂದು ಕೇಳುತ್ತೇನೆ. I demand the resignation of this Government on this issue if they have the morale which they teach to us using this House. This is my demand.

† ಶ್ರೀ ಹೆಚ್, ಏಕಾಂತಯ್ಯ: (ಚಿತ್ರದುರ್ಗ):– ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ನಮ್ಮ ಪಕ್ಷದ ನಾಯಕರು ಈಗಾಗಲೆ ನಮ್ಮ ನಾಯಕರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಪದೇ ಪದೇ ಅದೇ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೂ ಪ್ರಾಸ್ತಾವಿಕವಾಗಿ ಒಂದೆರಡು ಅಂಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಬಳ್ಳಾರಿ ನಗರಕ್ಕೆ ಸೇರಿದಂತಹ ರಿ ಸರ್ವೆ ನಂಬರ್ 839ಬಿ, 839ಸಿ, 841ಎ, 841ಬಿ.ಗೆ ಸೇರಿದ ಜಮೀನುಗಳನ್ನು ಈ ಹಿಂದಿನ ಬಳ್ಳಾರಿ ನಗರಾಭಿವೃದ್ಧಿ ಮಂಡಳಿಯವರು ತಾವು ರೂಪಿಸಿದಂತಹ ಒಂದು ಯೋಜನೆಗಾಗಿ ಈ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಅದು 1982ನೇ ಇಸವಿಯ ಡಿಸೆಂಬರ್ 9ನೇ ತಾರೀಖಿನ ಒಂದು ನೋಟಿಫಿಕೇಷನ್ ಪ್ರಕಾರ ಸ್ವಾಧೀನಪಡಿಸಿಕೊಂಡಿದ್ದಾರೆ. ಸ್ವಾಧೀನಪಡಿಸಿಕೊಂಡ ಮೇಲೆ ಅನೇಕ ಹಂತಗಳನ್ನು ನಾವು ಇಲ್ಲಿ ವಿಚಾರ ಮಾಡದಿದ್ದರೂ ಸಹ ಮುಖ್ಯವಾಗಿ ಕೆಲವು ಹಂತಗಳನ್ನು ಈ ಚರ್ಚೆಯ ಉದ್ದೇಶದಿಂದ ಜ್ಞಾಪಕದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಈ ಭೂಮಿಯನ್ನು 1969ನೇ ಇಸವಿಯಲ್ಲಿ ಕೇವಲ 30 ಸಾವಿರ ರೂಪಾಯಿಗಳಿಗೆ ಅಂದು ಕೆಲವು ಜನ ಕೊಂಡುಕೊಂಡಿದ್ದರು. ಅಂತಿಮವಾಗಿ ಭೂಸ್ವಾಧೀನಪಡಿಸಿಕೊಂಡ ಮೇಲೆ ಪರಿಹಾರವಾಗಿ ಕೊಟ್ಟಂತಹ ಮೊಬಲಗು ಸುಮಾರು 5 ಲಕ್ಷದ 31 ಸಾವಿರ ರೂಪಾಯಿಗಳು. ಇವತ್ತಿನ ದಿವಸ ಈ ಒಟ್ಟು 17 ಎಕರೆ 74 ಸೆಂಟ್ ಜಮೀನು ಏನಿದೆ, ಇದರ ಅಂದಾಜು ಬೆಲೆ 3 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಇದೆ. ಈ ಅಂಶವನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಈ ಜಮೀನನ್ನು ಸ್ವಾಧೀನಪಡಿಸಿಕೊಂಡ ಮೇಲೆ, ಸ್ವಾಧೀನಪಡಿಸಿಕೊಳ್ಳುವುದಕ್ಕೆ ಪ್ರಯತ್ನಿಸಿದ ಮೇಲೆ ಅನೇಕ ಹಂತದಲ್ಲಿ ಜಮೀನಿನ ಮಾಲೀಕರು ತುಂಬಾ ಪ್ರಭಾವಶಾಲಿಗಳಾಗಿದ್ದುದರಿಂದ ಈ ಒಂದು ಕ್ರಮವನ್ನು ತಡೆಹಿಡಿಯುವುದಕ್ಕೆ ಪ್ರಯತ್ನ ಮಾಡಿದರು. ಆ ಬಗ್ಗೆ 18-8-84ರಲ್ಲಿ ಅಂದಿನ ನಗರಾಭಿವೃದ್ಧಿ ಸಚಿವರ ಮುಂದೆ ಅರ್ಜಿಯನ್ನು ಸಲ್ಲಿಸಿ ತಡೆಯಾಜ್ಞೆ ಪಡೆದರು. ಅದಕ್ಕಿಂತ ಮೊದಲು ಮಾನ್ಯ ನಮ್ಮ ನಾಯಕರು ಹೇಳಿದ ಹಾಗೆ ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಹಾಕಿ ತಡೆಯಾಜ್ಞೆ ಪಡೆದು, ಅದರ ವಿಚಾರಣೆ ನಡೆದು ನಂತರ ವಜಾ ಮಾಡಲಾಯಿತು. ತದನಂತರ ಅಂದಿನ ರೆವಿನ್ಯೂ ಮಂತ್ರಿಗಳ ಮುಂದೆ 1985ನೇ ಇಸವಿ ಜೂನ್‌ನಲ್ಲಿ ಪ್ರಯತ್ನ ಮಾಡಿದರು. ತದನಂತರ ಖಾರ್ಗೆಯವರು ಹೇಳಿದಹಾಗೆ ಆ ನಗರಾಭಿವೃದ್ಧಿ ಸಚಿವರ ಮುಂದೆ ಸಹ ಪುನಃ ಪ್ರಯತ್ನ ಮಾಡಿದರು. ಆ ಎಲ್ಲ ಪ್ರಯತ್ನದಲ್ಲೂ ವಿಫಲರಾದರು. ತಡೆಯಾಜ್ಞೆಗಳು ವಜಾ ಆದವು. ಭೂಸ್ವಾಧೀನಾಧಿಕಾರಿಗಳು ಅಂತಿಮವಾಗಿ 24-9-1986ರಲ್ಲಿ ಒಂದು ಅವಾರ್ಡ್ ಪಾಸ್ ಮಾಡಿದರು. 30-9-1986ರಲ್ಲಿ 5 ಲಕ್ಷ 31 ಸಾವಿರ ರೂಪಾಯಿಗಳನ್ನು ಪರಿಹಾರವಾಗಿ ಮಾಲೀಕರಿಗೆ ಕೊಟ್ಟರು. ಬಹು ಮುಖ್ಯವಾದ ಘಟನೆ 9-10-1986ರಲ್ಲಿ ನಡೆಯಿತು. ಅವತ್ತಿನ ದಿವಸ ಆ ಭೂಮಿಯನ್ನು ಸರ್ಕಾರದವರು ಸ್ವಾಧೀನಪಡಿಸಿಕೊಂಡರು. ಸನ್ಮಾನ್ಯ ಅಧ್ಯಕ್ಷಿಣಿಯವರೆ, ಸ್ವಾಧೀನಪಡಿಸಿಕೊಂಡಮೇಲೂ ಸಹ ಈ ಪ್ರಯತ್ನ ಸಂಬಂಧಪಟ್ಟ ಮಾಲೀಕರಿಂದ ನಡೆಯಿತು. ಯಾರ ಮುಂದೆ ನಡೆಯಿತು? ಮೊಟ್ಟ ಮೊದಲನೆಯದಾಗಿ ರಾಜ್ಯಪಾಲರ ಆಡಳಿತ ಇದ್ದಾಗ ಪುನಃ ಈ ಪ್ರಕ್ರಿಯೆ ಪ್ರಾರಂಭ ಆಯಿತು.

ಆದಾದಮೇಲೆ ಇಂದಿನ ನಗರಾಭಿವೃದ್ಧಿ ಸಚಿವರ ಮುಂದೆ ಆಯಿತು. ಈ ಹಿಂದೆ ಸನ್ಮಾನ್ಯ ಮಂತ್ರಿಗಳು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಹಿರಿಯ ಸದಸ್ಯರಾದ ಖರ್ಗೆಯವರು ಒಂದು ಮಾತನ್ನು ಹೇಳಿದರು. ಮಂತ್ರಿಗಳೂ ಕೂಡ ಈ ಮಾತನ್ನು ಹೇಳಿದ್ದಾರೆ. ಈ ವಿಚಾರವನ್ನು ತಮ್ಮ ಗಮನಕ್ಕೆ ತಂದಾಗ ಅವರು ಉತ್ತರವಾಗಿ ಒಂದು ಹೇಳಿಕೆ ಕೊಟ್ಟಿದ್ದಾರೆ. ದಿನಾಂಕ 3-7-90ರಲ್ಲಿ ಮಾನ್ಯ ಸಚಿವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಅದರಲ್ಲಿ ಅವರು ಕೆಲವು ಹೊಸ ವಿಚಾರಗಳನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಏನು ಪ್ರಸ್ತಾಪ ಮಾಡಿದ್ದಾರೆ? ಈ ಭೂಮಿ ಏನಿದೆ ಇದನ್ನು ನಾನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾನೂನಿನನ್ವಯ ವಿಧಿ 19 ಉಪವಿಧಿಯ 7ರ ಪ್ರಕಾರ ಡೀನೋಟಿಫೈ ಮಾಡಿದ್ದೇನೆ ಎಂದು ಹೇಳಿದ್ದಾರೆ. ಅದಕ್ಕಿಂತ ಮುಂಚೆ ಕೆಲವು ಮಾತುಗಳನ್ನು ಹೇಳಿದ್ದಾರೆ. 3-11-89ರಲ್ಲಿ ಮತ್ತು 9-3-90ರಲ್ಲಿ ನಾನು ಅಂದರೆ ಸರ್ಕಾರ ಆಗ ಇದ್ದಂಥ ಅಡ್ವೋಕೇಟ್ ಜನರಲ್ ಅವರ ಅಭಿಪ್ರಾಯವನ್ನು ಎರಡು ಸಲ ಪಡೆದು ಈ ರೀತಿಯಾಗಿ ಡೀ ನೋಟಿಫೈ ಮಾಡಿದ್ದೇನೆ ಎಂದು ಹೇಳಿದ್ದಾರೆ. ಈಗ ಪ್ರಶ್ನೆ ನಮ್ಮ ಮುಂದೆ ಇರುವುದು ಇಷ್ಟೆ. ಈ ಹಿಂದೆ ಇಬ್ಬರು ನಗರಾಭಿವೃದ್ಧಿ ಸಚಿವರ ಹತ್ತಿರ ಇವರು ಅರ್ಜಿಗಳನ್ನು ಸಲ್ಲಿಸಿದ್ದರು. ಅವರು ತಡೆಯಾಜ್ಞೆಗಳನ್ನು ಕೊಟ್ಟಿದ್ದರು. ಅವು ವಜಾ ಆಯಿತು. ಅದೇ ರೀತಿಯಾಗಿ ಅಂದು ಇದ್ದಂಥ ರೆವಿನ್ಯೂ ಮಂತ್ರಿಗಳ ಮುಂದೆ ಸಹ ....

SRI A.B. JAKANUR:- The possession was handed over to the authority or not?

SRI P.G.R. SINDHYA:- Sites were made and distributed.

ಶ್ರೀ ಎಚ್. ಏಕಾಂತಯ್ಯ:- ಅದಕ್ಕೆ ಹೇಳುತ್ತೇನೆ. ಮುಖ್ಯವಾಗಿ ಇದರಲ್ಲಿ ಗಮನಿಸಬೇಕಾದುದು ಎಂದರೆ ಹಿಂದಿನ ಇಬ್ಬರು ನಗರಾಭಿವೃದ್ಧಿ ಸಚಿವರು, ಹಿಂದಿನ ರೆವಿನ್ಯೂ ಮಂತ್ರಿಗಳು ತಡೆಯಾಜ್ಞೆ ಕೊಟ್ಟಮೇಲೆ ಕಡತಗಳನ್ನು ಸಂಬಂಧಪಟ್ಟ ಕಾನೂನು ಇಲಾಖೆಯಿಂದ ಏನಾದರೂ ಅಭಿಪ್ರಾಯ ಪಡೆದು ಕಳುಹಿಸಿದ್ದಾರಾ? ಕಾನೂನು ಇಲಾಖೆಯಿಂದ ಅಭಿಪ್ರಾಯ ಪಡೆದಿರಾ? ಅಥವಾ ಅಂದು ಇದ್ದಂಥ ಅಡ್ವೋಕೇಟ್ ಜನರಲ್ ಅಭಿಪ್ರಾಯ ಪಡೆದಿದ್ದರಾ? ಪಡೆದಿದ್ದರೆ ಯಾವ ವಿಚಾರವಾಗಿ ಪಡೆದಿದ್ದರು? ತದನಂತರ ಬಂದಂಥ ಸನ್ಮಾನ್ಯ ಸಚಿವರಾಗಲೀ ಅಥವಾ ರಾಜ್ಯಪಾಲರ ಆಡಳಿತದಲ್ಲಿನ ಅಧಿಕಾರಿಗಳಾಗಲೀ ಅವರು ಸಂಬಂಧಪಟ್ಟ ಅಡ್ವೋಕೇಟ್ ಜನರಲ್‌ರವರಿಂದ ಅಭಿಪ್ರಾಯ ಪಡೆದಿದ್ದರೆ? ಪಡೆದಿದ್ದರೆ ಯಾವ ವಿಚಾರವಾಗಿ ಪಡೆದಿದ್ದರು ಎಂಬುದು ಮುಖ್ಯವಾದ ಪ್ರಶ್ನೆ. ಈ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕಿಂತ ಮುಂಚೆ ಅನೇಕ ವಿಧವಾದಂಥ ಆದೇಶಗಳು ಏನು ಆದವು, ನಾವು ಅದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅಂತಿಮವಾಗಿ ಆ ಎಲ್ಲ ಅಭಿಪ್ರಾಯಗಳನ್ನು ಪರಿಗಣಿಸಿ ಅಂದಿದ್ದ ಸರ್ಕಾರ ಅಥವಾ ಸಚಿವರು ಈ ತಡೆಯಾಜ್ಞೆಗಳನ್ನು ವಜಾ ಮಾಡಿ ಅವರ ಅರ್ಜಿಯನ್ನು ವಜಾ ಮಾಡಿದ್ದಾರೆ. ಅಂತಿಮವಾಗಿ ಭೂಸ್ವಾಧೀನವಾಗಿದೆ. ಈ ವಿಚಾರವಾಗಿ ಮಾನ್ಯ ನಗರಾಭಿವೃದ್ಧಿ ಸಚಿವರು ತಮ್ಮ ಹೇಳಿಕೆಯಲ್ಲಿ ಒಂದು ವಿಶೇಷವಾದ ಮಾತನ್ನು ಹೇಳಿದ್ದಾರೆ. ಸ್ವಾಭಾವಿಕವಾಗಿ ಏನಾದರು ತಪ್ಪು ಮಾಡಿದ್ದೀರಿ ಎಂದಾಕ್ಷಣ ನೀವೂ ಮಾಡಿದ್ದೀರಿ ಎಂದು ಹೇಳುತ್ತಾರೆ. ಇಲ್ಲಿ ಅದಲ್ಲ. ಇದು ಬರವಣಿಗೆಯಲ್ಲಿದೆ. ಅದರಲ್ಲಿ ಏನು ಹೇಳಿದ್ದೀರಿ ಎಂಬುದನ್ನು ನೋವಿನಿಂದ ಹೇಳುತ್ತಿದ್ದೇನೆ. ತಮ್ಮ ತಪ್ಪನ್ನು ಮುಚ್ಚಿಕೊಳ್ಳಲು ಎಂಥ ಅಪವಾದವನ್ನೂ ಸಹ ಬೇರೆಯವರ ಮೇಲೆ ಮಾಡುವುದಕ್ಕೆ ಅಥವಾ ಹೇಳುವುದಕ್ಕೆ ಹಿಂಜರಿಯುವುದಿಲ್ಲ ಎಂಬುದಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಇಲ್ಲ.

ಅವರೇ ಒಂದು ಮಾತನ್ನು ಹೇಳಿದ್ದಾರೆ. ಅವರ ಹೇಳಿಕೆ ಎರಡನೇ ಪುಟದಲ್ಲಿದೆ.

"The then Minister in-charge of Bellary District Sri M.P.Prakash, apart from Sri Madhu Dhandavate, M.P, now Union Finance Minister had also written letters to the Government to denotify the lands."

ಇದು ನಿಜವೇ? ಈ ಒಂದು ವಿಷಯ ನಿಜ ಅಲ್ಲವೆಂದು ನಾನು ರುಜುವಾತು ಮಾಡಿದರೆ, ಮಾನ್ಯ ಮಂತ್ರಿಗಳು ಏನು ಇದ್ದಾರೆ, ಅವರು ರಾಜೀನಾಮೆ ಕೊಡುವುದಕ್ಕೆ ತಯಾರಾಗಿದ್ದಾರಾ? ಬಹಳ ಗಂಭೀರವಾದ ಆರೋಪವನ್ನು ನಾನು ಮಾಡುತ್ತಿದ್ದೇನೆ. ಕೆಲವು ಪದಗಳನ್ನು ತಮಗೆ ಬೇಕಾದಂತೆ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯ ಇಲ್ಲ. ಅವರು ಹೇಳಿದ ಮಾತನ್ನು ಮತ್ತೊಂದು ಸಾರಿ ಹೇಳುತ್ತೇನೆ :

"The then Minister in-charge of Bellary District Sri M.P.Prakash, apart from Sri Madhu Dhandavate, M.P., now Union Finance Minister had also written letters to the Government to denotify the lands."

I emphasise the words "to denotify the lands." Is it there in the letter? Now I may be permitted to read the statement made by the Hon.Minister in the other House for this purpose.

(Interruption)

SRI MALLIKARJUNA M. KHARGE: How can you discuss Council proceedings here.

ಶ್ರೀ ಎಚ್. ಏಕಾಂತಯ್ಯ:- ನನಗೆ ನಿಮ್ಮಷ್ಟು ಅನುಭವ ಇಲ್ಲದಿದ್ದರೂ ಸ್ವಲ್ಪ ಅನುಭವ ಇದೆ.

ಉಪಸಭಾಪತಿ: ಸ್ಟೇಟ್‌ಮೆಂಟ್‌ನ್ನು ಸಂಕ್ಷಿಪ್ತವಾಗಿ ಕೇಳಿ. ಅದನ್ನು ಓದುವುದು ಬೇಡ.

ಶ್ರೀ ಡಿ.ಬಿ. ಚಂದ್ರೇಗೌಡ:- ಅದೇ ಮಂತ್ರಿಗಳು, ಅದೇ ಕಾಗದ, ಅದೇ ಇಲಾಖೆ,

(Interruption)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:- ಅದೇ ಮಂತ್ರಿಗಳು, ಅದೇ ಸದಸ್ಯರು ಆದರೂ ಅವಕಾಶ ಬೇರೆ ಬೇರೆಯಾಗಿರುತ್ತದೆ. ಒಳಗಡೆ ಬೇರೆ ಇರುತ್ತದೆ. ಹೊರಗಡೆ ಬೇರೆ ಇರುತ್ತದೆ.

(ಗೊಂದಲ)

ಶ್ರೀ ಎಚ್. ಏಕಾಂತಯ್ಯ:- ಆ ಮನೆಯ ಹೇಳಿಕೆಯನ್ನು ಈ ಮನೆಯಲ್ಲಿ ಪ್ರಸ್ತಾಪ ಮಾಡಲಿಕ್ಕೆ ನಮಗೆ ಅಧಿಕಾರ ಇದೆ.

ಉಪಾಧ್ಯಕ್ಷರು:- ಸಂಕ್ಷಿಪ್ತವಾಗಿ ಹೇಳುವುದಾದರೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಎಚ್. ಏಕಾಂತಯ್ಯ:- ಆ ಒಂದು ಹೇಳಿಕೆಯಲ್ಲಿ ಪ್ರೊ: ಮಧು ದಂಡವತೆಯವರ ಪತ್ರ ದಿನಾಂಕ 7-6-85ರಲ್ಲಿ ಒಂದು ಪತ್ರ ಬರೆದಿರುತ್ತಾರೆ.

"My dear Lakshmisagarji, this is to bring to your notice the problem that former M.P. Sri D.Pullaiah, who has got a plot of land along with others..."

SRI MALLIKARJUNA M. KARGE:- I want a ruling whether the proceedings of the other House can be read and referred to here, because this is a calling attention statement. Whatever reply he has give, the same statement he is giving. If that can be read...?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:- ತಮಗೆ ಗೊತ್ತಾಗಲಿ ಅಂತ ಹೇಳುತ್ತಿದ್ದೇನೆ.

ಶ್ರೀ ಎಚ್. ಏಕಾಂತಯ್ಯ:- ನಿಮ್ಮಂಥ ಹಿರಿಯ ಸದಸ್ಯರಿಗೆ ಗೊತ್ತಾಗದಿದ್ದರೆ ನಮ್ಮಂತ ಹೊಸ ಸದಸ್ಯರಿಗೆ ಗೊತ್ತಾಗುತ್ತದೆಯೋ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:- ನೀವು ಹಿರಿಯರು ಇದ್ದರೂ ನಮಗೆ ನಿಮ್ಮಷ್ಟು ಅನುಭವ ಇರುವುದಿಲ್ಲ.

ಶ್ರೀ ಎಚ್. ಏಕಾಂತಯ್ಯ:- ಯಾರ ವಿರುದ್ಧವಾಗಲಿ ವೈಯುಕ್ತಿಕ ಆರೋಪವನ್ನು ಮಾಡುವಂತಹ ಭಾವನೆ ನಮಗೆ ಇಲ್ಲ. ವಿಧಾನ ಪರಿಷತ್ತಿನಲ್ಲಿ ಮಾಡಿದಂತಹ ಹೇಳಿಕೆಯನ್ನು ಇಲ್ಲಿ ಉದಾಹರಿಸುತ್ತೇನೆ. ಉಪಾಧ್ಯಕ್ಷರು ಕಾನೂನು ಪ್ರಕಾರ ಇದನ್ನು ಓದಬೇಕಾಗಿಲ್ಲವೆಂದರೆ ಇದನ್ನು ಇಲ್ಲಿಗೇ ನಿಲ್ಲಿಸಿಬಿಡುತ್ತೇನೆ.

ಉಪಾಧ್ಯಕ್ಷರು: ರೆಲೆವೆಂಟ್ ಪೋರ್ಶನ್ ಮಾತ್ರ ಓದಿ. ಬಾಕಿ ಎಲ್ಲವನ್ನೂ ಓದಬೇಡಿ. Let it not be a long one.

Sri H. Ekanthaiah:-

> "....and the lands are being acquired by the C.I.T.B. According to the rules the R.T.O has been given due notice so that the owners of the land can file objection. It seems this was not done. Will you kindly ask the concerned authorities to look into the problems and do the needful. Yours sincerely, Madhu Dandavate."

So, I would like to know from the Hon.Minister whether there was any letter on this from Sri Madhu Dandavate asking him to recommend to denotify the lands. ನಾನು ಮತ್ತೊಂದು ಸಾರಿ ಹೇಳುತ್ತಿದ್ದೇನೆ. ಈ ಪತ್ರ ಬಂದಿದ್ದು 7-6-85ರಲ್ಲಿ. This is not after taking possession of the land. This is not subsequent to the acquisition proceedings. This is earlier to the passing of final award by the concerned Land Acquisition Officer. ಆದ್ದರಿಂದ ಈ ಮಾತನ್ನು ಮಾನ್ಯ ಮಂತ್ರಿಗಳು ಏನು ಹೇಳಿದ್ದಾರೆ, ಅಂದರೆ ಹಿಂದಿನ ಮಂತ್ರಿಯವರಾದ ಪ್ರಕಾಶ್‌ರವರೆ ಆಗಲಿ ಅಥವಾ ಮಧುದಂಡವತೆಯವರೆ ಆಗಲಿ ಈ ಬಗ್ಗೆ ಪತ್ರವನ್ನು ಬರೆದಿದ್ದಾರೆಂಬ ಮಾತನ್ನು ಏನು ಹೇಳಿದ್ದಾರೆ. ಇದು ದುರುದ್ದೇಶ ಪೂರಿತವಾದದ್ದು. ತಾವು ಮಾಡಿದಂತಹ ತಪ್ಪನ್ನು ಇನ್ನೊಬ್ಬರ ಮೇಲೆ ಹೇಳುವುದರ ಮುಖಾಂತರ ಅದನ್ನು ಸಮರ್ಥನೆ ಮಾಡಿಕೊಳ್ಳುವ ಪ್ರವೃತ್ತಿಯನ್ನು ಇದರಲ್ಲಿ ಕಾಣುತ್ತಿದ್ದೇವೆ. ಅದೇ ರೀತಿಯಾಗಿ ಮಾನ್ಯ ಪ್ರಕಾಶ್‌ರವರು ಸಹ ಪತ್ರವನ್ನು ಬರೆದಿದ್ದಾರೆ. ಆ ಪತ್ರವನ್ನು 27-6-86ರಲ್ಲಿ ಬರೆದಿದ್ದಾರೆ. This is also earlier to the passing of the award, earlier to the taking possession of the land. This land was taken on 9.10.86. The letter was written on 27.6.86.

> "The Hon.Minister may kindly get this request examined in detail and issue necessary directions to the concerned to drop the proceedings of the acquisition of the land proposed by the City Improvement Trust Board, Bellary." ಎಂದು ಬರೆದಿದ್ದಾರೆ. ನಾನು ಆ ಪತ್ರವನ್ನು ಬರೆದಿಲ್ಲವೆಂಬ ಮಾತನ್ನು ಹೇಳುತ್ತಿಲ್ಲ. ಆದರೆ ಆ ಪತ್ರವನ್ನು ಬರೆದಂತಹ ಉದ್ದೇಶ, ಆ ಪತ್ರವನ್ನು ಬರೆದಂತಹ ಕಾಲ ಏನಿದೆ, ಅದು ತದನಂತರ ಅಲ್ಲ, 9-10-86ರಲ್ಲಿ ಏನು ಸ್ವಾಧೀನಕ್ಕೆ ತೆಗೆದುಕೊಂಡರೂ, ಆ ಸ್ವಾಧೀನವನ್ನು ತೆಗೆದುಕೊಳ್ಳುವುಕ್ಕಿಂತ ಮುಂಚೆ ಏನು ಸರ್ಕಾರಕ್ಕೆ ಅಧಿಕಾರವಿತ್ತು. ಅಂದರೆ, ಯಾವತ್ತೂ ಬೇಕಾದರು ಫೈನಲ್ ನೋಟೀಸ್ ಆಗುವುದಕ್ಕಿಂತ ಮುಂಚೆ ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಯಾವುದೇ ಭೂಮಿಯನ್ನು ಸಹ ಕೈಬಿಡಲಿಕ್ಕೆ ಸರ್ಕಾರಕ್ಕೆ ಅಧಿಕಾರವಿದೆ. ಆದರೆ ಸರ್ಕಾರಕ್ಕೆ ಅಧಿಕಾರ ಇಲ್ಲದಂತಹ ಸಂದರ್ಭದಲ್ಲಿ ಇವರು ಏನು ಮಾಡಿದ್ದಾರೆ, ಅದನ್ನು ಮಾಡಲಿಕ್ಕೆ ಮಾನ್ಯ ಪ್ರಕಾಶ್‌ರವರೆ ಆಗಲಿ, ಮಾನ್ಯ ಮಧು ದಂಡವತೆಯವರೆ ಆಗಲೀ, ಈ ಮಾತನ್ನು ಹೇಳಿಲ್ಲ.

ಅವರು ಏನು ಈ ಹೇಳಿಕೆಯಲ್ಲಿ ಏನು ಹೇಳಿದ್ದಾರೆ, ಅದು ಸತ್ಯಕ್ಕೆ ದೂರವಾದುದೆಂದು ನಾನು ಹೇಳುತ್ತೇನೆ. ಮತ್ತು ಈ ರೀತಿಯಾಗಿ.......

ಶ್ರೀ ಕರಿಯಣ್ಣ:- ಮಾನ್ಯ ಅಧ್ಯಕ್ಷರೆ, ಈ ಕಾಗದಗಳನ್ನು ಅವರುಗಳು ಬರೆದಿದ್ದಾರೆ ಆದರೂ ಇದು ಸತ್ಯಕ್ಕೆ ದೂರವಾದುದೆಂದು ಹೇಳಿ ಅವರೇ ಅದನ್ನು ಓದುತ್ತಿದ್ದಾರೆ. ಮಧುದಂಡವತೆಯವರು ಬರೆದಿದ್ದಾರೆ, ಪ್ರಕಾಶ್‌ರವರು ಅದನ್ನು ಬಿಟ್ಟುಕೊಡಬೇಕೆಂದು ಹೇಳಿ ಬರೆದಿದ್ದಾರೆ. ಏಕೆ ಹೀಗೆ ಮಾಡುತ್ತೀರಿ, ನಾವು ಹೊಸಬರು ಬಂದಿದ್ದೇವೆ, ತಪ್ಪಿದ್ದರೆ ಹೇಳಿ ಯಾರು ಬೇಡ ಅನ್ನುತ್ತಾರೆ. ನೀವು ಜೋರಾಗಿ ಗಟರಿಕೆ ಹಾಕಿ, ನಾವು ಕುಳಿತುಕೊಳ್ಳಲಿ ಎಂದು ಹೆದರಿಸಿ ಬಿಡುತ್ತೀರಿ. ನಾನು ಏಕೆ ಹೇಳುತ್ತೇನೆಂದರೆ ಅವರು ಹಿರಿಯರು ಇದ್ದಾರೆ. ಮಂತ್ರಿಗಳಾಗಿದ್ದಾರೆ. ಅವರು ಜಮೀನು ಬಿಟ್ಟು ಕೊಡಿ ಎಂದು 85-86ರಲ್ಲೂ ಬರೆದಿದ್ದಾರೆ. ಅದು ಸತ್ಯಕ್ಕೆ ದೂರವಾದುದೆಂದು, ಅವರೇ ಕಾಗದವನ್ನು ಓದುತ್ತಿದ್ದಾರೆ. ಆದ್ದರಿಂದ ಈ ಕಾಗದಗಳು ಸರಿ ಎಂದು ಅವರು ಒಪ್ಪಿಕೊಳ್ಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನೀವು ಹೇಳಿದ್ದು ಸತ್ಯ, ಅದನ್ನು ನಾವು ಒಪ್ಪಿದ್ದೇವೆ.

ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಮಿತ್ರರಾದ ಕರಿಯಣ್ಣನವರಿಗೆ ಉತ್ತರ ಕೊಡಬೇಕಾದ್ದು ಅಗತ್ಯವಿಲ್ಲವೆಂದು ನಾನು ಭಾವಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ತಾಳ್ಮೆ ಕಳೆದುಕೊಳ್ಳಬೇಡಿ.

ಶ್ರಿ ಹೆಚ್. ಏಕಾಂತಯ್ಯ:- ನಾವು ಹೇಳುವುದು ತಪ್ಪಲ್ಲ, ನೀವು ಹೇಳುವುದು ತಪ್ಪಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಿಮ್ಮ ಬಗ್ಗೆ ನಮಗೆ ಬಹಳ ಗೌರವವಿದೆ.

ಶ್ರೀ ಹೆಚ್. ಏಕಾಂತಯ್ಯ:- 9-10-86ಕ್ಕಿಂತ ಮುಂಚೆ ಸರ್ಕಾರಕ್ಕೆ ಈ ಪತ್ರವನ್ನು ಬರೆದಿಲ್ಲ, 9-10-86ಕ್ಕೆ ಮುಂಚೆ ಯಾವಾಗ ಸರ್ಕಾರಕ್ಕೆ ಈ ಜಮೀನು ಕೈಬಿಡುವಂತಹ ಅಧಿಕಾರ. ಇತ್ತೋ ಆಗ ಬರೆದಿದ್ದಾರೆ. ಅದನ್ನು ಕೈಬಿಡಬಹುದಾಗಿತ್ತು. ಅದನ್ನು ಮಾಡಲಿಲ್ಲ, ಯಾವಾಗ ಒಂದು ಸಾರಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಆ ಸ್ವಾಧೀನ ಪಡಿಸಿಕೊಂಡ ಭೂಮಿಯನ್ನು ಜಾಗಗಳಾಗಿ ಪರಿವರ್ತಿಸಿ, ಆ ನಿವೇಶನಗಳನ್ನು ಬೇರೆಯವರಿಗೆ ಕೊಡಬೇಕೆಂದು ತೀರ್ಮಾನ ಮಾಡಿ ಅರ್ಜಿಯನ್ನು ಕರೆದು ಹಣವನ್ನು ಕಟ್ಟಿಸಿಕೊಂಡು, ಕೊಡಬೇಕು ಎಂಬ ಮಾತನ್ನು ಅವರು ಹೇಳಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಇದಾದ ಮೇಲೆ ಇನ್ನೊಂದು ಮಾತನ್ನು ಹೇಳುತ್ತೇನೆ. ನಾನು ಡಿನೋಟಿಫಿಕೇಷನ್ ಕ್ಯಾನ್ಸಲ್ ಮಾಡಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಏಕೆ ಮಾಡಿದ್ದೀರಿ, ಅದಕ್ಕೆ ಅಗತ್ಯವಿರಲಿಲ್ಲವಲ್ಲಾ?

ಶ್ರೀ ಕಾಗೋಡು ತಿಮ್ಮಪ್ಪ:- ನೀವು ಒತ್ತಾಯ ಮಾಡುವುದರಿಂದ ಮಾಡಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ:- ನಾವು ಒತ್ತಾಯ ಮಾಡುವುದರಿಂದ ತಾವು ಮಾಡಿರುವುದೆಂದು ಹೇಳುವುದಾದರೆ ನಾವು ಒತ್ತಾಯ ಮಾಡಿದ್ದೆಲ್ಲಾ ತಾವು ಮಾಡುತ್ತೀರಾ?

ಶ್ರೀ ಕೆ.ಎಸ್. ಈಶ್ವರಪ್ಪ:- ಇಡೀ ಸರ್ಕಾರ ರಾಜೀನಾಮೆ ಕೊಡಬೇಕೆಂದು ಈಗ ವಿರೋಧ ಪಕ್ಷದ ನಾಯಕರು ಒತ್ತಾಯ ಮಾಡಿದರು. ಅದನ್ನು ಕನ್ಸಿಡರ್ ಮಾಡುತ್ತೀರಾ ನೋಡಿ.

3.25 ಪಿ.ಎಂ.

ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಕಾಗೋಡು ತಿಮ್ಮಪ್ಪನವರು ಏನು ಹೇಳಿದ್ದಾರೆ, ಅದನ್ನು ನಾವು ತಪ್ಪಾಗಿ ಭಾವಿಸುವುದಿಲ್ಲ. ನಾವು ಸರಿಯಾದುದ್ದನ್ನು ಹೇಳಿದಾಗ ನೀವು ಒಪ್ಪಿಕೊಳ್ಳುತ್ತೀರೆನ್ನುವ ಸೌಜನ್ಯ ಇದೆ. ಹಾಗಾದರೆ ಇದು ತಮಗೆ ಮೊದಲು ಗೊತ್ತಿರಲಿಲ್ಲವೆ? ನಾವು ಒತ್ತಾಯ ಮಾಡಿದ್ದರಿಂದ ನಾವು ಕಾನೂನಿಗೆ ವಿರುದ್ಧವಾಗಿ ಇದ್ದೇವೆಂದು ತಾವು ಒಪ್ಪಿಕೊಂಡಿದ್ದಿರಾ? ಅದನ್ನು ತಾವು ಹೇಳಿಲ್ಲ, ಇವತ್ತು ಸಹ ಮಾನ್ಯ ಕಾಗೋಡು ತಿಮ್ಮಪ್ಪನವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಮಾನ್ಯ ಮಂತ್ರಿಗಳ ಹೇಳಿಕೆಯಾಗಲಿ, ಅವರ ಅಭಿಪ್ರಾಯವಾಗಲಿ, ಇದು ಕಾನೂನು ಪ್ರಕಾರ ವಿರುದ್ಧವಾಗಿತ್ತು. ಏನೋ ನಾನು ತಪ್ಪು ಮಾಡಿದ್ದೇನೆ. ಅದಕ್ಕಾಗಿ ಹಿಂದಕ್ಕೆ ತೆಗೆದುಕೊಂಡಿದ್ದೇನೆಂಬ ಮಾತನ್ನು ಹೇಳುತ್ತಿಲ್ಲ. ಆ ಮಾತನ್ನು ಹೇಳಿದ್ದರೆ ನಾನು ಒಪ್ಪುತ್ತೇನೆ. ಹಾಗಿದ್ದರೆ ಹಿಂದಿನ ಅಡ್ವೊಕೇಟ್

ಜನರಲ್ ಅವರು ಕಾನೂನು ಪ್ರಕಾರ ಕೊಟ್ಟ ಅಭಿಪ್ರಾಯ ಸರಿಯಿಲ್ಲವೇ? ನಾವು ಹೇಳುವುದು ಸರಿಯಾಗಿದೆಯೋ ಈಗ? ಕಾಗೋಡು ತಿಮ್ಮಪ್ಪನವರು ಇದರ ಬಗ್ಗೆ ಹೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೇ, ಪ್ರತಿ ಸರ್ಕಾರಕ್ಕೂ ಅಡ್ವೊಕೇಟ್ ಜನರಲ್ ಇದ್ದೇ ಇರುತ್ತಾರೆ. ನಮ್ಮ ಸರ್ಕಾರಕ್ಕೆ ಮೊದಲು ಇದ್ದರು. ಈಗ ಇವರು ಬಂದಿದ್ದಾರೆ. ರಾಜ್ಯಪಾಲರ ಆಡಳಿತದಲ್ಲಿ ಅವರು ಇದ್ದರು, ಈಗ ಇವರು ಇದ್ದಾರೆ. ಇವತ್ತು ಯಾವ ಸರ್ಕಾರ ಆದರೂ ಅವರ ಅಭಿಪ್ರಾಯವನ್ನು ಕೇಳಬೇಕಾಗುತ್ತದೆ. ಸರ್ಕಾರ ಅವರ ಅಭಿಪ್ರಾಯವನ್ನು ಕೇಳಿದೆ. ಆಗ ಅವರ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅವರ ಅಭಿಪ್ರಾಯವನ್ನು ಮಾನ್ಯ ಮಾಡುವುದು, ಬಿಡುವುದು ಸರ್ಕಾರಕ್ಕೆ ಬಿಟ್ಟಿದ್ದು. ಅವರ ಅಭಿಪ್ರಾಯದ ಆಧಾರದ ಮೇಲೆ ಒಂದು ತೀರ್ಮಾನ ಮಾಡಿದ್ದಾರೆ. ಸರ್ಕಾರ ಬದಲಾವಣೆ ಮಾಡುವುದಕ್ಕೆ ಕಾನೂನು ಪ್ರಕಾರ ಅಧಿಕಾರ ಇದ್ದರೆ, ಬದಲಾವಣೆ ಮಾಡುವುದರಲ್ಲಿ ಏನು ಸರ್ಕಾರವನ್ನು ಹಿಡಿಯುವುದಕ್ಕಾಗುವುದಿಲ್ಲ ಅಲ್ಲವೇ?

ಶ್ರೀ ಡಿ.ಬಿ. ಚಂದ್ರೇಗೌಡ:- ರಾಷ್ಟ್ರಪತಿಗಳ ಆಳ್ವಿಕೆ ಕಾಲದಲ್ಲಿ ಅಡ್ವೊಕೇಟ್ ಜನರಲ್‌ರವರು ಎಷ್ಟೆಷ್ಟು ಒಪೀನಿಯನ್ ಕೊಟ್ಟಿದ್ದಾರೋ ಅವನ್ನೆಲ್ಲಾ ತರಿಸಿಕೊಡಿ. ಬಹಳ ಅನುಕೂಲವಾಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ:- ಇವತ್ತಿನ ದಿವಸ ನಾನು ಒಂದು ನೇರವಾದ ತೀರ್ಮಾನಕ್ಕೆ ಬರುತ್ತೇನೆ. ನಾವು ಹೇಳಿದ್ದೇವೆ ಎನ್ನುವ ಕಾರಣಕ್ಕೆ, ಅಥವಾ ನಮ್ಮ ಪಕ್ಷದ ಕೆಲವು ಪ್ರಮುಖರು ಹೇಳಿದರು ಎಂಬ ಕಾರಣದಿಂದ ತಾವು ಮಾಡಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕು. ಅದಕ್ಕಿಂತಲೂ ಹೆಚ್ಚಾಗಿ ಕಾನೂನು ಪ್ರಕಾರ ನನಗೆ ಈಗ ಮನವರಿಕೆಯಾಗಿದೆ, ಇದು ಕಾನೂನಿಗೆ ವಿರುದ್ಧವಾಗಿದ್ದು ನಾನು ಈ ಬಗ್ಗೆ ವರ್ತನೆ ಮಾಡಿದ್ದೇನೆಂದು ತಾವು ಹೇಳಿದರೆ ನಾನು ಒಪ್ಪುತ್ತೇನೆ. ಅದಕ್ಕೆ ಬದಲಾಗಿ ನಾನು ಮಾಡಿದ್ದೇ ಸರಿ, ನೀವು ಅದಕ್ಕೆ ಬೇರೆ ಬೇರೆ ಬಣ್ಣವನ್ನು ಬೇರೆ ಬೇರೆ ರೂಪವನ್ನು ಕೊಡುವುದಾದರೆ ಖಂಡಿತವಾಗಿ ಅದು ಸರಿಯೋ ತಪ್ಪೋ ಎಂದು ನೀವೇ ನಿಮ್ಮ ಮನಸ್ಸಿಗೆ ಕೇಳಬೇಕು. ಇನ್ನೊಂದು ಪ್ರಮುಖವಾದ ಪ್ರಶ್ನೆ ಇದೆ. ಇಂತಹ ವಿಷಯಗಳು ಬಂದರೆ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಬಹಳ ಇಷ್ಟ. ಆದರೂ ನಾನು ಅನಿವಾರ್ಯವಾಗಿ ಹೇಳಲೇಬೇಕಾಗುತ್ತದೆ, ಹೇಳುತ್ತೇನೆ. You will agree with me. "This is incomplete contrast to the manner in which the previous government has been dealing with numerous land scandals which are now a part of history.' ಈ ಮಾತನ್ನು ಮಾನ್ಯ ಮಂತ್ರಿಗಳು ಏನು ಹೇಳಿದ್ದಾರೆ, ಮಾನ್ಯ ಕಾಗೊಡು ತಿಮ್ಮಪ್ಪನವರು ನಿನ್ನೆದಿವಸ ಏನು ಹೇಳಿದರು, ಅದಕ್ಕೆ ತದ್ವಿರುದ್ಧವಾದ ರೀತಿಯಲ್ಲಿ ಏನಾದರು ನಡೆದಿದೆಯೇ? ನಾನು ಒಪ್ಪುವುದು, ಬಿಡುವುದು ಬೇರೆ ಪ್ರಶ್ನೆ. ಯಾವ ಒಂದು ಆಸ್ತಿ 3ಕೋಟಿ ಬೆಲೆಬಾಳುತ್ತದೆ ಅದನ್ನು ಯಾವ ಕಾರಣಕ್ಕೆ 5 ಲಕ್ಷ 31 ಸಾವಿರಕ್ಕೆ ತಾವು ಬೆಲೆ ನಿಗದಿ ಮಾಡಿದ್ದೀರಿ? ತಾವು ಇದಕ್ಕೆ ಹೇಳುತ್ತೀರಿ. ಸರ್ಕಾರಕ್ಕೆ 'The decision was taken on the basis of a concurrent opinion furnished by the consecutive Advocate Generals."

ಎಂದು ಹೇಳಿದ್ದಾರೆ. ಅದಕ್ಕಿಂತಲೂ ಹೆಚ್ಚಾಗಿ ಈ ಸರ್ಕಾರಕ್ಕೆ ನಷ್ಟವಾಗುವುದಿಲ್ಲ, ಅದಕ್ಕೋಸ್ಕರ ನಾವು ಇದನ್ನು ಮಾಡಿದ್ದೇವೆಂಬ ಮಾತನ್ನು ಹೇಳುತ್ತಾರೆ. ಅಂದರೆ ಸರ್ಕಾರಕ್ಕೆ ನಷ್ಟ ಆಗದೇ ಇದ್ದರೆ ತಾವು ಏನು ಬೇಕಾದರೂ ತಮ್ಮಲ್ಲಿರುವ ಅಧಿಕಾರವನ್ನು ಯಾವ ರೀತಿಯಿಂದಲಾದರೂ ಉಪಯೋಗಿಸಬೇಕೇ? ಹಾಗೆ ಉಪಯೋಗಿಸುವುದಕ್ಕೆ ಸಾಧ್ಯವಿಲ್ಲ. ತಮ್ಮಲ್ಲಿ ಏನು ಅಧಿಕಾರ ಇದೆ, ಅದನ್ನು ಹೇಗೆ ಉಪಯೋಗಿಸಬೇಕೆಂದರೆ without any dishonesty. ಇನ್ನೊಬ್ಬರಿಗೆ ತಾವು ಅನ್ಯಾಯವಾಗಿ ಧನಾರ್ಜನೆ ಮಾಡುವ ರೀತಿಯಲ್ಲಿ ಉಪಯೋಗಿಸಬಾರದು. ಈ ಜಾಗ 3 ಕೋಟಿ ರೂಪಾಯಿ ಬೆಲೆ ಬಾಳುತ್ತದೆಂದು ತಮಗೆ ನಿಜವಾಗಿಯೂ ಗೊತ್ತಿದ್ದರೆ 5 ಲಕ್ಷ 31 ಸಾವಿರ ರೂ॰ಗಳನ್ನು ಪಡೆದು ಅವರಿಂದ ಬೇರೆ ಜಮೀನು ಪಡೆಯುವುದರ ಮುಖಾಂತರ ಅವರಿಗೆ ಅನ್ಯಾಯವಾಗಿ ಧನಾರ್ಜನೆ ಆಗಿಲ್ಲವೇ? ಇದು ತಮ್ಮ ಗಮನಕ್ಕೆ ಬಂದಿಲ್ಲವೇ? ಇದನ್ನು ಊಹೆ ಮಾಡಲಾರದಂತಹ ಪರಿಸ್ಥಿತಿಯಲ್ಲಿ ತಮ್ಮ ಸರ್ಕಾರ ತಮ್ಮ ಮಂತ್ರಿಗಳು ಇದ್ದಾರೆಯೇ? ಇವತ್ತಿನ

ದಿವಸ ಒಂದು ಲಂಚ ನಿರ್ಮೂಲನ ಶಾಸನ ಇದೆ. ಈ ಶಾಸನದಲ್ಲಿ misconduct of the public servant is defined. What is the misconduct of a public servant? ಏನು ದುಡ್ಡನ್ನೇ ತೆಗೆದುಕೊಳ್ಳಬೇಕೇ? ದುಡ್ಡನ್ನು ತೆಗೆದುಕೊಳ್ಳಬೇಕಾಗಿಲ್ಲ ಮಾನ್ಯ ಕಾಗೋಡು ತಿಮ್ಮಪ್ಪನವರೇ. ಕಾನೂನಿಗೆ ವಿರುದ್ಧವಾಗಿ ನಮಗೇ ಗೊತ್ತಿದ್ದು ಸಹ ಬೇರೆಯವರು ಲಾಭ ಮಾಡುತ್ತೇವೆನ್ನುವ ರೀತಿಯಲ್ಲಿ ನಾವು ನಮ್ಮ ಅಧಿಕಾರವನ್ನು ಉಪಯೋಗಿಸಿದರೆ that provision of Section 5(1)(d) of the Prevention of Corruption Act is applicable.

ಇವತ್ತಿನ ದಿವಸ ಕಾನೂನು ಪ್ರಕಾರ ಮಾಡಿದ್ದೀರೊ ಇಲ್ಲವೇ ಎನ್ನುವ ಪ್ರಶ್ನೆ ನಮ್ಮ ಮುಂದಿದೆ. ತಮಗೇ ಗೊತ್ತಿರುವ ಹಾಗೆ ಆ ಜಾಗ ಬೆಲೆಬಾಳುವಂತಹದ್ದು ಎಂದು ತಾವೇ ಒಪ್ಪಿಕೊಳ್ಳುತ್ತೀರಿ. ಇದು ಕಾನೂನು ವಿರುದ್ಧವಾಗಿದೆ ಎಂಬುದನ್ನು ನಾನು ತೋರಿಸಿದ್ದೇನೆ. ಸುಪ್ರೀಂಕೋರ್ಟ್‌ನ ಜಡ್ಜ್‌ಮೆಂಟ್ ಇರಬಹುದು. ಹೈಕೋರ್ಟ್‌ನ ಜಡ್ಜ್‌ಮೆಂಟ್ ಇರಬಹುದು.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಸದಸ್ಯರು ಒಂದು ನಿಮಿಷ ಈಲ್ಡ್ ಆಗುವುದಾದರೆ, ಹೇಳುತ್ತೇನೆ. ನಿನ್ನೆ ಮಾತನಾಡುವ ಕಾಲಕ್ಕೆ ನಾನು ಒಂದು ವಾದವನ್ನು ಇಟ್ಟಿದ್ದೆ. Illegality is punishable under Law - under Section 43 of the IPC.....

SRI H. EKANTHAIAH:- Illegal is coupled with dishonesty....

ಶ್ರೀ ಕಾಗೋಡು ತಿಮ್ಮಪ್ಪ:- ಅದಕ್ಕೆ ನಾನು ಹೇಳಿದೆ, ಕಾನೂನಿನಲ್ಲಿ ಇಲ್ಲದೇ ಇರತಕ್ಕದ್ದನ್ನು ಮಾಡಿದ್ದಾರೆ. ಆದ್ದರಿಂದ ಇದು ಇಲ್ಲೀಗ್ಯಾಲಟಿ ಎಂದು ಹೇಳಿದ್ದೇನೆ. ಈಗ ತಮ್ಮ ವಾದವನ್ನು ನಾನು ಕೇಳಿದ್ದೇನೆ. ಈಗ ನೋಟಿಫೈಡ್ ಆಗಿರತಕ್ಕ ಜಮೀನನ್ನು ಲೇ ಔಟ್ ಮಾಡಿ ಡಿಸ್ಟ್ರಿಬ್ಯೂಷನ್ ಮಾಡಿದ ಮೇಲೆ ಡೀ ನೋಟೀಫಿಕೇಷನ್ ಆಗಿದೆ ಎನ್ನುವ ಪ್ರಶ್ನೆ ಅಷ್ಟೆ. ಡೀ ನೋಟೀಫೈ ಯಾವ ಸ್ಟೇಜ್‌ನಲ್ಲಿ ಆಗಿದೆ? ಅವಾರ್ಡ್ ಪಾಸ್ ಆಗಿದೆ. ಪೊಷಿಸನ್ ತೆಗೆದುಕೊಂಡಿದ್ದಾರೆ. ಆ ಮೇಲೆ ಲೇ ಔಟ್ ಆಗಿದೆ. ಸೈಟ್ ಆಗಿ ಪರಿವರ್ತನೆ ಮಾಡಿ ಡಿಸ್ಟ್ರಿಬ್ಯೂಟ್ ಆಗಿದೆ. ನೋಟೀಫಿಕೇಶನ್‌ಗೆ ಹೋಗಿದೆ, ಎಲ್ಲಾ ಆಗಿದೆ. ಅಕ್ವಿಜಿಶನ್ ಆಗಿ ಸ್ವತ್ತನ್ನು ಸ್ವಾಧೀನಕ್ಕೆ ತೆಗೆದುಕೊಂಡ ಮೇಲೆ that is the crux of the problem here. Once the award is passed and taken possession of the land under the Land Acquisition Act, I would like to know under the Land Acquistion Act whether Government has got powers to denotify it. Under the Land Acquisition Act land has been acquired.....

SRI H. EKANTHAIAH-: Whether it is Supreme Court judgment...

SRI KAGODU THIMMAPPA:- Corruption means - taking money. Illegal Act means corruption. The basic question is, there must be illegal action. If somebody acted without power that becomes illegal. Illegality cannot be cured but irregularity can be cured. Therefore, unless you establish there was no power under the Act to denotify, then addition of the concerned Minister becomes illegal. you can interpret in any manner...

ಶ್ರೀ ಹೆಚ್. ಏಕಾಂತಯ್ಯ:- ನಾನು ಲಾಯರ್ ಆಗಿದ್ದರೂ ಇಲ್ಲಿ ನಾನು ಲಾಯರ್ ಆಗಿ ವಾದ ಮಾಡುವುದಕ್ಕೆ ಬಂದಿಲ್ಲ. ಅದರ ಬಗ್ಗೆ ಮಾಹಿತಿ ಬೇಕೆಂದರೆ ಕಾಗೋಡು ತಿಮ್ಮಪ್ಪನವರಿಗೆ ಕೊಡುತ್ತೇನೆ. ಸುಪ್ರೀಂ ಕೋರ್ಟಿನ ತೀರ್ಮಾನದ ಪ್ರಕರ ಸಹ....

ಶ್ರೀ ಕಾಗೋಡು ತಿಮ್ಮಪ್ಪ:- ನೀವು ಒಂದು ಅಲಿಗೇಷನ್ ಮಾಡಿದರೆ You are making a point here - whether particular action of the Minister to denotify the land amounts to illegal notification? ಎಂದು ತಾವು ವಾದ ಮಾಡುತ್ತಾ ಇದ್ದಿರಿ. ಬೇಸಿಕ್ ಆಗಿ ಏನು ಇರಬೇಕು? You must establish there is illegal action - under what

provision it was done illegality.....ಆದ್ದರಿಂದ ನೀವು ವಾದ ಮಾಡಬೇಕಾದರೆ, ನೀವು ಏನು ಹೇಳುತ್ತಾ ಇದ್ದಿರಿ, ಅದನ್ನೆ ನಾನು ಹೇಳಿದೆ. Corruption is somethingelse.....
ಆದ್ದರಿಂದ ಈ ಹಂತದಲ್ಲಿ ಈ ಡೀನೊಟೀಫೈಡ್ ಮಾಡತಕ್ಕ ಅಧಿಕಾರ ಸರ್ಕಾರಕ್ಕೆ ಇಲ್ಲ ಎನ್ನತಕ್ಕ ಯಾವ ಕಾನೂನಿನಲ್ಲಿ ಇದೆ?

ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ ವಿಚಾರವನ್ನು ನಾನು ಒಪ್ಪುತ್ತೇನೆ. ನಾನು ಫೈಮಾಪೇಸಿ ಈಗಲೂ ಹೇಳುತ್ತೇನೆ. ಅಡ್ವೋಕೇಟ್ ಜನರಲ್ ಅವರನ್ನು ಅಪಾಯಿಂಟ್ ಮಾಡಿಕೊಂಡಿದ್ದೀರಿ. ಅವರಿಗೆ ಈ ಪ್ರಶ್ನೆಯನ್ನು ಕೇಳಲಿಲ್ಲವೆಂದು ನನಗೆ ಗೊತ್ತಿದೆ. ನೀವು ಹೇಳುವಂತಹ ಪ್ರಶ್ನೆ ಏನಿದೆ, whether Government has power to denotify the land which have already taken possession by the Government. It is not been referred to the Advocate General. Is it referred?

SRI KAGODU THIMMAPPA:- We are not concerned about what the Advocate General said. you are taking a point here. Whether a particular action of denotification amounts to illegality or not. ದುಡ್ಡು ಕೊಡುವುದರಿಂದಲೇ ಭ್ರಷ್ಟಾಚಾರ ಆಗುವುದಿಲ್ಲ. ಆದ್ದರಿಂದ under what provision of law it was acted illegally. That is all the question.

ಶ್ರೀ ಹೆಚ್. ಏಕಾಂತಯ್ಯ:- ಸನ್ಮಾನ್ಯ ಅಧ್ಯಕ್ಷಣೀಯವರೆ, ನಾನು ಈಗಾಗಲೇ ಹೇಳಿದ್ದೇನೆ. ಪುನಃ ಹೇಳುತ್ತೇನೆ. ನಮ್ಮ ದೇಶದಲ್ಲಿರುವಂತಹ ಅತ್ಯುಚ್ಚ ನ್ಯಾಯಲಾಯ ಸುಪ್ರೀಂಕೋರ್ಟ್‌ನ ಜಡ್ಜ್‌ಮೆಂಟ್ ಪ್ರಕಾರ, ಒಂದು ಸಾರಿ ಡೀನೋಟೀಫೈ ಆದಂತಹ ಲ್ಯಾಂಡನ್ನು...

ಶ್ರೀ ಕಾಗೋಡು ತಿಮ್ಮಪ್ಪ:- ನಮ್ಮ ಅಧ್ಯಕ್ಷರೇ, ಒಂದು ರೂಲಿಂಗ್ ಕೊಟ್ಟಿದ್ದಾರೆ. ಈ ಸದನಕ್ಕೆ ಸಂಬಂಧಪಟ್ಟಿರತಕ್ಕದ್ದು ರಾಜ್ಯಾಂಗ ಮತ್ತು ನಮ್ಮ ರೂಲ್ಸ್ ಆಫ್ ಪ್ರೊಸಿಜರ್ ಏನಿವೆ ಇವರಡೇ ನಮಗೆ ಬದ್ಧ. ಏಕೆಂದರೆ ಸುಪ್ರೀಂಕೋರ್ಟ್ ರೂಲಿಂಗ್ ಇರಬಹುದು. ಈ ಸದನದಲ್ಲಿ ನಾವು ಏನು ಮಾಡುತ್ತಿದ್ದೇವೆ, ಅವರು ಯಾವ ಕಾಂಟ್‌ಕ್ಸ್‌ನಲ್ಲಿ ಕೊಟ್ಟರೊ ನಮಗೆ ಗೊತ್ತಿಲ್ಲ. ಫ್ಯಾಕ್ಟ್ಸ್ ಗೊತ್ತಿಲ್ಲದೆ ಜಡ್ಜ್‌ಮೆಂಟ್ ರಿಲೇ ಮಾಡುವುದಕ್ಕೆ ಆಗುವುದಿಲ್ಲ. You should argue the case to establish illegality committed...

ಶ್ರೀ ಹೆಚ್. ಏಕಾಂತಯ್ಯ:- ನಿಮಗೆ ಉತ್ತರ ಕೊಡುವುದಕ್ಕೆ ನಾನು ಒಪ್ಪುವುದಿಲ್ಲ. ನಾನು ಹೇಳುವುದು ಏನೆಂದರೆ..ಇವತ್ತು ಸ್ವಾಧೀನಕ್ಕೆ ತೆಗೆದುಕೊಂಡ ಮೇಲೆ, ಏನು ಡಿನೋಟಿಫೈ ಮಾಡಬೇಕೆಂದು ಹೇಳಿದ್ದಾರೆ. ಹಾಗೂ ದಿ ನೊಟಿಫೈ ಮಾಡಿದ್ದಾರೆ, ಇದು ಕಾನೂನಿಗೆ ವಿರುದ್ಧವಾದುದು. ಸರ್ಕಾರಕ್ಕೆ ಅಧಿಕಾರ ಇಲ್ಲ. ಅದರ ಜೊತೆಯಲ್ಲಿ ಯಾವುದೂ ಸರ್ಕಾರಕ್ಕೆ ಅಧಿಕಾರ ಇಲ್ಲ. ಯಾವುದಕ್ಕೆ ಕಾನೂನು ವಿರುದ್ಧ ಆಗಿದೆ, ಆ ಕೆಲಸವನ್ನು ಸಂಪೂರ್ಣವಾಗಿ ಗೊತ್ತಿದ್ದರು ಸಹ, ಅಂದರೆ ಈ ರೀತಿ ಮಾಡುವುದರಿಂದ ಯಾರಿಗೊ ಲಾಭ ಆಗುತ್ತದೆ ಎಂಬುದು ಸರ್ಕಾರಕ್ಕೆ ಗೊತ್ತಿದ್ದರೆ ಸಂಬಂಧಪಟ್ಟಂಥ ಪಬ್ಲಿಕ್ ಸರ್ವೆಂಟ್ ಅಂತ ಏನು ಹೇಳುತ್ತೇವೆ, ಅವರಿಗೆ ಗೊತ್ತಿದ್ದರೆ he is attracted by Section 5 (d)(l) of the Corruption Act which I will read;
Section 5(d)(l):

> "A public servant said to have by corrupt or illegal means or by otherwise, abusing his position as a public servant obtains from any other person available under pecuinary advantage....."

ಇಲ್ಲಿ ಬೇರೆಯವರಿಗೆ pecuinary advantage ಎಂದು ಏನು ಹೇಳುತ್ತೇವೆ, ಅಂತಹ ಒಂದು ಲಾಭವನ್ನು ದುರುದ್ದೇಶದಿಂದ ಸಿಗುವ ರೀತಿಯಲ್ಲಿ ಗೊತ್ತಿದ್ದು ಮಾನ್ಯ ಮಂತ್ರಿಗಳು ಈ ಕೆಲಸವನ್ನು ಮಾಡಿದ್ದಾರೆ ಎಂದು ನಾನು ಆರೋಪ ಮಾಡುತ್ತೇನೆ. ಆದ್ದರಿಂದ ಈಗ ನಾನು ಏನು ಹೇಳಿದ್ದೇನೆ, ಇದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳನ್ನು ಸಹ ನಾನು ಹೇಳಿದ್ದೇನೆ. ಒಂದು ಮಾತನ್ನು ಮುಖ್ಯಮಂತ್ರಿಗಳು

ಹೇಳಿದ್ದಾರೆ. ನಾನು ಮಾನ್ಯ ಚಂದ್ರೇಗೌಡರು ಹೇಳಿದ ಹಾಗೆ ರಾಜೀನಾಮೆ ಕೊಡಿ ಎಂದು ಹೇಳುವುದಿಲ್ಲ. ಏಕೆ ಕೇಳುವುದಿಲ್ಲ ಎಂದರೆ ಉದಾಹರಣೆಗೆ ಹೇಳುತ್ತನೆ. 'ನಾನು ಮಾಡುವಂಥ ಕೆಲಸದಲ್ಲಿ ನನಗೆ ಪ್ರಜ್ಞೆ ಇದೆ. ಮಾನ್ಯ ಮಂತ್ರಿಗಳ ಹೇಳಿಕೆಯನ್ನು ನಾನು ಇಲ್ಲಿ ರೆಫರ್ ಮಾಡುತ್ತಿದ್ದೇನೆ.

> "... ಕಾನೂನು ಬಾಹಿರವಾಗಿ ಏನಾದರೂ ಮಾಡಿದ್ದರೆ ಹೇಳಿ. ಅಥವಾ ನಿಯಮಗಳನ್ನು ಉಲ್ಲಂಘನೆ ಮಾಡಿದ್ದರೆ ಹೇಳಿ. ಅಥವಾ ಯಾವುದೇ ತೀರ್ಪಿಗೆ ವಿರುದ್ಧವಾಗಿ ನಡೆದಿದ್ದರೆ ಒಂದು ಕ್ಷಣವೂ ನಾನು ಈ ಸ್ಥಾನದಲ್ಲಿ ಇರುವುದಿಲ್ಲ ಎನ್ನವು ಮಾತನ್ನು ಹೇಳುತ್ತಿದ್ದೇನೆ.

ಏನು ಮಾನ್ಯ ಸಚಿವರು ಅಣಿಮುತ್ತುಗಳನ್ನು ಆ ಸಭೆಯಲ್ಲಿ ಹೇಳಿದ್ದಾರೆ, ನಿಜವಾಗಲೂ ಸಹ ಇದರಲ್ಲಿ ಏನಾದರೂ ನಂಬಿಕೆ ಅವರಿಗೆ ಇದ್ದರೆ, ನಾನು ಹೇಳಿದಂಥ ಕಾರಣಗಳಿಂದ, ಈ ಕಾನೂನಿಗೆ ವಿರುದ್ಧವಾಗಿರುವಂಥ ರೀತಿಯಲ್ಲಿ ಮಾಡಿದ್ದಾರೆ ಎಂಬ ಮಾತನ್ನು ಅವರು ಒಪ್ಪುವುದಾದರೆ ಒಂದು ಕ್ಷಣವೂ ನಿಲ್ಲದೆ ತಾವಾಗಿಯೇ ಮಂತ್ರಿಸ್ಥಾನದಿಂದ ಕೆಳಗಿಳಿಯಬೇಕು. ನಾನು ಕೇಳಬೇಕಾದ ಪ್ರಶ್ನೆ ಇಲ್ಲವೆಂಬ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಇಲ್ಲ. ಅವರಿಗೂ ಸಹ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಭ್ರಷ್ಟಾಚಾರ ವಿರುದ್ಧವಾಗಿ ಹೇಳುವಂಥ ಮಾನ್ಯ ಮುಖ್ಯಮಂತ್ರಿಗಳು ಯಾವುದೇ ಹಗರಣ ಇಲ್ಲವೆಂಬ ಮಾತನ್ನು ಹೇಳಿದರು. ಹಾಗಾದರೆ ಇದು ಏನು? ಇದು ಹರಗಣ ಅಲ್ಲವೆ? ಅವರು ಹೇಳಿದರು "ಯಾರಾದರು ತಪ್ಪು ಮಾಡಿದ್ದರೆ, ಹಗರಣ ಮಾಡಿದ್ದರೆ... " ಅವರ ಭಾಷೆಯನ್ನು ನಾನು ಇಲ್ಲಿ ಉಪಯೋಗಿಸುವುದಕ್ಕೆ ಇಷ್ಟಪಡುವುದಿಲ್ಲ. ಅವರ ಗುಲ್ಬರ್ಗಾ ಜಿಲ್ಲೆಯಲ್ಲಿ ಒಂದು ನೂರು ನೀರುಳ್ಳಿ ತಿನ್ನಿಸುವುದೋ ಅಥವಾ ಏನು ಮಾಡುವುದೋ ಗೊತ್ತಿಲ್ಲ ನನಗೆ. ಅಥವಾ ಸೆರೆಮನೆ ವಾಸ ಮಾಡುವುದೋ. ಆದರೆ ನಾನು ಕೇಳುತ್ತಿದ್ದೇನೆ, ಮುಖ್ಯಮಂತ್ರಿಗಳು ಅವರು ನಿನ್ನೆ ಹೇಳಿದಂಥ ಶಿಕ್ಷೆಯನ್ನು ಕೊಡುವುದಕ್ಕೆ ತಯಾರಾಗಿದ್ದಾರೆಯೇ? ಅಥವಾ ಅನುಭವಿಸಲಿಕ್ಕೆ ತಯಾರಾಗಿದ್ದಾರೆಯೆ? ನಾನು ರುಜುವಾತು ಮಾಡುತ್ತೇನೆ. ಮಾನ್ಯ ಮಂತ್ರಿಗಳು ಏನು ಡಿ-ನೋಟಿಫೈ ಮಾಡಿದ್ದಾರೆ, ಇದು ಕಾನೂನಿಗೆ ವಿರುದ್ಧವಾಗಿ ಮಾಡಿದ್ದಾರೆ. ಇದನ್ನು ಕಾನೂನಿಗೆ ವಿರುದ್ಧವಾಗಿದೆ ಎಂದು ಗೊತ್ತಿದ್ದರೂ ಸಹ ಕೆಲವರು ಅನ್ಯಾಯವಾಗಿ ಧನಾರ್ಜನೆ ಮಾಡಬೇಕು ಎಂಬ ದುರುದ್ದೇಶದಿಂದ ಈ ಒಂದು ಡಿನೋಟಿಫೈ ಮಾಡಿದ್ದಾರೆ. ಆದ್ದರಿಂದ ಇದರ ಬಗ್ಗೆ ವಿಚಾರಣೆ ಆಗಬೇಕು. ಇವತ್ತು ತಾವು ಹೇಳುತ್ತೀರಿ. ಇನ್ನೊಬ್ಬರ ಮೇಲೆ ಹಗರಣವನ್ನು ಹೇಳುತ್ತೀರಿ. ಇಲ್ಲಿರುವಂಥ ಶಾಸಕರು ಲಕ್ಷಾನುಗಟ್ಟಲೆ ಮಾಡಿದ್ದಾರೆ, ಅವರು ಆ ಚುನಾವಣೆಯಲ್ಲಿ ಸೋತು ಬಂದಿದ್ದಾರೆ. ಎಲ್ಲೋ ಒಂದಿಬ್ಬರು ಮಾತ್ರ ಇಲ್ಲಿ ಕಾಣುತ್ತಾರೆ ಎಂಬ ಮಾತನ್ನು ಹೇಳಿದ್ದಾರೆ. ನಾನು ಆ ಮಾತನ್ನು ಹೇಳುವುದಿಲ್ಲ. ಅದೇ ಮಾತನ್ನು ನಾನು ತಿರುಗಿ ಹೇಳುವುದಾದರೆ, ಇಲ್ಲಿರುವ ಎಲ್ಲ ಮಂತ್ರಿಗಳಿಗೂ ನಾನು ಹೇಳದೇ ಇದ್ದರೂ, ಸಹ ಹಲವಾರು ಮಂತ್ರಿಗಳು ಭ್ರಷ್ಟರಾಗಿದ್ದಾರೆ ಎಂದು ನಾನು ಹೇಳಿದರೆ ಅದಕ್ಕೆ ಏನು ಉತ್ತರ ಹೇಳುತ್ತೀರಿ? ಆ ಮಾತನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏನು ಇವೊತ್ತಿನ ದಿವಸ ರಿಸರ್ವ್ ಮಾಡಿದ್ದೀರಿ. ಆ ಒಂದು ಆದೇಶ, ಆ ಒಂದು ರೂಲಿಂಗ್ ಬರುವವರೆಗೆ ನಾನು ಇದರ ಬಗ್ಗೆ ಮಾತನಾಡುವುದಿಲ್ಲ. ಆದರೆ ಈ ಸದನದಲ್ಲಿ ಇನ್ನೊಬ್ಬರ ಮೇಲೆ ಯಾವರೀತಿ ಹಗುರವಾಗಿ ಆರೋಪ ಮಾಡುತ್ತೀರಿ ಅಂತಹ ಆರೋಪಗಳನ್ನು ಬೇರೆಯವರಿಗೆ ಮಾಡುವುದಕ್ಕೆ ಶಕ್ತಿ ಇಲ್ಲವೆಂದು ತಿಳಿಯಬೇಡಿ. ಈ ದೇಶದಲ್ಲಿರತಕ್ಕಂಥ ಕೆಲವರಿಗೆ ಮಾತ್ರ ಮತ್ತು ಕೆಲವು ಪಕ್ಷದವರಿಗೆ ಮಾತ್ರ ಈ ದೇಶದಲ್ಲಿ ಪ್ರಾಮಾಣಿಕತೆ ಇದೆಯೆಂಬ ಮಾತನ್ನು ಹೇಳಿದರೆ ಅದು ತಪ್ಪಾದೀತು. ಎಲ್ಲರೂ ಅಪ್ರಮಾಣಿಕರು, ಭ್ರಷ್ಟರು ಎಂದು ತಿಳಿದುಕೊಳ್ಳಬೇಕಾಗಿಲ್ಲ. ಈ ದೇಶದಲ್ಲಿ ಭ್ರಷ್ಟರು, ನೀಚರು ಏನಿದ್ದಾರೆ, ಅವರ ಸಾಲಿಗೆ ಸೇರುವಂಥ ರೀತಿಯಲ್ಲಿ ಕೆಲಸವನ್ನು ಇವತ್ತಿನ ದಿವಸ ಮಾಡಿದ್ದಾರೆ. ಅತ್ಯಂತ ಭ್ರಷ್ಟತನದಿಂದ, ನೀಚತನದಿಂದ ಏನು ಈ ಆದೇಶವನ್ನು ಮಾಡಿದ್ದಾರೆ, ಇದರ ಬಗ್ಗೆ ಆ ಆದೇಶವನ್ನು ಹಿಂತೆಗೆದುಕೊಂಡಿದ್ದಾರೆ. ಇದರ ಬಗ್ಗೆ ವಿಚಾರಣೆ ಆಗಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇದರ ಬಗ್ಗೆ ವಿಚಾರಣೆ ಮಾಡದಿದ್ದರೆ, ಸಂಬಂಧಪಟ್ಟವರ ಮೇಲೆ ಕ್ರಮ

ತೆಗೆದುಕೊಳ್ಳದಿದ್ದರೆ, ಇವತ್ತಿನ ದಿವಸ ಸಂಬಂಧಪಟ್ಟ ಸಚಿವರಿಂದ ರಾಜೀನಾಮೆ ಕೊಡಿಸದಿದ್ದರೆ ಅವರು ಇದರಲ್ಲಿ ಶಾಮೀಲಾಗಿದ್ದೀರಿ ಎಂಬ ಮಾತನ್ನು ನಾನು ಧೈರ್ಯವಾಗಿ ಹೇಳಬೇಕಾಗುತ್ತದೆ.

ಆದ್ದರಿಂದ, ನೀವು ಹೇಳುವುದು ಒಂದು, ಮಾಡುವುದು ಒಂದು. ನಡೆದಂತೆ ನುಡಿಯುತ್ತೇವೆ ಎಂದು ಪ್ರತಿಸಾರಿಯೂ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ, ಇವತ್ತಿನದಿವಸ ಕೇಳುತ್ತೇನೆ, ನಡೆದಂತೆ ನುಡಿಯುತ್ತಿದ್ದಾರಾ? ಹಾಗಾದರೆ ಏತಕ್ಕೋಸ್ಕರ ಇವರ ಮೇಲೆ ಕ್ರಮವನ್ನು ತೆಗೆದುಕೊಂಡಿಲ್ಲ. ಸರ್ಕಾರಕ್ಕೆ ಗೊತ್ತಿದ್ದರೂ, ಅನ್ಯಾಯವಾಗಿದೆ ಎಂದು ತಿಳಿದಿದ್ದರೂ ಸಹ ಡಿ-ನೋಟಿಫಿಕೇಶನ್ ಮಾಡಿದ್ದೀರಿ, ಡಿ-ನೋಟಿಫೈ ಮಾಡಿದಮೇಲೆ, ಯಾವ ಕ್ರಮವನ್ನು ಸರ್ಕಾರ ತೆಗೆದುಕೊಂಡಿದೆ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಅಂತಿಮವಾದ ತೀರ್ಮಾನವನ್ನು ಹೇಳಬೇಕಾಗುತ್ತದೆ ಎಂದು ಹೇಳಿ, ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಪಿ.ಜಿ.ಆರ್.ಸಿಂಧ್ಯ: (ಕನಕಪುರ):- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಮೊದಲನೆಯದಾಗಿ, ತಾವು ಮತ್ತು ಅಧ್ಯಕ್ಷರು ಈ ಮಹತ್ವದ ವಿಚಾರದ ಬಗ್ಗೆ, ಈ ಅಧಿವೇಶನದ ಕೊನೆಯ ದಿನವಾದರೂ ಸಹಿತ, ಇದರ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ, ಇದಕ್ಕಾಗಿ ನಿಮಗೆ ಮತ್ತು ಅಧ್ಯಕ್ಷರಿಗೆ ಅಭಿನಂದಿಸುತ್ತೇನೆ. ನನ್ನಮಟ್ಟಿಗೆ, ವೈಯುಕ್ತಿಕವಾಗಿ ಬಹಳ ದುಃಖದ ಸಂಗತಿ ಎಂದರೆ ಮಾನ್ಯ ನರಸಿಂಹಮೂರ್ತಿಯವರು 20 ವರ್ಷದ ನಂತರ ಮಂತ್ರಿಯಾಗಿದ್ದಾರೆ. ಅವರು ಈ ಸದನಕ್ಕಿಂತ ಹೆಚ್ಚಾಗಿ, ವಿಧಾನಪರಿಷತ್ತಿನಲ್ಲಿ ಬಹುಶಃ ನನಗನಿಸುತ್ತದೆ. ಅವರೇ ಅಲ್ಲಿ ಹಿರಿಯ ಸದಸ್ಯರು ಎಂದು. 20 ವರ್ಷ ವಿಧಾನ ಪರಿಷತ್ತಿಗೆ ಸದಸ್ಯರಾಗಿ ಕೆಲಸ ಮಾಡಿ, ಉಪಾಧ್ಯಕ್ಷರಾಗಿ ಅಲ್ಲಿ ಕೆಲಸ ಮಾಡಿ, ನಾಯಕರಾಗಿ ಕೆಲಸ ಮಾಡಿ, ಅಪಾರವಾದ ಅನುಭವವನ್ನು ಉಂಡು, ಮಂತ್ರಿಯಾದ ತಕ್ಷಣ, ತಿರುಪತಿಗೂ ಹೋಗಿ ತಿಮ್ಮಪ್ಪನ ಪೂಜೆ ಮಾಡಿಕೊಂಡು ಬಂದರು. ನನಗೆ ಬಹಳ ಸಂತೋಷ ಆಯಿತು. ಜೊತೆಗೆ ಅವರು ಮಂಜುನಾಥಸ್ವಾಮಿಗೂ ಭಕ್ತರು. ಮಂಜುನಾಥನಿಗೂ ಪೂಜೆ ಮಾಡಿಕೊಂಡು ಬಂದಿದ್ದಾರೆಂದು ತಿಳಿದಿದ್ದೇನೆ. ಜೊತೆಗೆ, ನನಗೆ 20 ವರ್ಷದ ನಂತರ ರಾಜ್ಯದ ಜನಗಳ ಸೇವೆಯನ್ನು ಮಾಡತಕ್ಕಂಥ ಅವಕಾಶ ಸಿಕ್ಕಿದೆ, ನಾನು ಪ್ರಾಮಾಣಿಕವಾಗಿ ಸೇವೆ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನೂ ಸಹಿತ ಈ ರಾಜ್ಯದ ಜನತೆಗೆ ಕೊಟ್ಟರು. ನಾನು ಹೇಳುತ್ತೇನೆ, ಮಂತ್ರಿಮಂಡಲದಲ್ಲಿರತಕ್ಕ ಮಂತ್ರಿಗಳ ಪೈಕಿ, ಸ್ವಲ್ಪ ಏನಾದರೂ ಕೆಲಸ ಹೇಳಿದರೆ ಇವರು ಮಾಡುತ್ತಾರೆ. ನಾನು ಇರುವುದನ್ನು ಇದ್ದಹಾಗೆ ಹೇಳಬೇಕಾಗುತ್ತದೆ. ನಾನು ಅವರಿಗೆ, ಒಂದು ಸಾರಿ ಯಾವುದೋ ಒಂದು ಬಡವರ ಸಮಸ್ಯೆ ಬಗ್ಗೆ ದೂರವಾಣಿ ಮೂಲಕ ಹೇಳಿದೆ, ತಕ್ಷಣ ಆ ಕೆಲಸ ಮಾಡಿ, ನನಗೆ ಪತ್ರ ಬರೆದು ತಿಳಿಸಿದ್ದರು. ಇದಕ್ಕಾಗಿ ನಾನು ಅವರನ್ನು ಮೆಚ್ಚುತ್ತೇನೆ. ಮತ್ತೆ ನಾನಾದರೂ ಹೇಳತಕ್ಕಂತಾದ್ದು, ಮಾನ್ಯ ನರಸಿಂಹಮೂರ್ತಿಯವರು, ಈ ಸರ್ಕಾರದಲ್ಲಿ ಬಹಳ ಜವಾಬ್ದಾರಿ ಮಂತ್ರಿಗಳು, ಅನುಭವಸ್ಥರು. ಅವರು ಆ ಪಕ್ಷದಲ್ಲಿ ಕಳೆದ 20 ವರ್ಷಗಳಿಂದ ನಿಷ್ಠೆಯಿಂದ ಇದ್ದಾರೆ, ನಾನು ಒಪ್ಪುತ್ತೇನೆ. ಮಾನ್ಯ ಉಪಾಧ್ಯಕ್ಷಿಣಿಯವರೇ, ತಾವು ನಿನ್ನೆ ಇದ್ದಿರೆಂದು ಕಾಣುತ್ತದೆ. ನಾವು ಯಾವುದೊ ಒಂದು ನಿಶ್ಚಿತವಾದ ಕಾರಣಕ್ಕಾಗಿ ಈ ಸದನದ ಹೊರಗಡೆ ಇದ್ದಂಥ ಸಂದರ್ಭದಲ್ಲಿ, ಈ ಸರ್ಕಾರದ ನೇತಾರರು, ಈ ಸಭೆಯನಾಯಕರು ಹೇಳಿರತಕ್ಕಂಥ ಮೌಲ್ಯದ ಮಾತುಗಳು, ನೀತಿಯ ಮಾತುಗಳು, ಬುದ್ಧಿವಾದದ ಮಾತುಗಳು, ಇದನ್ನು ಹೇಳುವುದಕ್ಕೆ ಇವರು 1970 ರಿಂದ 1980ರವರೆಗೆ ಎಲ್ಲಿದ್ದರು? ಮಲ್ಲಿಕಾರ್ಜುನ ಖರ್ಗೆಯವರು ಹೇಳಲಿ ನಾನು ಒಪ್ಪುತ್ತೇನೆ, ಧರ್ಮಸಿಂಗ್ ಅವರು ಹೇಳಲಿ ಒಪ್ಪುತ್ತೇನೆ, ಶ್ರೀಮತಿ ನಾಗರತ್ನಮ್ಮನವರು ಹೇಳಲಿ ನಾನ ಒಪ್ಪಿಕೊಳ್ಳುತ್ತೇನೆ. ಆದರೆ ಈ ರೀತಿ ಹೇಳುವುದಕ್ಕೆ ಇವರಿಗೆ ಯಾವ ನೈತಿಕ ಹಕ್ಕಿದೆ?....

ಉಪಾಧ್ಯಕ್ಷಿಣಿಯರು:- ಇಲ್ಲಿರತಕ್ಕ ವಿಷಯಕ್ಕೆ ಬನ್ನಿ......

ಶ್ರೀ ಪಿ.ಜಿ.ಆರ್. ಸಿಂಧ್ಯ:- ತಾವು ದಯಮಾಡಿ ಕ್ಷಮಿಸಬೇಕು. ನಾವು ಹೊರಗಡೆ ಇದ್ದಂಥ ಸಂದರ್ಭವನ್ನು ಉಪಯೋಗಿಸಿಕೊಂಡು, "ಉತ್ತರನ ಪೌರುಷ ಒಲೆ ಮುಂದೆ" ಎನ್ನುವ ಹಾಗೆ ಪ್ರಪಂಚದಲ್ಲಿ, ಇಡೀ ದೇಶದಲ್ಲಿ ಇವರೊಬ್ಬರೇ ನೀತಿವಂತರು, ಬಹಳ ದೊಡ್ಡ ನೀತಿವಂತರು,

ಸತ್ಯಹರಿಶ್ಚಂದ್ರರು ಇವರೊಬ್ಬರೇ, ಈ ಕುಲಕ್ಕೆ ಸೇರಿದವರು ಇವರೊಬ್ಬರೇ, ಸತ್ಯ ಇವರ ಸ್ವತ್ತು ಎನ್ನುವ ರೀತಿಯಲ್ಲಿ ಮಾತನಾಡಿದ್ದಾರೆ. 1970 ರಿಂದ 1980ರವರೆಗೆ ಯಾರ ಹಿಂದುಗಡೆ ಇವರು ಇದ್ದರು, ಇದು ಯಾರಿಗೂ ಗೊತ್ತಿಲ್ಲವೆ?..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅವರು ಬಂದಾಗ, ನೀವು, ಅವರು ಇಬ್ಬರೂ ಮಾತನಾಡಿದರೆ ಚೆನ್ನಾಗಿರುತ್ತದೆ. ಇದೆಲ್ಲಾ ನಮ್ಮ ಮುಂದೆ ಏಕೆ.....

ಶ್ರೀ ಡಿ.ಬಿ. ಚಂದ್ರೇಗೌಡ:- ನಾವು ಇಲ್ಲದಾಗ, ಅವರು ಮಾತನಾಡಿದ್ದು ನಿಮಗೆ ಚೆನ್ನಾಗಿತ್ತೇ....

(ಗೊಂದಲ)

ಉಪಾಧ್ಯಕ್ಷಿಣಿಯರು:- ಮಾನ್ಯಸಿಂಧ್ಯರವರೇ, ವಿಷಯದ ಬಗ್ಗೆ ಬನ್ನಿ, ಅವರು ಇಲ್ಲದಾಗ ನೀವು ಮಾತನಾಡುವುದು, ನೀವು ಇಲ್ಲದಾಗ ಅವರು ಮಾತನಾಡುವುದು, ಅದುಬೇರೆ, ಈಗ ಬಳ್ಳಾರಿ ವಿಷಯದ ಬಗ್ಗೆ ಹೇಳಿ....

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:- "ಉತ್ತರನ ಪೌರುಷ ಒಲೆ ಮುಂದೆ" ಎನ್ನುವ ಹಾಗೆ ಇಲ್ಲಿ ಸಭಾನಾಯಕರ ಬಗ್ಗೆ.....

(ಗೊಂದಲ)

ಶ್ರೀ ಸಿ. ಬೈರೇಗೌಡ:- ಇವರು ಇಲ್ಲದಾಗ, ಅವರು ಹೇಳಿದರು, ಈಗ ಅವರು ಇಲ್ಲದಾಗ, ಇವರು ಹೇಳುತ್ತಾರೆ....

ಉಪಾಧ್ಯಕ್ಷರು:- ನೀವು ವಿಷಯಕ್ಕೆ ಬಂದು ಬಿಟ್ಟರೆ ಏನು ಇರುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ವಿಷಯಕ್ಕೇ ನೇರವಾಗಿ ಬರುತ್ತಿದ್ದೇನೆ.

ಉಪಾಧ್ಯಕ್ಷರು:- ಬಳ್ಳಾರಿಯ ವಿಷಯ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಮ್ಮ ಲಕ್ಷ್ಮಣಯ್ಯನವರು ಇದ್ದಾರೆ. ನಾವೂ ಅವರೂ ಒಂದೇ ಪಾರ್ಟಿಯಲ್ಲಿ ದುಡಿದವರು, ಮಂಜುನಾಥ್‌ರವರು ಇದ್ದರು, ಅವರೂ ಎದ್ದು ಹೋಗಿದ್ದಾರೆ, ಅವರು ನಾವು ಒಂದೇ ಪಾರ್ಟಿಯಲ್ಲಿ ದುಡಿದಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:- ನಿಮ್ಮ ಪಕ್ಷದವರು ಯಾರೂ ಇಲ್ಲ, ಅವರು ಬಂದಮೇಲೆ ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಲಕ್ಷ್ಮಣಯ್ಯನವರು ಇದ್ದಾರೆ.

ಶ್ರೀ ಡಿ. ಕರಿಯಣ್ಣ:- ಚಂದ್ರೇಗೌಡರೂ ಇದ್ದಾರಲ್ಲ, ಅವರನ್ನೂ ಹೇಳಿ ಅದರೂ ನಮ್ಮ ಪಕ್ಷದಲ್ಲಿದ್ದರಲ್ಲ.

ಉಪಾಧ್ಯಕ್ಷರು:- ಅದೆಲ್ಲಾ ಬೇಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಉಪಾಧ್ಯಕ್ಷಿಣಿಯವರೇ, ತಿಪ್ಪೆಯನ್ನು ಕೆದಕುವುದಕ್ಕೆ ಹೋಗಬಾರದು, ಕೆದಕಿದರೆ ವಾಸನೆ. ಯಾರು ಆ ಕೆಲಸ ಮಾಡಿದವರು? ರಾಷ್ಟ್ರೀಯ ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದವರ ಬಗ್ಗೆ ಇವರು ಮಾತನಾಡುತ್ತಾ ಮುಖದಮೇಲೆ ಉಗಳಬೇಕೆಂದು ಹೇಳುತ್ತಾರೆ. ಈಗ ನಾವು ಏನು ಹೇಳಬೇಕು? ಅದಾದನಂತರ ಹೇಳುತ್ತಿದ್ದೇನೆ. ನಿನ್ನೆದಿವಸ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಉಪಯೋಗಿಸಿರತಕ್ಕಂಥಾ ಶಬ್ದದ ಬಗ್ಗೆ ಹೇಳಬೇಕೆಂದರೆ, ಈ ಸದನದಲ್ಲಿ ಹುಚ್ಚಮಾಸ್ತಿಗೌಡರು ಬಹಳ ಹಿರಿಯರು. ವಾಟಾಳ್ ನಾಗರಾಜ್‌ರವರೂ ಸಹಿತ ಹಿರಿಯರು. ಯಾರೂ ಸಹಿತ ಈ ಶಬ್ದವನ್ನು ಇದುವರೆಗೆ ಉಪಯೋಗ ಮಾಡಿಲಿಲ್ಲ. ನಾವೂ ಇಲ್ಲಿಗೆ ಚುನಾಯಿತರಾಗಿ ಗೆದ್ದು ಬಂದಿದ್ದೇವೆ. ಮುಖ್ಯಮಂತ್ರಿಗಳ ಸ್ಥಾನಕ್ಕೆ ಇದು ಯೋಗ್ಯವಾದುದಲ್ಲ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ:- ಅವರು ಇದ್ದಾಗ ಹೇಳಿ ಸ್ವಾಮಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅವರು ಇದ್ದಾಗಲೂ ಹೇಳುತ್ತೇನೆ. ಏತಕ್ಕೆ ಏನಾಗುತ್ತದೆ, ನಾವು ಅವರನ್ನು ಇರಬೇಡಿ ಎಂದು ಹೇಳಲಿಲ್ಲವಲ್ಲ;

ಶ್ರೀ ಡಿ.ಬಿ. ಚಂದ್ರೇಗೌಡ:- ನಾವು ಅವರನ್ನು ಇರಬೇಡಿ ಎಂದು ಹೇಳಿಲ್ಲವಲ್ಲ.

ಶ್ರೀ ಕರಿಯಣ್ಣ:- ಮುಖಕ್ಕೆ ಉಗುಳ ಬೇಕೆಂದು ಅವರು ಹೇಳಲಿಲ್ಲ. ಅದು ರೆಕಾರ್ಡ್‌ಗೆ ಹೋಗಿದೆ ದಯವಿಟ್ಟು ಅದನ್ನು ತೆಗೆಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ:- ಮುಖಕ್ಕೆ ಉಗಿಯಿರಿ ಎಂದು ಹೇಳಲಿಲ್ಲ. ಆ ತರಹ ಅವರು ಹೇಳಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅದನ್ನು ವಾಪಸ್ ತೆಗೆದುಕೊಂಡರು.

ಶ್ರೀ ಕರಿಯಣ್ಣ:- ರೆಕಾರ್ಡ್ ತೆಗೆಸಿನೋಡಿ. ಅವರು ಹೇಳಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾಗರಾಜ್‌ರವರೇ ದಯವಿಟ್ಟು ಸಹಕಾರ ಕೊಡಿ.

ಶ್ರೀ ವಾಟಾಳ್ ನಾಗರಾಜ್:- ಒಂದು ನಿಮಿಷ ಅವಕಾಶ ಕೊಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಆಯಿತು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಸಿಂಧ್ಯಾರವರು ನಿನ್ನೆ ಮುಖ್ಯ ಮಂತ್ರಿಗಳು ಮಾತನಾಡಿದುದರ ಮೇಲೆ ಮಾತನಾಡುತ್ತಿದ್ದಾರೆ. ತಿಪ್ಪೆಯನ್ನು ಕೆದಕಬಾರದು ಎಂದರೆ, ತಿಪ್ಪೆ ಯಾವುದು? ತಿಪ್ಪೆ ಎಲ್ಲಿದೆ? ಇದು ನಮಗೆ ಬೇಕು?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅದು ಅವರೇ ಹೇಳಿರುವುದು.

ಶ್ರೀ ವಾಟಾಳ್ ನಾಗರಾಜ್:- ತಿಪ್ಪೆ ಯಾವುದು ಎಂದು ತೀರ್ಪು ಕೊಡಬೇಕು. ತಿಪ್ಪೆ ಎಲ್ಲಿದೆ, ಯಾರು ಕೆದಕಬೇಕು, ಬಿಡಬೇಕು ಅದು ಆಮೇಲೆ ನೋಡೋಣ. ತಿಪ್ಪೆ ಯಾವುದು ಎಂದು ಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಚಾಮರಾಜನಗರದ್ದಂತೂ ಅಲ್ಲ.

ಶ್ರೀ ವಾಟಾಳ್ ನಾಗರಾಜ್:- ನಾನು ಚಾಮರಾಜನಗರ, ತೀರ್ಥಹಳ್ಳಿ, ಕನಕಪುರ ಎಂದು ಹೇಳಲಿಲ್ಲ, ತಿಪ್ಪೆ ಯಾವುದು ಎನ್ನವುದು ಬೇಕು.

ಉಪಾಧ್ಯಕ್ಷರು:- ತಿಪ್ಪೆ ಯಾವುದಾದರೂ ಆಗಲಿ, ಕೆದಕುವುದು ಬೇಡ. ವಿಷಯಕ್ಕೆ ಬನ್ನಿ.

ಶ್ರೀ ಪಿ.ಜಿ. ಆರ್. ಸಿಂಧ್ಯಾ :- ನಾನು ನೇರವಾಗಿ ವಿಷಯಕ್ಕೆ ಬರುತ್ತಿದ್ದೇನೆ..

ಉಪಾಧ್ಯಕ್ಷರು :- ಬಳ್ಳಾರಿ ಅಭಿವೃದ್ಧಿ ಪ್ರಾಧಿಕಾರದ ವಿಷಯಕ್ಕೆ ಬನ್ನಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾನು ನೇರವಾಗಿ ವಿಷಯಕ್ಕೇ ಬರುತ್ತಿದ್ದೇನೆ.

ಉಪಾಧ್ಯಕ್ಷರು:- ಬಳ್ಳಾರಿ ಅಭಿವೃದ್ಧಿ ಪ್ರಾಧೀಕಾರದ ವಿಷಯಕ್ಕೆ ಬನ್ನಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಿನ್ನೆ ಒಂದು ಸಿಚುಯೇಷನ್ ಬಗ್ಗೆ, ವ್ಯಾಕ್ಯೂಮ್ ಸಿಚುಯೇಷನ್ ಬಗ್ಗೆ ಚರ್ಚೆ ಮಾಡಿದೆವಲ್ಲ, ಸಿಚುಯೇಷನ್ ಇನ್ ವ್ಯಾಕ್ಯೂಮ್, ಏನು? ಸಿಚುಯೇಷನ್ ಕ್ರಿಯೇಟ್ ಆಗಿರುವುದು. 110 ಎಕರೆ ಜಮೀನು ಯಾರಿಗಾದರೂ ಹೊರಟು ಹೋಗಿದೆಯೇ? ದುಡ್ಡು ಯಾರು ತೆಗೆದುಕೊಂಡಿದ್ದಾರೆ? ಡಿನೋಟಿಫೈ ಮಾಡಿದ್ದರಾ?

ಶ್ರೀ ಎಲ್.ಆರ್. ಶಿವರಾಮೇಗೌಡ:- ಇದು ವಿತಂಡ ವಾದ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಇದು ವಿತಂಡ ವಾದವಲ್ಲ, ಸರಿಯಾದ ವಾದ. ನೀವು ಬಾಡಿಗೆ ಜನ ಕುಳಿತುಕೊಳ್ಳಿರಿ, ಮಾತನಾಡಬೇಡಿ ನೀವು. ಸುಮ್ಮನೆ ಕುಳಿತುಕೊಳ್ಳಿ.

– ಭಾರೀ ಗೊಂದಲ –

ಶ್ರೀ ಎಲ್.ಆರ್. ಶಿವರಾಮೇಗೌಡ:- ಸಿಂಧ್ಯಾರವರೇ, ನೀವು ಮಾತನಾಡಿ, ಏನು ಅಲಿಗೇಷನ್ ಮಾಡಬೇಕೊ ಮಾಡಿ. ಆದರೆ ನೀವು ನನಗೆ ಕುಳಿತುಕೊಳ್ಳಿ ಎಂದು ಹೇಳಬೇಡಿ. ಉಪಾಧ್ಯಕ್ಷರು ಹೇಳಲಿ. ನಿಮಗೆ ನೀವು ಏನು ಹೇಳುತ್ತೀರಿ. ಅದನ್ನು ನಾವೆಲ್ಲರೂ ಕೇಳುವುದಕ್ಕೇ ಕುಳಿತಿದ್ದೇವೆ. ನೀವು ಡಿಕ್ಟೇಟ್ ಮಾಡಬೇಡಿ.

ಶ್ರೀ ಕಾಗೋಡು ತಿಮ್ಮಪ್ಪ:- ಬಾಡಿಗೆ ಜನ ಎಂದು ಹೇಳಿದ್ದಾರೆ, ಅದನ್ನು ಅವರು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ:- ಸಿಂಧ್ಯಾರವರು ನನಗಿಂತ ಹಿರಿಯ ಸದಸ್ಯರು .ಜನತಾ ಸರ್ಕಾರ ಆಡಳಿತವಿದ್ದ ಕಾಲದಲ್ಲಿ ಎಷ್ಟೇ ಹೊಲಸು ಬಂದಿದ್ದರು ಸಹ, ಅದರಲ್ಲಿ ಉಳಿದಿರತಕ್ಕಂಥವರು ನೀವು ಒಂದಿಬ್ಬರು ಇದ್ದೀರಿ. ಇವತ್ತು ಈ 110 ಎಕರೆ ಜಮೀನು ಕೊಟ್ಟಿರುವ ಬಗ್ಗೆ ತಮಗೆ ಸಂಬಂಧ ಇಲ್ಲದೆ ಇರಬಹುದು. ತಾವು ಒಳ್ಳೆಯ ಹೆಸರು ತೆಗೆದುಕೊಂಡಿದ್ದೀರಿ ಬಿಡಿ. ನೀವು ಮತ್ತು ಮಾನ್ಯ ಸದಸ್ಯರಾದ ಬೈರೇಗೌಡರು ಯಾವಾಗ ಜೊತೆ ಆಗಿದ್ದು ಎನ್ನುವುದೇ ನಮಗೆ ಗೊತ್ತಾಗಲಿಲ್ಲ. ಮಾನ್ಯ ಬೈರೇಗೌಡರು ನಿಮ್ಮನ್ನು ಇಷ್ಟೊಂದು ಡಿಫೆಂಡ್ ಮಾಡುತ್ತಿದ್ದಾರಲ್ಲ, ಕಾರಣವೇನು? ನಾವೇನಾದರೂ ಮಾತನಾಡಲು ಬಂದರೆ ಸಾಕು ನೀವು ಇನ್ನೂ ಹೊಸಬರು ಕುಳಿತುಕೊಳ್ಳಿ. ನಿಮಗೇನು ಗೊತ್ತಿಲ್ಲ ಕುಳಿತುಕೊಳ್ಳಿ ಎಂದು ಹೇಳುತ್ತೀರಿ ಆದ್ದರಿಂದ ದಯಮಾಡಿ ಇನ್ನೊಂದು ಸಾರಿ ಮಾನ್ಯ ಬೈರೇಗೌಡರು ಆಗಲಿ ತಾವಾಗಲೀ ಆ ಮಾತನ್ನು ಹೇಳಬಾರದು.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷಿಣಿಯವರೇ ಮಾನ್ಯ ಸದಸ್ಯರಾದ ಶಿವರಾಮೇಗೌಡರಿಗೆ ನನ್ನನ್ನು ಮೈ ಮೇಲೆ ಹಾಕಿಕೊಳ್ಳದಿದ್ದರೆ ಪಾಪ ಅವರಿಗೆ ನಿದ್ದೆ ಬರುವುದೇ ಇಲ್ಲ. ನಾನೇನು ಮಾಡಲಿ...

ಶ್ರೀ ಎನ್. ಹುಚ್ಚ ಮಾಸ್ತಿಗೌಡ:- ಮಾನ್ಯ ಅಧ್ಯಕ್ಷಿಣಿಯವರೇ ಮಾನ್ಯ ಸದಸ್ಯರು ಮಾತನಾಡುತ್ತಾ ನೀವು ಬಾಡಿಗೆ ಜನ ಕುಳಿತುಕೊಳ್ಳಿ ಎಂದು ಹೇಳಿದರು. ಮಾನ್ಯ ಸದಸ್ಯರು ನುರಿತ ಅನುಭವಿ ಶಾಸಕರು ಇದ್ದಾರೆ. ಆದ್ದರಿಂದ ದಯವಿಟ್ಟು ಅವರು ಆ ಮಾತನ್ನು ವಾಪಸ್ಸ್ ತೆಗೆದುಕೊಳ್ಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ:- ಅವರು ಆ ಮಾತನ್ನು ವಾಪಸ್ ತೆಗೆದುಕೊಂಡಿದ್ದಾರಲ್ಲ.

ಉಪಾಧ್ಯಕ್ಷರು:- ದಯಮಾಡಿ ತಾವು ಮತ್ತೊಮ್ಮೆ ಆ ಮಾತನ್ನು ಉಪಯೋಗಿಸಬೇಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:- ಮಾನ್ಯ ಅಧ್ಯಕ್ಷಿಣಿಯವರೇ ಮಾನ್ಯ ಸಿಂಧ್ಯರವರು ಮಾತನಾಡುತ್ತಾ ಬಾಡಿಗೆ ಜನ ಎಂದು ಹೇಳಿದ್ದಾರೆ ಅದು ಪ್ರೊಸಿಡಿಂಗ್ಸ್‌ನಲ್ಲಿ ಹೋಗಿದೆ. ಆದ್ದರಿಂದ ತಾವು ಆ ಮಾತನ್ನು ಪ್ರೊಸಿಡಿಂಗ್ಸ್‌ನಿಂದ ತೆಗಡಸಿಬಿಡಿ.

ಉಪಾಧ್ಯಕ್ಷರು:- ಅವರು ಆ ಮಾತನ್ನು ವಾಪಸ್ ತೆಗೆದುಕೊಂಡಿದ್ದಾರಲ್ಲ.

(ಗೊಂದಲ)

ಶ್ರೀ ಮಲ್ಲಿಕಾರ್ಜು ಎಂ. ಖರ್ಗೆ:- ಅವರು ಆ ಮಾತನ್ನು ಕುಳಿತುಕೊಂಡು ಹೇಳಿದ್ದಾರೆ. ಅವರು ಮೊದಲು ಹೇಳಿದ್ದು ಪ್ರೊಸಿಡಿಂಗ್ಸ್‌ನಲ್ಲಿ ಹೋಗಿದೆ, ಅದನ್ನು ತಾವು ತೆಗೆಸಿ ಹಾಕಬೇಕಾಗುತ್ತದೆ.

ಶ್ರಿ ಎ.ಬಿ.ಜಕನೂರು:- ಮಾನ್ಯ ಉಪಾಧ್ಯಕ್ಷರೇ ವಿಷಯ ವಿಷಯಾಂತರ ಆಗಲಿಕ್ಕೆ ಹತ್ತಿದೆ. ಅವರು ವಿಷಯ ಬಿಟ್ಟು ಹೋಗುತ್ತಿದ್ದಾರೆ. ತಾವು ದಯಮಾಡಿ ಕಂಟ್ರೋಲ್ ಮಾಡಿ ವಿಷಯಕ್ಕೆ ಸೀಮಿತವಾಗಿ ಅವರು ಮಾತನಾಡಬೇಕು. ಅವರು ಬಳ್ಳಾರಿ ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ಏನು ಆಗಿದೆ ಸೈಟ್ಸ್ ಹಂಚಿದ್ದಾರೆಯೇ ಇಲ್ಲವೇ ಅಥವಾ ಅಕ್ವಿಜೇಶನ್ ಆಫ್ ಲ್ಯಾಂಡ್ ಅದು ಲೀಗಲ್ ಆಗಿ ಇದೆಯೇ ಅಥವಾ ಇಲ್ಲಿಗಲ್ ಆಗಿದೆಯೇ ಅದಕ್ಕೆ ಮಾತ್ರ ಅವರು ಸೀಮಿತವಾಗಿರಬೇಕು, ಅದು ಬಿಟ್ಟು ಅವರು ಸಿಕ್ಕಿದ್ದನ್ನೆಲ್ಲಾ ಮಾತನಾಡಬಾರದು.

(ಗೊಂದಲ)

ಉಪಾಧ್ಯಕ್ಷರು:- ಇವತ್ತು ಕೊನೆ ದಿವಸ. ತಾವು ಏತಕ್ಕೆ ಜಗಳ ಮಾಡುತ್ತೀರಿ?

ಶ್ರೀ ಸಿ. ಬೈರೇಗೌಡ:- ಮಾನ್ಯ ಉಪಾಧ್ಯಕ್ಷರೇ ಮಾನ್ಯ ಸದಸ್ಯರಾದ ಶಿವರಾಮೇಗೌಡರು ನನ್ನ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ನಾನು ಅವರಿಗೆ ಉತ್ತರ ಹೇಳಬೇಕಾಗುತ್ತದೆ. ತಾವು ಅಪ್ಪಣೆ ಯಾರಿಗೆ ಕೊಡುತ್ತೀರೋ ಅವರು ಮಾತ್ರ ಮಾತನಾಡಬೇಕು. ತಾವು ಅಧ್ಯಕ್ಷ ಸ್ಥಾನದಿಂದ

ಅದು ಯಾರೇ ಇರಲಿ ತಾವು ಅಪ್ಪಣೆ ಕೊಟ್ಟ ನಂತರ ಮಾತ್ರ ಅವರು ಮಾತನಾಡಬೇಕು. ತಮ್ಮ ಅಪ್ಪಣೆ ಇಲ್ಲದೆ ನಾನು ಮಾತನಾಡುವಾಗ ನನ್ನ ಹಿಂದೆ ಮಾನ್ಯ ಸದಸ್ಯರಾದ ಶಿವರಾಮೇಗೌಡರು ಎದ್ದು ನಿಂತು ಮಾತನಾಡಿದಾಗ ಅದೂ ತಮ್ಮ ಅಪ್ಪಣೆ ಇಲ್ಲದೆ ಎದ್ದು ನಿಂತರೆ ನಾವು ಏನು ಹೇಳಬೇಕು? ಕುಳಿತುಕೊಳ್ಳಿ ಎಂದೇ ಹೇಳಬೇಕಾಗುತ್ತದೆ. ಅವರು ಎಷ್ಟು ಸಾರಿ ಎದ್ದು ನಿಂತು ಮಾತನಾಡುತ್ತಾರೋ ಅಷ್ಟು ಸಾರಿ ಸಹ ನಾವು ಕುಳಿತುಕೊಳ್ಳಿ ಎಂದು ಹೇಳಲೇಬೇಕಾಗುತ್ತದೆ. ಅವರು ಎದ್ದು ನಿಂತು ಮಾತನಾಡುವುದನ್ನು ಬಿಟ್ಟರೆ ಈ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ನಮಗೆ ಹಿಂದೆ ಆ ತೊಂದರೆ ಇತ್ತು ಎಂದುಕೊಂಡೇ ಅವರನ್ನು ನಾವು ನಿಮ್ಮ ಹಿಂದೆ ಕಳುಹಿಸಿದ್ದೇವೆ.

ಶ್ರೀ ಎಲ್.ಆರ್. ಶಿವರಾಮೇಗೌಡ:- ಮಾನ್ಯ ಅಧ್ಯಕ್ಷಣೀಯವರೇ, ನಾನು ಯಾರಿಗೂ ತೊಂದರೆ ಕೊಡತಕ್ಕಂಥವನು ಅಲ್ಲ. ನನಗೆ ಎಲ್ಲರು ಒಂದೇ. ಇಲ್ಲಿ ಕೆಲವರು ಬಹಳ ಒಳ್ಳೆಯ ಪದಗಳಲ್ಲಿ ಹೇಳುತ್ತಾರೆ. ನಾನು ಸ್ವಲ್ಪ ಜೋರಾದ ಪದಗಳಲ್ಲಿ ಹೇಳುತ್ತೇನೆ. ಏಕೆಂದರೆ ಇವರ ಸರ್ಕಾರವಿದ್ದಾಗ ನಾವು ಅನುಭವಿಸಿದ ಸುಖವನ್ನು ಇಲ್ಲಿ ನಾವು ಯಾವ ರೀತಿಯಲ್ಲಿ ಹೇಳಬೇಕೋ ಎನ್ನುವುದು ನನಗೆ ಅರ್ಥವಾಗದೇ, ಸ್ವಲ್ಪ ಚೆನ್ನಾಗಿ ಒಳ್ಳೆಯ ಪದಗಳಲ್ಲಿ ನಾನು ಹೇಳುತ್ತೇನೆ. ನಾನು ಹೇಳಬೇಕಾದ್ದನ್ನು ನೇರವಾಗಿ ಹೇಳುತ್ತೇನೆ. ಆದರಿಂದ ಅವರಿಗೆ ಸ್ವಲ್ಪ ನೋವಾಗಬಹುದು. ನಾವು ಯಾರಾದರೂ ಶಾಸಕರು ಸ್ವಲ್ಪ ಸ್ಟ್ರಾಂಗ್ ಆಗಿ ಹೇಳಿದರೆ ಆಗ ಅವರು ನೀವು ಹೊಸಬರು ಕುಳಿತುಕೊಳ್ಳಿ, ನಿಮಗೇನು ಗೊತ್ತಿಲ್ಲ ಕುಳಿತುಕೊಳ್ಳಿ. ಎಂದು ಅವರಿಗೆ ಆದ ನೋವಿನ ಹಿನ್ನೆಲೆಯಲ್ಲಿ ಅವರು ಆ ರೀತಿ ಮಾಡನಾಡುತ್ತಾರೆ. ಆದ್ದರಿಂದ ಇನ್ನು ಮುಂದೆ ಆ ರೀತಿ ಹೇಳಬೇಡಿ ಎಂದು ತಾವು ಅವರಿಗೆ ದಯಮಾಡಿ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷಿಣಿಯವರೇ....

ಉಪಾಧ್ಯಕ್ಷರು:- ತಾವು ದಯವಿಟ್ಟು ನೇರವಾಗಿ ವಿಷಯಕ್ಕೆ ಬನ್ನಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾನು ವಿಷಯಕ್ಕೆ ಬರುವುದಕ್ಕಿಂತ ಮುಂಚಿತವಾಗಿ ಒಂದು ವಿಚಾರ ಹೇಳುತ್ತೇನೆ. ಮಾನ್ಯ ಸದಸ್ಯರಾದ ಶಿವರಾಮೇಗೌಡರು ನನ್ನ ಆಪ್ತ ಮಿತ್ರರು. ಈ ಸದನದಲ್ಲಿ ನಾನು ಹಿಂದೆ ಸಹ ಒಂದು ಸಾರಿ ಹೇಳಿದ್ದೇನೆ. ಅವರ ಮಾವನವರು ನಮ್ಮ ಪಕ್ಷದಲ್ಲಿದ್ದರು ಮತ್ತು ಅವರು ಸಹ ಇಲ್ಲಿ ಸದಸ್ಯರಾಗಿದ್ದರು. ಅವರು ನನಗೆ ಬಹಳ ಬೇಕಾದವರು. ನಾನು ಕೆಲವು ಸಾರಿ ಆವೇಶದಲ್ಲಿ ನಾನು ಈಲ್ಡ್ ಆಗದೆ ಇರುವಂತಹ ಸಂದರ್ಭದಲ್ಲಿ ಯಾರಾದರೂ ಮಾತನಾಡಿದರೆ ಕುಳಿತುಕೊಳ್ಳಿ ಎಂದು ಹೇಳುವುದುಂಟು. ಆ ಬಗ್ಗೆ ನಾನು ಕ್ಷಮೆ ಕೇಳಿದ್ದೇನೆ. ಆದರೆ ಬಾಡಿಗೆ ಜನ ಎಂದು ಹೇಳಿದ್ದು ಅದೇನು ಅನ್‌ಪಾರ್ಲಿಮೆಂಟರಿ ವರ್ಡ್ ಅಲ್ಲ, ಬಟ್ ಇಟ್ ಇಸ್ ನಾಟ್ ಎ ಗುಡ್ ಟೇಸ್ಟ್. ಅದನ್ನು ವಾಪಸ್ ತೆಗೆದುಕೊಳ್ಳುತ್ತೇನೆ. ಅದೇ ರೀತಿ ನಿನ್ನೆ ದಿವಸ ಅವರು ಮಾತನಾಡಿ, ಉಗಳುತ್ತೇನೆಂದು ಹೇಳತಕ್ಕಂಥ ಪದ ಕೂಡ ಅನ್‌ಪಾರ್ಲಿಮೆಂಟರಿ ಅಲ್ಲ. ಆದರೂ but it is not in good taste ಆದರೆ ಅವರು ವಾಪಸ್ಸ್ ತೆಗೆದುಕೊಳ್ಳುತ್ತೇನೆಂದು ಹೇಳಲಿಲ್ಲ. ನಾನು ಹೇಳುವುದನ್ನು ತಾವು ಸ್ವಲ್ಪ ದಯಮಾಡಿ ಕೇಳಬೇಕು....

(ಗೊಂದಲ)

MR. DEPUTY SPEAKER:- If it is not in good taste, why are you using it?

SRI R. DAYANANDA RAO:- You should withdraw it.

ಶ್ರೀ ಪಿ.ಜಿ.ಆರ್. ಸಿಂಧ್ಯ:- Madam.....

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ:- ನಿಮಗೆ ಡಯಾಬಿಟೀಸ್ ಇದ್ದರೆ ಟೇಸ್ಟ್ ಹೇಗೆ ಗೊತ್ತಾಗುತ್ತದೆ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ನನಗೇನು ಡಯಾಬಿಟೀಸ್ ಇಲ್ಲ. ಸದ್ಯ ದೇವರು ನನಗೆ ಆರೋಗ್ಯ ಚೆನ್ನಾಗಿ ಕೊಟ್ಟಿದ್ದಾನೆ.

ಶ್ರೀ ಆರ್. ದಯಾನಂದರಾವ್:- ಮಾನ್ಯ ಸಿಂಧ್ಯರವರು ಆ ಮಾತನ್ನು ವಾಪಸ್ಸ್ ತೆಗೆದುಕೊಳ್ಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾನು ಹೇಳಲೇ ಇಲ್ಲ, ಇನ್ನು ವಾಪಸ್ಸ್ ತೆಗೆದುಕೊಳ್ಳುವುದು ಎಲ್ಲಿ ಬಂತು?

ಉಪಾಧ್ಯಕ್ಷರು:- ತಾವು ವಿಷಯಕ್ಕೆ ಬನ್ನಿ.

ಶ್ರಿ ಪಿ.ಜಿ.ಆರ್. ಸಿಂಧ್ಯ:- ನಮ್ಮ ಮಾನ್ಯ ಮುಖ್ಯಮಂತ್ರಿಗಳು ಇತ್ತೀಚಿನ ದಿವಸಗಳಲ್ಲಿ....

ಉಪಾಧ್ಯಕ್ಷರು:- ಬಳ್ಳಾರಿ ವಿಷಯದ ಬಗ್ಗೆ ಹೇಳಿ.

3.55 ಪಿ.ಎಂ.

SRI P.G.R. SINDHYA:- Our attacking is against the Government. After all, Sri T.N.Narasimha Murthy is a creation of this Government. We have to tackle the Chief Minister only. ಬೇರೆ ಇನ್ನು ಯಾರ ಮೇಲೆ ಮಾತನಾಡುತ್ತೀರಾ? ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾಡನಾಡಬೇಕಾಗುತ್ತದೆ. ಬೇರೆ ಏನೂ ಮಾಡನಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳಿದರು? ಅವರು ಏನು ವಿಧಾನಪರಿಷತ್ತಿನಲ್ಲಿ ಹೇಳಿದ್ದರೊ, ಅದನ್ನು ವಾಪಸ್ ತೆಗೆದುಕೊಂಡಿದ್ದೇನೆಂದು ಹೇಳಿದರು. ನನಗೆ ಒಂದು ಕತೆ ಜ್ಞಾಪಕ ಬರುತ್ತದೆ. ಏನಾದರು ತಪ್ಪು ಮಾಡಿದರೆ ಎರಡೂ ಕಿವಿಗಳನ್ನು ಹಿಡಿಸಿ, ಏಳು – ಕೂತುಕೋ, ಏಳು – ಕೂತುಕೋ, ಏಳು – ಕೂತುಕೋ ಹೀಗೆ ಶಿಕ್ಷೆ ಕೊಡುತ್ತೇವೆ. ಅವರು ಮತ್ತೆ ಹಾರಗಳನ್ನು ಹಾಕಿ ಯಾವುದರ ಮೇಲೋ ಕೂರಿಸಿ ಮೆರವಣಿಗೆ ಮಾಡಿಸುತ್ತೇವೆ. ಹೀಗೆಲ್ಲಾ ಹೇಳುವುದು ಸರಿಯೋ? ತಾವೇ ಇದರ ಬಗ್ಗೆ ದಯವಿಟ್ಟು ತೀರ್ಮಾನ ಮಾಡಿ. ಈಗ ಏನಾಗುತ್ತದೆ, ನಾನು ಹೇಳತಕ್ಕಂತಾದ್ದು ನಿಜವಾಗಿದ್ದರೆ You may launch criminal cases. We are not against it. ಎಷ್ಟು ಕರ್ನಾಟಕದ ಜಮೀನು ಹೊರಟುಹೋಗಿದೆ, ಏನಾಗಿದೆ, ಎಲ್ಲೆಲ್ಲಿ ಏನಾಗಿದೆ? ಎಂಬುದರ ಬಗ್ಗೆ ತನಿಖೆ ಮಾಡಿ. ಎಷ್ಟು ಡೀನೋಟಿಫೈ ಆಗಿದೆ ಅನ್ನುವುದರ ಬಗ್ಗೆ ನೀವು ತನಿಖೆ ಮಾಡಿ. ಈ ಸರ್ಕಾರದ ಮತ್ತೊಬ್ಬ ಮಂತ್ರಿಗಳು ಇಲ್ಲಿ ಬಹಳ ದೊಡ್ಡದಾಗಿ ಹೇಳಿಬಿಟ್ಟರು, ಏಕ್ರಿ, ಹೈಕೋರ್ಟಿನ ನ್ಯಾಯಾಧೀಶರುಗಳಿಗೆ ಸಂಬಳ ಕೊಡುವುದಿಲ್ಲವೆ ಎಂದು ಹೇಳಿದ್ದಾರೆ. ಬೇಕಾದರೆ ಪ್ರೊಸೀಡಿಂಗ್ಸ್‌ನ್ನು ತೆಗೆದು ನೋಡಿ. ನಾವು ಅವರಿಗೆ ಸಂಬಳ ಕೊಡುವುದಿಲ್ಲವೆ ಎಂದು ಹೇಳಿದ್ದಾರೆ. .ಅವರಿಗೆ ಸಂಬಳ ಕೊಟ್ಟ ಮೇಲೆ, ಅದರ ಬಗ್ಗೆ ಚರ್ಚೆ ಮಾಡಬಹುದು ಆದರೆ ನಾವು ಮಾತ್ರ ಈ ಕುಲದೀಪ್‌ಸಿಂಗ್ ಬಗ್ಗೆ ಚರ್ಚೆ ಮಾಡಬಾರದು. ಏಕೆ ಚರ್ಚೆ ಮಾಡಬಾರದು? ಚರ್ಚೆ ಮಾಡುವುದರಲ್ಲಿ ಏನು ತಪ್ಪು? ನಾನು ಹೇಳುತ್ತೇನೆ, ಇದು ಕೇವಲ ರಾಜಕಾರಣಕ್ಕೋಸ್ಕರ ಹೆಗಡೆಯವರನ್ನು ಬಯ್ಯಬೇಕು. ಏಕೆ ಹೆಗಡೆಯವರನ್ನು ಬಯ್ಯಬೇಕು? ಏನು ಹೆಗಡೆಯವರು ಅಂಥ ಅಪರಾಧ ಮಾಡಿರುವುದು? ಟೆಲಿಫೋನ್‌ನಿಂದ ಇದು ಪ್ರಾರಂಭ ಆಯಿತು. ಯಾರೂ ಈ ದೇಶದಲ್ಲಿ ಟೆಲಿಫೋನ್ ಟ್ಯಾಪ್ ಮಾಡಿಲ್ಲವಾ? ಹಾಗಿದ್ದರೆ ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟ್‌ನ್ನು ಏಕೆ ಇಟ್ಟಿದ್ದೀರಿ? ನನ್ನ ಮನೆಗೆ ಎಷ್ಟು ಜನ ವಿಸಿಟರ್ಸ್ ಬರುತ್ತಾರೆಂದು ಪೋಲೀಸ್ ಡಿಪಾರ್ಟ್‌ಮೆಂಟಿನವರು ಬಂದು ಲೆಕ್ಕಾ ಬರೆದುಕೊಂಡು ಹೋಗುತ್ತಾರೆ.

ಉಪಾಧ್ಯಕ್ಷಿಣಿಯವರು:- ಈ ವಿಷಯಕ್ಕೆ ಸಂಬಂಧಪಡದೇ ಇರುವಂಥಾದ್ದನ್ನು ಮಾತನಾಡಬೇಡಿ. ಏನಿದ್ದರೂ ವಿಷಯಕ್ಕೆ ಸಂಬಂಧಪಟ್ಟಿದ್ದನ್ನು ಹೇಳಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಿನ್ನೆ ಇವರು ಈ ವಕಾಲತ್‌ನ್ನು ಮಾಡಿದ್ದಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಇವತ್ತು ಬಳ್ಳಾರಿ ಮೇಲೆ ವಿಷಯ ಇರುವುದರಿಂದ, ಬಳ್ಳಾರಿ ಮೇಲೆ ಮಾತನಾಡಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಕುಲದೀಪ್ ಸಿಂಗ್ ಬಗ್ಗೆ ಏಕೆ ಚರ್ಚೆ ಮಾಡಬಾರದು?

ಉಪಾಧ್ಯಕ್ಷಿಣಿಯವರು:- ಇಲ್ಲಿ ಕುಲದೀಪ್ ಸಿಂಗ್‌ರವರು ವಿಷಯ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಹಾಗಿದ್ದರೆ ಅದನ್ನು ರೆಕಾರ್ಡಿನಿಂದ ವಾಪಸ್ ತೆಗೆದು ಬಿಡಿ.

ಶ್ರೀ ಮಲ್ಲಾರಿಗೌಡ: ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಅವರು ಬಳ್ಳಾರಿ ಬಿಟ್ಟು ಬೆಂಗಳೂರಿಗೆ ಏಕೆ ಬರುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಮ್ಮ ನಾಯಕರು ಏನು ಹೇಳಿದರು?

ಶ್ರೀ ಕೆ. ಶಿವಮೂರ್ತಿ:- ಈಗ ಇವರು ಈ ವಕಾಲತ್‌ನ್ನು ಏಕೆ ವಹಿಸುತ್ತಾರೆಂದು ನಮಗೆ ಅರ್ಥವಾಗುತ್ತಿಲ್ಲ. ಅವರು ಏನೋ ಹೇಳಿ ಕೊನೆಗೆ ಎಲ್ಲೊ ಮಾತನಾಡುತ್ತಿದ್ದಾರೆ. ತಾವು ಏನು ಅಪಾದನೆಗಳನ್ನು ಮಾಡುತ್ತಾ, ಕುಲದೀಪ್ ಸಿಂಗ್ ಆಯೋಗದ ಬಗ್ಗೆ ಆವೇಶವಾಗಿ ಮಾತನಾಡುತ್ತಿದ್ದೀರಿ. ಇದೇ ಆವೇಶದಿಂದ ನಿನ್ನೆ ದಿವಸ ಮಾತನಾಡಬಹುದಾಗಿತ್ತಲ್ಲಾ? ನಿನ್ನೆ ದಿವಸ ಏಕೆ ವಾಕ್ ಔಟ್ ಮಾಡಿದಿರಿ? ಅದಕ್ಕೆ ಇವತ್ತು ಇದನ್ನೆಲ್ಲಾ ಸೃಷ್ಟಿ ಮಾಡಿದಂತಹ ಮಧುದಂಡವತೆ ಇದ್ದಾರೆ, ಮಾನ್ಯ ಪ್ರಕಾಶ್‌ರವರು ಇದ್ದಾರೆ. ಆಮೇಲೆ ನಿಮ್ಮ ಮಂತ್ರಿಗಳು ಇದ್ದಾರೆ. ಆದ್ದರಿಂದ ಈ ಪ್ರಕರಣದ ರುಚಿಯನ್ನು ತಾವೇ ಅನುಭವಿಸಬೇಕು. ತಾವು ಏನು ಆವೇಶದಿಂದ ಹೇಳುತ್ತಿದ್ದೀರೋ, ಅದನ್ನೆಲ್ಲಾ ತಮ್ಮವರೇ ಮಾಡಿರಕ್ಕಂತಾದ್ದು, ಬೇರೆಯವರಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನನಗೆ ಆವೇಶ ಅನ್ನತಕ್ಕಂತಾದ್ದು ಇಲ್ಲ. ಬಡವನ ಸಿಟ್ಟು ದವಡೆಗೆ ಮೂಲ ಅನ್ನುವ ಹಾಗೆ, ನನ್ನ ಆವೇಶವನ್ನು ಯಾರು ಸ್ವಾಮಿ ಕೇಳುತ್ತಾರೆ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ:- ನನ್ನ ಆಸೆ ಏನೆಂದರೆ, ಬೆಳಿಗ್ಗೆ ತಾನೆ ಮಾನ್ಯ ವಾಟಾಳ್ ನಾಗರಾಜ್‌ರವರು ಹೋಗಿ ಬಾವಿಯಲ್ಲಿ ಕುಳಿತುಕೊಂಡಿದ್ದಾಗ ಇದು ಕೊನೆಯ ದಿವಸವಾದ್ದರಿಂದ ಯಾರೂ ಸಹ ಮುಖ ಗಂಟು ಹಾಕಿಕೊಂಡು ಹೋಗಬಾರದೆಂದು ಹೇಳಿ ಅವರು ಮನ ಒಲಿಸಿ ಅವರ ಸ್ಥಾನಕ್ಕೆ ಕಳುಹಿಸಿದ್ದಾಯಿತು. ಅನೇಕ ಪ್ರಸಂಗಗಳು ಹಿಂದೆ ನಡೆದಿವೆ. ಅದನ್ನೆಲ್ಲಾ ಮತ್ತೆ ಮತ್ತೆ ಎತ್ತಿ ಅದಕ್ಕೆ ಪ್ರತಿಯಾಗಿ ಇನ್ನೊಂದು ಭಾಷೆ ಉಪಯೋಗಿಸಿ ಮುಖ ಗಂಟು ಹಾಕಿಕೊಂಡು ಕಡೇ ದಿವಸ ಮನೆಗೆ ಹೋಗುವುದಕ್ಕೆ ತಾವುಗಳೂ ಯಾರೂ ಅವಕಾಶ ಮಾಡಿಕೊಡಬಾರದೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ತಮ್ಮ ಮಾತಿಗೆ ನಾನು ಬೆಲೆ ಕೊಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ತಾವು ಇದೇ ಮಾತನ್ನು ನಿನ್ನೆ ಸಭಾ ನಾಯಕರ ಕಿವಿಯಲ್ಲಿಯಾದರು ಹೇಳಿದ್ದಿದ್ದರೆ ಸಾಕಾಗುತ್ತಿತ್ತು.

ಉಪಾಧ್ಯಕ್ಷರು:- ಇಂದು ಕಡೆಯ ದಿವಸವೆಂದು ಹೇಳುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗ ಪ್ರಶ್ನೆ ಏನೆಂದರೆ...

ಶ್ರೀ ವಾಟಾಳ್ ನಾಗರಾಜ್:- ಇವರು ಮಾತನಾಡುವಾಗ ನಾನು ಏನು ಮಧ್ಯೆ ಮಾತನಾಡುವುದಿಲ್ಲ. ಇವರು ಎಷ್ಟು ಹೊತ್ತು ಬೇಕಾದರೂ ಮಾತನಾಡಲಿ. ನಾನು ಅವರು ಮಾತು ಕೇಳುತ್ತೇನೆ .

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ವಾಟಾಳ್ ನಾಗರಾಜ್‌ರವರು ಲವಕುಶ ಇಬ್ಬರಿಗೂ ಸ್ನೇಹಿತರು. ಹಾಗೆಯೇ ನನ್ನ ಮಿತ್ರರಾದ ಶಿವಮೂರ್ತಿಯವರು ನನ್ನ ಬಗ್ಗೆ ಅಭಿಮಾನ ಇಟ್ಟುಕೊಂಡಿದ್ದಾರೆ. ಅವರು ಏನು ಹೇಳಿದ್ದಾರೆ ಅಂದರೆ, ನಿನ್ನೆ ನೀವು ಇಲ್ಲಿ ಕುಳಿತುಕೊಂಡು ಈ ವಾದವನ್ನು ಮಾಡಿದ್ದಾರೆ, ನಿಮ್ಮ ಗಂಡಸುತನವನ್ನೋ, ನಿಮ್ಮ ಧೈರ್ಯವನ್ನೊ ನೋಡಬಹುದಿತ್ತು ಎಂದು ಹೇಳಿದರು. ಇಲ್ಲಿ ಮಾತನಾಡಿದ್ದರೆ ಏನು ಮಾಡಿಬಿಡುತ್ತಿದ್ದರು? ಮಾನ್ಯ ವೀರೇಂದ್ರ ಪಾಟೀಲ್‌ರವರ ಕೈಕೆಳಗೆ ನಾನು ಕೂಡ ಒಬ್ಬ ಕಾರ್ಯದರ್ಶಿಯಾಗಿ 4-5 ವರ್ಷಕೆಲಸ ಮಾಡಿದ್ದೇನೆ. ಇವರು ಶ್ರೀಮತಿ ಇಂದಿರಾಗಾಂಧಿಯವರ ವಿರುದ್ಧ ಹೋದಾಗ ನಾವು ಅವರನ್ನು ಹೊತ್ತುಕೊಂಡು ಮೆರೆದಾಡಿದ್ದೇವೆ. ಗಾಯತ್ರಿ ಸತ್ತು ಹೋದುದು ನಿಮಗೆಲ್ಲ ಜ್ಞಾಪಕವಿದೆಯಲ್ಲ? ಕಾಗೋಡು ತಿಮ್ಮಪ್ಪನವರೇ, ಅವಳ ಭೂತ ನಿಮ್ಮನ್ನು ಯಾವಾಗ ಬಂದು ಹಚ್ಚಿಕೊಳ್ಳುತ್ತದೋ ನನಗಂತೂ ಗೊತ್ತಿಲ್ಲ. ಯಾರೇ ಆಗಲಿ, ತತ್ವಗಳ ವಿಚಾರ ಮಾತನಾಡುವಾಗ, ಗಾಜಿನ ಮನೆಯಲ್ಲಿ

ಕುಳಿತುಕೊಂಡು ಮಾತನಾಡಬಾರದು. ಅದು ತಮಗು ಚುಚ್ಚುತ್ತದೆ ಎನ್ನುವುದು ಜ್ಞಾಪಕದಲ್ಲಿರಬೇಕು 1969ರಲ್ಲಿ ಕಾಂಗ್ರೆಸ್ ಇಬ್ಭಾಗ ಆಯಿತಲ್ಲ?

(ಗೊಂದಲ)

ಉಪಾಧ್ಯಕ್ಷಿಣಿಯವರು:- ಸಿಂಧ್ಯರವರೇ, ಬಳ್ಳಾರಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೀಮಿತವಾಗಿ ಮಾತ್ರ ತಮ್ಮ ಮಾತುಗಳನ್ನು ಮುಂದುವರಿಸಿ, ಈಗ ನಿಮ್ಮ ಪೀಠಿಕೆಯೇ ಜಾಸ್ತಿ ಆಯಿತು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಆ ವಿಚಾರದ ಕುರಿತು ನಿಧಾನವಾಗಿ ಬರುತ್ತಾ ಇದ್ದೇನೆ. ಟೆಲಿಫೋನ್ ಪ್ರಕರಣದ ಬಗ್ಗೆ ಎರಡು ದಿವಸಗಳ ಕಾಲ ಇಲ್ಲಿ ಚರ್ಚೆ ನಡೆಯಿತು, ಕುಲದೀಪ್‌ಸಿಂಗ್ ವರದಿಯ ಮೇಲೆ ಒಂದು ದಿವಸ ಚರ್ಚೆ ನಡೆಯಿತು, ಇದರ ಬಗ್ಗೆ ಅರ್ಧ ದಿನವೂ ಇಲ್ಲಿ ಚರ್ಚೆ ಮಾಡುವುದು ಬೇಡವೇ?

ಶ್ರೀ ವಾಟಾಳ್ ನಾಗರಾಜ್:- ನಾವು ಬೇಕಾದರೆ ರಾತ್ರಿ ಇಡೀ ಇಲ್ಲಿ ಕುಳಿತುಕೊಳ್ಳುತ್ತೇವೆ. ರಾತ್ರಿಯೆಲ್ಲಾ ರಾಮಾಯಣ ನಡೆಯಲೇಬೇಕು. ನಡೆಯಲಿ...

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈಗ ನಾನು ಯಾವುದೋ ಒಂದು ಆಕ್ರೋಶವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಮಾತನಾಡುತ್ತಿಲ್ಲ, ರಾಗ-ದ್ವೇಷ ಬಿಟ್ಟು ನಾನು ಮಾತನಾಡುತ್ತಿದ್ದೇನೆ. ವಿಷಯಕ್ಕೆ ನೇರವಾಗಿ ಬರುತ್ತಿದ್ದೇನೆ. ಇದರಲ್ಲಿರುವುದು ಏನು? ಈ 17ಎಕರೆ ಜಮೀನನ್ನು 1982ನೇ ಇಸವಿಯಲ್ಲಿ ಸರಕಾರದವರು ಬಳ್ಳಾರಿಯಲ್ಲಿರತಕ್ಕಂಥ ಜನಗಳಿಗೆ ಸೈಟ್ ಮಾಡಿ ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮಾಡಿದರು. ಆದರೆ 1982 ರಿಂದ 1990ರವರೆಗೂ ಕರಸ್ಪಾಂಡೆನ್ಸ್ ನಡೆಯಿತು. ಬೇಕಾದಷ್ಟು ಕರೆಸ್ಪಾಂಡೆನ್ಸ್ ಕೋರ್ಟ್, ಹತ್ತಾರು ಜನರ ಅಡ್ವಕೇಟ್ ಜನರಲ್‌ಗಳು, ಲಾ-ಸೆಕ್ರೆಟರಿಗಳು, ಮಂತ್ರಿಗಳು ಇದರಲ್ಲಿ ಬಂದು ಹೋದರು. ಇದರ ಬಗ್ಗೆ ನಡೆದ ಎಲ್ಲಾ ವ್ಯವಹಾರಗಳ ದೊಡ್ಡ ಕಡತವೇ ಇಲ್ಲಿದೆ. ಮಾನ್ಯ ಎಂ.ಪಿ.ಪ್ರಕಾಶ್‌ರವರು ಇದಕ್ಕೆ ಶಿಫಾರಸ್ಸು ಮಾಡಿದ್ದಾರೆ, ಮಾನ್ಯ ಮಧುದಂಡವತೆಯವರು ಇದಕ್ಕೆ ಶಿಫಾರಸ್ಸು ಮಾಡಿದ್ದಾರೆ. ನನಗೂ ಸಂಬಂಧಪಟ್ಟವರು ಮಂತ್ರಿಯಾಗಿದ್ದಾಗ ಬಂದು ಕೇಳಿಕೊಂಡಾಗ ನಾನು ಕೂಡ ಹೋಗಿ ಹೇಳಿದ್ದೇನೆ, ಯಾರೋ ಪುಲ್ಲಯ್ಯನವರಂತೆ, ಅವರು ಸಮಸ್ಯೆಗಳು ಏನು ಎಂದು ನೋಡಿ ಎಂದು ಹೇಳಿದ್ದೇನೆ. ಇವ್ಯಾವನ್ನೂ ನಾನು ಮುಚ್ಚಿಡುವುದಕ್ಕೆ ಪ್ರಯತ್ನ ಮಾಡುತ್ತಾ ಇಲ್ಲ. ಇದರಲ್ಲಿ ಪ್ರಶ್ನೆ ಉದ್ಭವವಾಗಿರತಕ್ಕಂಥಾದ್ದು ಏನೆಂದರೆ, ಮಾನ್ಯ ಮಂತ್ರಿಗಳು ಹೇಳಿಕೆ ನೀಡಿದ್ದು, ಕಾಲು ಕೆದರಿ ಜಗಳಕ್ಕೆ ಕರೆಯುವ ಹಾಗೆ ಇದೆ. ಇವರ ಹೇಳಿಕೆ ಈ ರೀತಿ ಇರಲಿಲ್ಲವಾದಲ್ಲಿ ನಾವು ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುತ್ತಾ ಇರಲಿಲ್ಲ. ನಾವು ಕೂಡ ಮನುಷ್ಯರೇ ಇದ್ದೇವೆ. ಮಾನ್ಯ ಹುಚ್ಚಮಾಸ್ತಿಗೌಡರು ನ್ಯಾಯವನ್ನು ಹೇಳಲಿ. ನಾವು ಒಪ್ಪಿಕೊಳ್ಳುತ್ತೇವೆ. ಏಕೆಂದರೆ, ಅವರು ನ್ಯಾಯಸ್ಥಾನದಲ್ಲಿ ಕುಳಿತುಕೊಂಡು ಹೇಳುವುದಕ್ಕೆ ಅರ್ಹತೆಯನ್ನು ಕೂಡ ಪಡೆದಿದ್ದಾರೆ. ಶ್ರೀಮತಿ ನಾಗರತ್ನಮ್ಮನವರು, ಮಾನ್ಯ ಖರ್ಗೆಯವರು, ಮಾನ್ಯ ನರಸಿಂಹಮೂರ್ತಿಯವರು ನ್ಯಾಯವನ್ನು ಹೇಳಿದ್ದರೆ ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಈಗ ಇಂಥವರು ನಮಗೂ ನ್ಯಾಯ ಹೇಳುವುದಕ್ಕೆ ಹೊರಟಿದ್ದಾರಲ್ಲ? ಈ ನ್ಯಾಯ ಇದಕ್ಕೆ ಏಕೆ ಅನ್ವಯವಾಗುವುದಿಲ್ಲ ಎಂದು ನಾನು ಕೇಳುತ್ತಿರುವುದು? ಬಳ್ಳಾರಿಗೆ ನಿಮ್ಮ ನ್ಯಾಯದಂಡ ಎಲ್ಲಿಗೆ ಹೋಗಿತ್ತು? ಒಬ್ಬರಿಗೆ ಒಂದು ನ್ಯಾಯಾನಾ? ನಿಮ್ಮ ಚರಿತ್ರೆ ನಮಗೆ ಗೊತ್ತಿಲ್ಲವೇ? ಈ ರಾಜ್ಯಕ್ಕೆ ಗೊತ್ತಿಲ್ಲವೇ? 1970 ರಿಂದ 1980ರವರೆಗೆ ನೀವು ಯಾವ ಪಾರ್ಟಿಯಲ್ಲಿ ಇದ್ದಿರಿ? ಅಲ್ಲಿಂದ ಯಾವುದಕ್ಕೋಸ್ಕರವಾಗಿ ನೀವು ಅಲ್ಲಿಗೆ ಹೋದಿರಿ? ಏನೆಲ್ಲಾ ಮಾಡಿದ್ದೀರಿ ಎಂಬುದು ಯಾರಿಗೂ ಗೊತ್ತಿಲದಿರತಕ್ಕಂಥ ವಿಚಾರವೇ?

(ಗೊಂದಲ)

ಉಪಾಧ್ಯಕ್ಷರು:- ತಾವು ಈಗ ವಿಷಯಕ್ಕೆ ಬಂದು ನಂತರ ಬೇರೆ ಎಲ್ಲೋ ಹೊರಟಿರಿ. ಈಗ ವಿಪ್ ಅವರು ಏನೋ ಹೇಳುತ್ತಾರೆ. ಕೇಳೋಣ.

ಶ್ರಿ ಪಿ.ಜಿ.ಆರ್. ಸಿಂಧ್ಯ:- ನಾನು ಮುಗಿಸಿಬಿಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಇಂದು ಮುಂಜಾನೆ ಏನೋ ಒಂದು ಘಟನೆ ಶ್ರೀ ವಾಟಾಳ್ ನಾಗರಾಜ್ ಅವರಿಗೆ ಸಂಬಂಧಪಟ್ಟಂತೆ ನಡೆದಾಗ ನಾವೆಲ್ಲರು ಕೂಡಿ ವಿನಂತಿಮಾಡಿದೆವು, ಇವತ್ತು ಕೊನೇ ದಿವಸ. ಇಲ್ಲಿವರೆಗೂ ಶಾಂತವಾಗಿ ಚರ್ಚೆ ಮಾಡಿದ್ದೇವೆ, ನಮ್ಮ ನಮ್ಮಲ್ಲಿರುವ ದ್ವೇಷ ಭಾವನೆ ಮರೆತು ಹೋಗಬೇಕೆಂದು ಎಲ್ಲರೂ ಹೇಳಿರುವುದರಿಂದ ಇದೇ ಮಾತನ್ನು ನಾನು ಉಪನಾಯಕರಲ್ಲು ಅರಿಕೆ ಮಾಡಿಕೊಳ್ಳುತ್ತೇನೆ. ವಿಷಯದ ಮೇಲೆ ಮಾತ್ರ ಅವರು ಮಾತನಾಡಿದರೆ ಚೆನ್ನಾಗಿರುತ್ತದೆ.

ಶ್ರೀ ಎಸ್.ಹೆಚ್. ಕೌಜಲಗಿ:- ಕೊನೇ ದಿವಸ ಅಂತ ಈರುಳ್ಳಿ ತಿನಿಸುತ್ತೀರೇನು?

ಶ್ರೀ ವಾಟಾಳ್ ನಾಗರಾಜ್:- ರೊಟ್ಟಿಯನ್ನು ತಿನಿಸಿ ಸ್ವಾಮಿ.

ಶ್ರಿ ಮಲ್ಲಾರಿಗೌಡ ಎಸ್. ಪಾಟೀಲ್:- ತಿಂದು ಅಭ್ಯಾಸವಿರುವವರು ಮಾತ್ರ ಈರುಳ್ಳಿ ತಿನ್ನುತ್ತಾರೆ, ಎಲ್ಲರೂ ತಿನ್ನುವುದಕ್ಕೆ ಆಗುವುದಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್:- ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮೊದಲು ಅನಂತಕೃಷ್ಣರನ್ನು ಅವರ ಜಾಗಕ್ಕೆ ಕಳಿಸಿ ಅಲ್ಲಿ ಬೇಕಾದರೆ ಮಾತಾಡಲಿ.

ಶ್ರಿ ಪಿ.ಜಿ.ಆರ್. ಸಿಂಧ್ಯ:- ಈಗ ಅವರು ಮಾತನಾಡಿದ್ದಾದರೂ ಏನು?

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್:- ಅವರು ಏನೂ ಹೇಳಲಿಲ್ಲ, ಇಂತಹ ಸಣ್ಣ ವಿಷಯಕ್ಕೆಲ್ಲ ಹೋಗಬೇಡಿ ಅಂದರು ಅಷ್ಟೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಸಣ್ಣತನ ಯಾರದು? ಇವರದ್ದು ಸಣ್ಣತನ. ಆಕಸ್ಮಾತ್ ಈ ಜಾಗ ಸಿಕ್ಕಿದೆ ಎಂದು ಬಾಯಿಗೆ ಬಂದ ಹಾಗೆ ಇವರು ಮಾತಾಡುತ್ತಿದ್ದಾರೆ. ಇವರ ಮಾತನ್ನು ನಂಬಿಕೊಂಡು ನಾನು ಎರಡುವರ್ಷ ನಾನು ಜೈಲಿಗೆ ಹೋಗಿದ್ದೆ.

(ಗೊಂದಲ)

ಉಪಾಧ್ಯಕ್ಷರು:- ವಿಷಯ ಬಿಟ್ಟು ಬೇರೆ ಏನೇ ಹೇಳಿದರೂ ಸಹ ಕಡತಕ್ಕೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ತಪ್ಪು ತಿಳಿವಳಿಕೆ ಆಗಬಾರದು, ಅನಂತಕೃಷ್ಣ ಅವರು ಹೇಳಿದ್ದು, ನೀವಿನ್ನೂ ಬೆಳೆಯುವವರು, ಇಂತಹ ಸಣ್ಣ ವಿಷಯಕ್ಕೆ ಹೋಗಬೇಡಿ ಅಂತ ಮಾತ್ರ ಅವರು ಹೇಳಿದ್ದು ದಯಮಾಡಿ ಅವರ ಬಗ್ಗೆ ತಪ್ಪು ತಿಳಿದುಕೊಳ್ಳಬೇಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅನಂತಕೃಷ್ಣ ಅವರು ಈ ಮನೆಯ ಹಿರಿಯ ಸದಸ್ಯರು.

ಶ್ರೀ ಕರಿಯಣ್ಣ:- ಪಾಯಿಂಟ್ ಆಫ್ ಆರ್ಡರ್.

ಉಪಾಧ್ಯಕ್ಷರು:- ಅವರ ಪಾಯಿಂಟ್ ಆಫ್ ಆರ್ಡರ್ ಏನಿದೆ ಕೇಳೋಣ.

ಶ್ರೀ ಕರಿಯಣ್ಣ:- ಇವರಿಗೂ ನಮ್ಮ ನಾಯಕರಿಗೂ ವೈಯುಕ್ತಿಕವಾಗಿ ಏನಾದರು ಇದ್ದರೆ ಅವರ ಮನೆಯಲ್ಲಿ ಹೋಗಿ ಜಗಳ ಮಾಡಲಿ. ಅದನ್ನು ಬಿಟ್ಟು...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಅಲ್ಲಿ ಪೋಲೀಸರನ್ನು ಇಟ್ಟಿದ್ದಾರೆ. ಮನೆಯ ಮುಂದೆ ಪೋಲೀಸರು ಬಂದೂಕ ಹಿಡಿದುಕೊಂಡು ನಿಂತಿರುತ್ತಾರೆ. ಅಲ್ಲಿ ಏನು ಜಗಳ ಆಡುವುದು?

(ಗೊಂದಲ)

MADAM DEPUTY SPEAKER:- There is no point of order. ಮಾನ್ಯ ಸಿಂಧ್ಯಾ ಅವರೇ, ತಾವು ಮುಂದುವರೆಸಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಆಯಿತು, ಪಾಯಿಂಟೇ ಇಲ್ಲ ಎಂದು ರೂಲಿಂಗ್ ಕೊಟ್ಟಿರಿ. ಮಾನ್ಯ ಉಪಾಧ್ಯಕ್ಷಿಣಿಯವರೇ, ನನಗೆ ಮಾನ್ಯ ಸದಸ್ಯರಾದ ಅನಂತಕೃಷ್ಣರವರ ಬಗ್ಗೆ ಅವರು ನನಗೆ ಒಂದು ದೊಡ್ಡಮಾತನ್ನು ಹೇಳಿದರೆ ನನಗೇನಾದರೂ ಬೈದರೆ, ಈ ಸದನದಲ್ಲಿ ಬೈದರೆ ನಾನೇನು ತಪ್ಪು ತಿಳಿದುಕೊಳ್ಳುವುದಿಲ್ಲ. ಏಕೆಂದರೆ ಅವರು ನಮ್ಮ ತಂದೆ ಸಮಾನರು. ಏಕೆಂದರೆ ಅವರು ಮಗ ನನ್ನ ಜೊತೆಯಲ್ಲಿ ಓದುತ್ತಿದ್ದ, ಅವರ ಬಗ್ಗೆ ನನಗೆ ಬಹಳ ಗೌರವ ಇದೆ. ನೀನು ತಪ್ಪು ದಾರಿಗೆ ಹೋಗಬೇಡ ಎಂದು ಅವರು ಹೇಳುವುದರಲ್ಲಿ ಏನೂ ತಪ್ಪು ಇಲ್ಲ, ನೀವು ಹೇಳಿ ಅದನ್ನು. ನಾನು ಅವರ ಬಗ್ಗೆ ಅಲ್ಲ ಹೇಳಿದ್ದು, ಈ ಸರ್ಕಾರದ ನೇತಾರರ ಬಗ್ಗೆ, ಈ ಸರ್ಕಾರದ ಮುಖಂಡರು ಇದ್ದಾರಲ್ಲಾ, ನೀತಿ ಹೇಳುವುದಕ್ಕೆ ಹೊರಟಿದ್ದಾರಲ್ಲಾ, ನಮ್ಮ ಮೇಲೆ ತತ್ವ ಹೇಳುವುದಕ್ಕೆ ಹೊರಟಿದ್ದಾರಲ್ಲಾ, ಆ ತತ್ವದ ಬಗ್ಗೆ ಸ್ವಲ್ಪ ಈ ರಾಜ್ಯದ ಜನತೆಗೆ ಗೊತ್ತಾಗಬೇಕು ಎನ್ನುವ ದೃಷ್ಟಿಯಿಂದಾಗಿ ಹೇಳುತ್ತಿದ್ದೇನೆ. ಈಗ ವಿಷಯಕ್ಕೆ ಬಂದುಬಿಡುತ್ತೇನೆ. ಆದುದರಿಂದ, ಮಾನ್ಯ ಕಾಗೋಡು ತಿಮ್ಮಪ್ಪನವರು.

ಉಪಾಧ್ಯಕ್ಷಿಣಿಯವರು:- ಈಗ ವಿಷಯದ ಬಗ್ಗೆ ಮಾತನಾಡುತ್ತಾರೆ. ತಾವು ಕುಳಿತುಕೊಳ್ಳಿ.

ಶ್ರೀ ಕಾಗೋಡು ತಿಮ್ಮಪ್ಪ:- ಆಯವ್ಯಯದ ಬಗ್ಗೆ ಚರ್ಚೆಯಾಗಿದೆ, ನಾನಾ ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚೆಯಾಗಿದೆ. ಆಗ ನಿಮ್ಮ ಈ ಅಭಿಪ್ರಾಯಗಳನ್ನು ಹೇಳಬಹುದಾಗಿತ್ತು.

(ಗೊಂದಲ)

ಉಪಾಧ್ಯಕ್ಷಿಣಿಯವರು:- ಅವರು ಯೀಲ್ಡ್ ಆಗಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ತಾವು ನಮಗೆ ಬಹಳ ಸಹಕಾರ ಕೊಟ್ಟಿದ್ದೀರಿ, ಮುಂದೆ ಹೋಗಬೇಕು ಎಂದು ಹೇಳಿದ್ದೀರಿ, ಈಗ ನಾನು ನೇರವಾಗಿ ವಿಷಯಕ್ಕೆ ಬಂದುಬಿಡುತ್ತೇನೆ.

ಉಪಾಧ್ಯಕ್ಷಿಣಿಯವರು:- ಈಗ ನೀವು ಇನ್ನೂ ಬಂದಿಲ್ಲವೇ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಇನ್ನು ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಇನ್ನೂ ಅವರು ಅನಂತಪುರದಲ್ಲಿದ್ದಾರೆ. ಇನ್ನೂ ಬಳ್ಳಾರಿಗೆ ಬಂದಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಈಗ ತಳಪಾಯ ಅಗೆಯುತ್ತಿದ್ದಾರೆ. ಆಮೇಲೆ ಬಿಲ್ಡಿಂಗ್ ಕಟ್ಟುವ ಕೆಲಸ ಹಿಡಿಯುತ್ತಾರೆ.

ಉಪಾಧ್ಯಕ್ಷಿಣಿಯವರು:- ಈಗ ವಿಷಯಕ್ಕೆ ಬಂದಿದ್ದಾರಂತೆ, ಅವರೇ ಹೇಳುತ್ತಿದ್ದಾರೆ, ಕೇಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಕೆಲವು ವಿಚಾರಗಳನ್ನು ನಾನು ಈ ಸದನದ ರಕ್ಷಣೆಯನ್ನು ಪಡೆದು ಹೇಳಿರತಕ್ಕಂಥ ವಿಚಾರಗಳಲ್ಲ. ಈ ಸದನದಲ್ಲಿ ನನಗು ಸಹಿತ ಒಂದು ಜವಾಬ್ದಾರಿ ಇದೆ. ನಾನು ಮಾತನಾಡುತ್ತಿರತಕ್ಕಂಥ ಸಂದರ್ಭದಲ್ಲಿ ಆದಷ್ಟು ಕಡಿಮೆ ತತ್ವ ಮತ್ತು ನೀತಿಗಳ ಬಗ್ಗೆ ನಾನು ಮಾತನಾಡುತ್ತೇವೆ. ಏಕೆಂದರೆ ನಾನು ಮುಖ್ಯಮಂತ್ರಿ ಸ್ಥಾನಕ್ಕೋ ಮತ್ತೊಂದು ಸ್ಥಾನಕ್ಕೊ ಆ ಕಡೆ ಹೋಗಿ ಕುಳಿತುಕೊಂಡು ಯಾವಾಗ ಏನು ಆಗಬಹುದು ಎನ್ನತಕ್ಕಂತ ಸಂಶಯ ಅನೇಕ ಸಂದರ್ಭದಲ್ಲಿ ನಮ್ಮ ದೇಶದ ರಾಜಕೀಯದಲ್ಲಿ ಆಗಿ ಹೋಗಿದೆ. ಆದುದರಿಂದ ನಾನು ಈ ತತ್ವಗಳ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಗಾಜಿನ ಮನೆಯಲ್ಲಿ ನಾನು ಕುಳಿತು ಕಲ್ಲನ್ನು ಹೊಡೆಯುವುದಕ್ಕೆ ಹೋಗುವುದಿಲ್ಲ.

ಉಪಾಧ್ಯಕ್ಷಿಣಿಯವರು:- ಇನ್ನು ನೀವು ವಿಷಯಕ್ಕೆ ಬಂದಿಲ್ಲವೇ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಬಂದುಬಿಟ್ಟಿದ್ದೇನೆ. ಬಳ್ಳಾರಿಗೆ.

ಉಪಾಧ್ಯಕ್ಷಿಣಿಯವರು:- ಬಳ್ಳಾರಿಯಲ್ಲಿ ಗಾಜಿನ ಮನೆ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ನರಸಿಂಹಮೂರ್ತಿಯವರು ಇದನ್ನು ತತ್‌ಕ್ಷಣ ಆನ್ ದಿ ಸ್ಪಾಟ್ ಕೌನ್ಸಿಲ್‌ನಲ್ಲಿ ಆರ್ಡರನ್ನು ವಾಪಸ್ ತೆಗೆದುಕೊಂಡಿದ್ದಾರೆ. ಯಾರ ಪ್ರೆಷರ್‌ಗೆ ನೀವು ಯೀಲ್ಡ್ ಆಗಿದ್ದೀರಿ? ಏತಕ್ಕೆ ನೀವು ಯೀಲ್ಡ್ ಆಗಿದ್ದೀರಿ? ನಿಮಗೆ ಏತಕ್ಕೆ ಕೆಟ್ಟ ಹೆಸರು? ಅವರು ಹೇಳಿದ್ದರು ಎಂದು ಕಾಣುತ್ತದೆ, ಇದನ್ನು ಮಾಡಿ ಎಂದು, ಅದನ್ನು ಹೇಳುವುದಿದ್ದರೆ ಹೇಳಿಬಿಡಿ, ನಾವು ಏನೂ ನಿಮ್ಮ ಬಗ್ಗೆ ತಕರಾರು ಮಾಡುವುದಿಲ್ಲ. ಅಥವಾ ಇನ್ನು ಯಾರಾದರು ಹೇಳಿದ್ದರೆ ಅದನ್ನೂ ಸಹಿತ ಹೇಳಿ. ಒಟ್ಟಿನಲ್ಲಿ ನಾವು ಈಗ ಮೂರು ಜನ ಒಕ್ಕೊರಲಿನಿಂದ ಹೇಳುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ನಿಮಗೆ ನಾವು ನಮ್ಮ ಪಕ್ಷದಿಂದ ಒಟ್ಟಾರೆ ಹೇಳುತ್ತಿದ್ದೇವೆ, ಮಾನ್ಯ ಮುಖ್ಯಮಂತ್ರಿಗಳು ಎಂದರೆ ಅವರ ಜೊತೆಯಲ್ಲಿ ನೀವೂ ಸೇರುತ್ತೀರಿ. ಈಗ ಈ ವಿಚಾರದಲ್ಲಿ ಇವರು ಹೇಳತಕ್ಕಂಥ ಮೌಲ್ಯಗಳಿಗೆ ನಿಲ್ಲುವುದಾದಲ್ಲಿ ಇವರು ರಾಜೀನಾಮೆಯನ್ನು ಕೊಡಬೇಕಾಗಿತ್ತು. ಮೌಲ್ಯಗಳ ಬಗ್ಗೆ ಮಾತನಾಡತಕ್ಕಂಥ ಜನ ಬೇರೆಯವರನ್ನು ಚುಚ್ಚಿ ಮಾತನಾಡತಕ್ಕಂಥ ಜನ, ರಾಜಕೀಯ ನಿಷ್ಠೆಯ ಬಗ್ಗೆ ಮಾತನಾಡತಕ್ಕಂಥ ಜನ ಇದಕ್ಕೆ ರಾಜೀನಾಮೆಯನ್ನು ಕೊಡಬೇಕು. ರಾಜೀನಾಮೆ ಅವರು ಕೊಟ್ಟರೆ ಬಾಕಿಯೆಲ್ಲಾ ಸಹಕಾರ ಹೊಗುತ್ತದೆ, ನಿಮ್ಮ ಪಕ್ಷವೇ ಬರುತ್ತದೆ, ನಮಗೆ ಸಂತೋಷ, ನಾವು ಏನು ಆ ಕಡೆ ಬರುವುದಕ್ಕಾಗುವುದಿಲ್ಲ ಸದ್ಯದಲ್ಲಿ, ನೀವೇ ಬರುತ್ತೀರಾ?

ಶ್ರೀ ವಾಟಾಳ್ ನಾಗರಾಜ್:- ಸಂತೋಷ, ನಮ್ಮ ಸ್ನೇಹಿತರಾದಂಥ ಸಿಂಧ್ಯಾರವರು ಕೊಡಿ ಎಂದು ಕೇಳುತ್ತಿದ್ದಾರೆ, ನಾನು ಪಕ್ಕದಲ್ಲಿ ಕುಳಿತುಕೊಂಡಿರುವವರೆಗೂ ಅದು ಕನಸು, ಸುಮ್ಮನೆ ಏತಕ್ಕೆ ಮಾತನಾಡುತ್ತೀರಿ ಎಂದು ಹೇಳಿದೆ ಅಷ್ಟೆ. ನಮಗೂ ಅವರಿಗೂ ಒಂದು ಒಪ್ಪಂದ ಆಗಿದೆ. ಅದು ಖಾಸಗಿ ಒಪ್ಪಂದ. ಮಾನ್ಯ ಏಕಾಂತಯ್ಯನವರು ಬೇಜಾರು ಮಾಡಿಕೊಳ್ಳಬಾರದು. ಏನು ಒಪ್ಪಂದ ಅಂದರೆ, ನಾವು ಅವರೂ ಕಾಂಗ್ರೆಸ್‌ಗೆ ಸೇರುವುದಿಲ್ಲ. ಆ ಕಡೆ ಆಕಸ್ಮಾತ್ ನಾನು ಹೋದರೆ ಅವರಿಗೆ ಎಳೆದುಕೊಳ್ಳುತ್ತೇನೆ. ಇವರು ಹೋದರೆ ನನಗೆ ಎಳೆದುಕೊಳ್ಳುತ್ತಾರೆ. ಇದು ನಮ್ಮಿಬ್ಬರ ಒಪ್ಪಂದ.

ಉಪಾಧ್ಯಕ್ಷರು:- ಯಾವ ಕಡೆ ಹೋದರೆ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಆ ಕಡೆ ಅಂದರೆ ಆಡಳಿತ ಪಕ್ಷಕ್ಕೆ, ಖಂಡಿತವಾಗಿ ನಾನು ಕಾಂಗ್ರೆಸ್‌ಗೆ ಬರುವುದಿಲ್ಲ. ಅವರು ದೊಡ್ಡ ಜನ. ಅಧಿಕಾರಕ್ಕೆ ಹೋಗುವವರು. ಅವರ ಬಗ್ಗೆ ಮಾತನಾಡಿದರೆ ಇಷ್ಟೊಂದು ಜನ ರಕ್ಷಣೆಗೆ ಬರುತ್ತಾರೆ. ನನ್ನ ರಕ್ಷಣೆಗೆ ನೀವು ಬರಬೇಕು.

ಶ್ರೀ ವಾಟಾಳ್ ನಾಗರಾಜ್:- ನಮ್ಮಿಬ್ಬರ ಒಪ್ಪಂದ ಹೇಳಬಾರದು ಈ ಸಭೆಯಲ್ಲಿ ಎಂದುಕೊಂಡಿದ್ದೆ. ಈ ಸಭೆಯಲ್ಲಿ ಹೇಳಬೇಕು ಅಂದರೆ ಇನ್ನು ಅನೇಕ ವಿಚಾರ ಇದೆ. ತಾವು ಅವಕಾಶ ಕೊಟ್ಟರೆ ಹೇಳಿಬಿಡುತ್ತೇನೆ.

ಉಪಾಧ್ಯಕ್ಷರು:- ಮುಂದಿನ ಸಲ ಹೇಳಿ...

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮುಖ್ಯವಾಗಿ ನಮ್ಮ ಮುಂದೆ ಇರತಕ್ಕದ್ದು ಬಳ್ಳಾರಿ ಲ್ಯಾಂಡ್ ಒನರ್ ಇದ್ದಾರಲ್ಲ, ಅವರು ಇದಕ್ಕೆ ಆಲ್ಟರ್‌ನೇಟೀವ್ ಜಾಗವನ್ನು ಕೊಡುತ್ತೇನೆ ಎಂದು ಹೇಳಿದ್ದಾರಂತೆ. ಹಾಗಾದರೆ ವಿಧಾನಸೌಧದ ಪಕ್ಕದಲ್ಲಿ ನಾಲ್ಕು ಎಕರೆ ಇನ್ನೂ ಒಂದು ಕಡೆ ನಾಲ್ಕು ಎಕರೆ ಆಲ್ಟರ್‌ನೇಟೀವ್ ಜಾಗ ನನ್ನ ತಾಲ್ಲೂಕಿನಲ್ಲಿ ಕೊಡುತ್ತೇನೆಂದರೆ ಕೊಡುವುದಕ್ಕಾಗುತ್ತದೆಯೇ? ದಯವಿಟ್ಟು ಯೋಚನೆ ಮಾಡಿ. ಇವೆಲ್ಲಾ ಮಾಡಲಿಕ್ಕೆ ಆಗದೇ ಇರತಕ್ಕ ಕೆಲಸ. ಕಾನೂನಿನಲ್ಲಿಯೂ ಅವಕಾಶ ಇಲ್ಲ. ನಮ್ಮ ಅಡ್ವೊಕೇಟ್ ಜನರಲ್ ಏತಕ್ಕೆ ಈ ರೀತಿಯ ಒಪೀನಿಯನ್ ಕೊಟ್ಟಿದ್ದಾರೆ ಎಂದು ನನಗೆ ಅರ್ಥ ಆಗುತ್ತಿಲ್ಲ. ಕೊನೆಯದಾಗಿ, ಈ ವಿಷಯ ಪ್ರಸ್ತಾಪ ಆದಾಗ ಈ ಸದನದ ಕೆಲವು ಗೌರವಾನ್ವಿತ ಸದಸ್ಯರು ಅಂದರೆ ನನ್ನ ಸ್ನೇಹಿತರು, ನಾನು ಹೌಸಿಂಗ್ ಮಿನಿಸ್ಟರ್ ಆಗಿ ಸ್ವಲ್ಪ ದಿವಸ ಇದ್ದಾಗ ಇಂತಹ ವ್ಯವಹಾರವನ್ನು ನೀನೂ ಮಾಡಿಬಿಟ್ಟಿದ್ದೀಯಾ ಎಂದು ಹೇಳಿದ್ದಾರೆ. ಐ ಆಮ್ ಡಿಮ್ಯಾಂಡಿಂಗ್, ನಾನು ಹೌಸಿಂಗ್ ಮಿನಿಸ್ಟರ್ ಆಗಿದ್ದಾಗ ಏನೇನು ಫೈಲ್‌ಗಳನ್ನು ಕ್ಲಿಯರ್ ಮಾಡಿದ್ದೇನೆ, ಅದೆಲ್ಲಾ ಇಲ್ಲಿ ಇಡಿ. ಒಂದು ಕೂದಲು ಎಳೆಯಷ್ಟು ನಾನು ತಪ್ಪು ಮಾಡಿದ್ದರೆ ನೀವು ಹೇಳತಕ್ಕಂಥ.....

ಶ್ರೀ ಎಂ. ರಾಮಪ್ಪ:- ಆಲ್ಟರ್‌ನೇಟೀವ್ ಸೈಟ್ ಕೊಡುತ್ತೇವೆ ... ಎ ಹೇಳಿದ್ದರು ಕೂಡ ಇವೊತ್ತಿನ ದಿವಸದವರೆಗೆ ಬಂದಿಲ್ಲ. ಇವೊತ್ತು ಕೊಟ್ಟಿಲ್ಲ. ಸುಮ್ಮ ... ನೊ ಬಹಳ ಗಟ್ಟಿಯಾಗಿ ಮಾತನಾಡಿದರೆ ಆಗಲಿಲ್ಲ, ನಾನೂ ಮಾತನಾಡಬಲ್ಲೆ. ಅವಗೆ ಇರುವಂತಹ ವಾಸ್ತವಾಂಶ ತಿಳಿಯಬೇಕಾದರೆ ಆ ಫೈಲ್ ತೆಗೆಸಿರಿ..

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾನು ಹೇಳುತ್ತಿದ್ದೇನಲ್ಲ ರಾಮಪ್ಪನವ... ಫೈಲ್ ತೆಗೆಸಲಿ ಎಂದು.

ಶ್ರೀ ಸಿ. ಬೈರೇಗೌಡ:- ರಾಮಪ್ಪನವರು ತೆಲುಗಿನಲ್ಲಿ ಮಾತನಾಡುತ್ತಿದ್ದಾರಲ್ಲ....

ಶ್ರೀ ಎಂ. ರಾಮಪ್ಪ:- ಭಾಷೆ ಒಂದು ಕಮ್ಯುನಿಕೇಶನ್ ಅಷ್ಟೇ. ಕೆಲವರು ಹುಚ್ಚರು ಏನೇನೋ ಮಾತನಾಡಬಹುದು. ಆದರೆ ನಾನು ಆ ರೀತಿ ಮಾತನಾಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಇವರು ಬೆಪ್ಪರು. ತಲೆ ಕೆಟ್ಟಿದೆ, ಹುಚ್ಚಾಸ್ಪತ್ರೆಗೆ ಇವರನ್ನು ಸೇರಿಸಬೇಕು. ಬುದ್ಧಿ ಗಿದ್ಧಿ ಕೆಟ್ಟು ಮಾತನಾಡುತ್ತಿರಬೇಕು. ಈ ಸಭೆ ಮುಕ್ತಾಯ ಆದ ಮೇಲೆ ಇವರನ್ನು ಹುಚ್ಚಾಸ್ಪತ್ರೆಗೆ ಕರೆದುಕೊಂಡು ಹೋಗಬೇಕು.

ಉಪಾಧ್ಯಕ್ಷರು:- ಈ ಸದನದಲ್ಲಿ ಹುಚ್ಚರು ಇಲ್ಲ. ಬೆಪ್ಪರೂ ಇಲ್ಲ... ಮಾನ್ಯ ಸಿಂಧ್ಯಾರವರೇ, ತಾವು ಮಾತನಾಡಿ.

(ಗೊಂದಲ)

ಶ್ರೀ ...ಯಣ್ಣ:- ಯಾವ ಭಾಷೆಯಲ್ಲಿ ಆದರೂ ಮಾತನಾಡಬಹುದು...

(ಗೊಂದಲ)

ಶ್ರೀ ಕರಿಯಣ್ಣ:- ಒಬ್ಬ ಸದಸ್ಯರ ಬಗ್ಗೆ ಬೇರೆ ಸದಸ್ಯರು ಈ ರೀತಿ ಅಗೌರವಾಗಿ ಮಾತನಾಡಬಾರದು. ಅದು ರೆಕಾರ್ಡ್‌ಗೆ ಹೋಗುತ್ತದೆ. ಪೇಪರ್‌ಗೆ ಹೋಗುತ್ತದೆ. ರಾಮಪ್ಪನವರಿಗೆ ಬುದ್ಧಿ ಕೆಟ್ಟಿದೆ ಎಂದು ಈ ರೀತಿ ಮಾತನಾಡಬಾರದು. ಬಾಯಿಗೆ ಬಂದ ಹಾಗೆ ಮಾತನಾಡತಕ್ಕದ್ದು....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:- ಹಾಗಾದರೆ ಇವರು ಹುಚ್ಚರೇ.....

(ಗೊಂದಲ)

ಉಪಾಧ್ಯಕ್ಷರು:- ಈ ತರಹ ಎಲ್ಲರೂ ನಿಂತು ಮಾತನಾಡಿದರೆ ಯಾವುದು ರೆಕಾರ್ಡ್‌ಗೆ ಹೋಗುವುದಿಲ್ಲ. ಯಾರದ್ದೂ ಕೂಡ ರೆಕಾರ್ಡ್‌ಗೆ ಹೋಗುವುದಿಲ್ಲ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಾನು ಶಾಂತಿಯಿಂದ ಇದ್ದೇನೆ. ಅವರ ಬಗ್ಗೆ ನಾನು ಮಾತನಾಡಿಯೇ ಇಲ್ಲ. ಗಂಭೀರವಾಗಿ ಮಾತನಾಡುವುದನ್ನು ಬಿಟ್ಟು ಈ ತರಹ ದಾರಿ ತಪ್ಪಿ ಎತ್ತೆತ್ತಲೋ ಮಾತನಾಡಿದರೆ ಹೇಗೆ?

ಶ್ರೀ ಎಂ. ರಾಮಪ್ಪ:- ಇಲ್ಲಿ ಒಂದು ವಿಚಾರ ಬರುತ್ತದೆ. ಇದು ಪ್ರಚೋದನೆ ಮಾಡುವ ಪರಿಸ್ಥಿತಿ ಬಂದಾಗ, ಯಾರ್‍ಯಾರು ವೈಯ...ಗಿ ಉಳಿಯಬೇಕಾದರೆ ನಮ್ಮದೇ ವಿಷಯ ಬಂದಾಗ ನಾವು ನಿಲ್ಲಬೇಕಾಗುತ್ತದೆ. ನಮ್ಮನ್ನು ...ಕು ಎಂದು ನೋಡುವ ಪರಿಸ್ಥಿತಿ ಬಂದಾಗ ಅದರ ಪರಿಣಾಮ ಬೇರೆ ಬೇರೆ ರೀತಿಯಲ್ಲಿ ಬರುತ್ತದೆ. ನೀವು ಅಂದುಕೊಂಡಿರಬಹುದು, ನಮಗೆ ಉಳಿಯುಲಿಕ್ಕೆ ಏನು ಆಗುವುದಿಲ್ಲ, ಒಂದು ಭಾಷೆಯ ಮೇಲೆ ಜೀವನ ಮಾಡುತ್ತೇವೆ ಎನ್ನುವ ಪರಿಸ್ಥಿತಿ ಬಂದಾಗ ಬಹಳ ಕಷ್ಟ ಆಗುತ್ತದೆ. ಇದು ಏನು....

ಶ್ರೀ ವಾಟಾಳ್ ನಾಗರಾಜ್ :- ಇದು ಅವಿವೇಕದ ಪರಮಾವಧಿ. ನಾಲಿಗೆ ತಪ್ಪಿ ಬಾಯಿಗೆ ಬಂದ ಹಾಗೆ ಮಾತನಾಡತಕ್ಕದ್ದು, ಯಾರು ಸಹ ಒಂದು ಭಾಷೆಯಿಂದ, ಬದುಕಬೇಕಾಗಿಲ್ಲ. ಇದಕ್ಕೆಲ್ಲಾ

ಜನ ಬುದ್ಧಿ ಕಲಿಸುತ್ತಾರೆ. ಇದರ ಬಗ್ಗೆ ಮಾತು ಬೇಡ. ಈ ರಾಜ್ಯದಲ್ಲಿ ಇದ್ದ ಮೇಲೆ ಕನ್ನಡಕ್ಕೆ ಮಾನ್ಯತೆ ಕೊಡಲೇ ಬೇಕು. ಕನ್ನಡದಲ್ಲಿ ಮಾತನಾಡಲೇಬೇಕು. ಹುಚ್ಚಾಪಟ್ಟೆ ಮಾತನಾಡುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷರು:- ಅವರು ಕನ್ನಡದಲ್ಲಿಯೇ ಮಾತನಾಡಿದ್ದಾರೆ....

ಶ್ರೀ ವಾಟಾಳ್ ನಾಗರಾಜ್:- ನಾನು ಬೇರೆಯವರಿಂದ ಪಾಠ ಕಲಿಯಬೇಕಾಗಿಲ್ಲ...

(ಗೊಂದಲ)

ಶ್ರೀ ಎಂ. ರಾಮಪ್ಪ:- ನಾನು ಭಾಷೆಯ ಬಗ್ಗೆ ಮಾತನಾಡಬೇಕಾದಿದ್ದರೆ ನನ್ನ ಮನಸ್ಸಿನ ಭಾವನೆಯನ್ನು ಎಕ್ಸ್‌ಪ್ರೆಸ್ ಮಾಡಬೇಕಾದರೆ, ನಾನು ಒಂದೊಂದು ಸಲ ತೆಲುಗಿನಲ್ಲಿ ಕೂಡ ಮಾತನಾಡಬಹುದು. ಮಾತನಾಡಬಾರದು ಎಂದು ರೂಲ್‌ನಲ್ಲಿ ಇದ್ದರೆ ತಾವು ರೂಲಿಂಗ್ ಕೊಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ತಾವು ಹೇಳಿ, ಈ ಸಭೆಯಲ್ಲಿ ತಮಿಳು, ತೆಲುಗು, ಮಲೆಯಾಳಿ, ಹಿಂದಿ, ಗುಜರಾತಿ, ಮಾರ್ವಾಡಿ ಹೀಗೆ ಎಲ್ಲಾ ಭಾಷೆಗಳಲ್ಲಿಯೂ ಮಾತನಾಡಬಹುದು ಎಂದು ತೀರ್ಪು ಕೊಡಿ.

ಶ್ರೀ ಎಂ. ರಾಮಪ್ಪ:- ತಾವು ರೂಲಿಂಗ್ ಕೊಡಿ, ನಾನು ತಲೆಬಾಗುತ್ತೇನೆ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ:- ನಾವು ಹಿಂದಿಯಲ್ಲಿ ಮಾತನಾಡುತ್ತೇವೆ, ತಮಿಳಿನಲ್ಲಿ ಮಾತನಾಡುತ್ತೇವೆ, ನೀವೇನ್ರಿ ಕೇಳುವುದು...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಅವರು ತೀರ್ಪು ಕೊಡಲಿ.

ಶ್ರೀ ಕಾಗೋಡು ತಿಮ್ಮಪ್ಪ:- ಏನು ನೀವು ಕನ್ನಡ ಕೊಂಡುಕೊಂಡಿದ್ದೀರಿ, ಬೇರೆ ಭಾಷೆಯಲ್ಲಿ ಏಕೆ ಮಾತನಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಅವರು ತೀರ್ಪು ಕೊಡಲಿ.

(ಗೊಂದಲ)

ಉಪಾಧ್ಯಕ್ಷರು:- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು:- ದಯವಿಟ್ಟು ಎಲ್ಲರು ಕುಳಿತುಕೊಳ್ಳಬೇಕು. ಒಂದು ಮಾತು, ಈಗ ಸದನದಲ್ಲಿ...

(ಗೊಂದಲ)

ಶ್ರೀ ಎಂ. ರಾಮಪ್ಪ:- ನನ್ನ ಮನಸ್ಸಿಗೆ ನೋವು ಮಾಡುವಷ್ಟು ಪರಿಸ್ಥಿತಿ ಬಂದಾಗ...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ,.....

ಉಪಾಧ್ಯಕ್ಷರು: ಯಡಿಯೂರಪ್ಪನವರೆ, ನಾನು ಹೇಳಿದ್ದೇನೆ, ಎಲ್ಲರು ಕುಳಿತುಕೊಳ್ಳಿ. ಈಗ ಸಭೆಯಲ್ಲಿ ಯಾವ ಭಾಷೆಯಲ್ಲಿ ಮಾತನಾಡಬೇಕು ಈ ಭಾಷೆಯಲ್ಲೇ ಮಾತನಾಡಬೇಕು ಎಂದು ಮತ್ತೊಬ್ಬ ಸದಸ್ಯರನ್ನು ಫೋರ್ಸ್‌ಮಾಡಿ ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ಇಲ್ಲಿ ಕನ್ನಡದಲ್ಲೇ ಮಾತನಾಡಿದರೆ ಒಳ್ಳೆಯದು. ಏಕೆಂದರೆ ಇಲ್ಲಿ ರೆಕಾರ್ಡಿಂಗಿಗೆ ಮತ್ತು ಇತರೆ ನಮ್ಮ ಕೆಲಸಗಳು

ನಡೆಯುವುದಕ್ಕೆ ಸಹ ಅದು ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಕನ್ನಡದಲ್ಲಿ ಮಾತನಾಡಬೇಕು ಎಂದು ಹೇಳಬೇಕಾಗುತ್ತದೆ. ಈಗ ಶ್ರೀಯುತ ಸಿಂಧ್ಯರವರು.

(ಗೊಂದಲ)

ಉಪಾಧ್ಯಕ್ಷರು:- ಅವರು ಕನ್ನಡದಲ್ಲಿ ಮಾತನಾಡಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಈ ಸದನದ ಕಾರ್ಯಕಲಾಪ....

(ಗೊಂದಲ)

ಉಪಾಧ್ಯಕ್ಷರು:- ಈ ರೀತಿ ಮಾತನಾಡಿದರೆ ಯಾವುದು ರಿಕಾರ್ಡ್‌ಗೆ ಹೋಗುವುದಿಲ್ಲ. ಯಾವುದು ಸಹ ರೆಕಾರ್ಡ್‌ಗೆ ಹೋಗುವುದಕ್ಕೆ ಸಾಧ್ಯವಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಇವತ್ತು ಕನ್ನಡ ರಾಜ್ಯಭಾಷೆಯಾಗಿರುವುದರಿಂದ ಕನ್ನಡದಲ್ಲಿ ಮಾತನಾಡಬೇಕು ಎನ್ನತಕ್ಕಂಥ ಒತ್ತಾಯವನ್ನು ಅನೇಕ ಸಂದರ್ಭದಲ್ಲಿ....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ನನಗೆ ಮಾತನಾಡುವುದಕ್ಕೆ ಅಧಿಕಾರ ಇಲ್ಲವೆ...

ಉಪಾಧ್ಯಕ್ಷರು:- ಶ್ರೀಯುತ ಯಡಿಯೂರಪ್ಪನವರೆ, ತಾವು ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್ ಯಡಿಯೂರಪ್ಪ:- ಈಗ ಪ್ರಶ್ನೆ ಏನೆಂದರೆ,....

ಉಪಾಧ್ಯಕ್ಷರು:- ಪ್ರಶ್ನೆ ಬೇಕಾಗಿಲ್ಲ. ನಾನು ಹೇಳಿದ್ದೇನೆ, ಈಗ ಸಿಂಧ್ಯರವರು ಮಾತನಾಡುತ್ತಾರೆ. ಈಗ ಬೇರೆ ಯಾರು ಮಾತನಾಡಿದರೂ ಯಾವುದು ರಿಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇಲ್ಲಿ ಈ ಪರಿಸ್ಥಿತಿ ಉದ್ಭವಿಸುವುದಕ್ಕೆ ಕಾರಣವೇನು. ಇವತ್ತು ಕೆಲವರು ಕನ್ನಡದ ಬಗ್ಗೆ ಹುಚ್ಚುಹುಚ್ಚಾಗಿ ಮಾತನಾಡುತ್ತಾರೆ. ಆದ್ದರಿಂದ ಗೊಂದಲವಾಗಿದೆ.

ಉಪಾಧ್ಯಕ್ಷರು:- ಅವರು ಕನ್ನಡದಲ್ಲಿಯೇ ಮಾತನಾಡಿದ್ದಾರೆ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ:- ನಾವು ಕನ್ನಡದಲ್ಲಿಯೇ ಮಾತನಾಡಬೇಕು ಎಂದು ಹೇಳುವುದಕ್ಕೆ ಇವರು ಯಾರ್ರಿ. ಒಬ್ಬರು ಕನ್ನಡದಲ್ಲಿ ಮಾತನಾಡುತ್ತಾ ಮಧ್ಯದಲ್ಲಿ ಒಂದು ಪದ ತೆಲುಗಿನಲ್ಲಿ ಬಳಸಿದರೆಂದು ಅವರು ಬಿದ್ದು ಬಿಡುವುದು ಅಂದರೆ ಏನರ್ಥ? ಇವರು ಏನಾದರು ಕನ್ನಡವನ್ನು ಕೊಂಡುಕೊಂಡಿದ್ದಾರಾ?

(ಗೊಂದಲ)

ಉಪಾಧ್ಯಕ್ಷರು:- ನತಿಂಗ್ ವಿಲ್ ಗೊ ಆನ್ ರಿಕಾರ್ಡ್.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಉಪಾಧ್ಯಕ್ಷರೇ,.....

ಉಪಾಧ್ಯಕ್ಷರು:- ಈಗ ಲೀಡರ್ ಆಫ್ ಆಪೋಸಿಷನ್ ಏನೊ ಮಾತನಾಡುತ್ತಾರೆ.

ಶ್ರೀ ಎಂ. ರಾಮಪ್ಪ:- ಮಾನ್ಯ ಉಪಾಧ್ಯಕ್ಷರೆ, ನಾನು ಸ್ವಲ್ಪ ಹೇಳಬೇಕಾಗುತ್ತದೆ. ಚಂದ್ರೇಗೌಡರೆ, ನಾಲಿಗೆ ಹರಿತವಾಗಿದೆ. ನಿಮಗೆ ಮಾತ್ರ ಹರಿತವಾಗಿಲ್ಲ. ತಮಾಷೆ ನೋಡಲಿಕ್ಕೆ ಬಂದಿದ್ದರೆ ನಾಲ್ಕು ಮಾತನ್ನು ಆಡಬಹುದು. ಅದನ್ನಲ್ಲ ನಾನು ಹೇಳುವುದು. ನಾನು ಹೇಳುವ ಮಾತನ್ನು ನೀವು ಕೇಳಬೇಕಾಗುತ್ತದೆ. ನಾನು ಹೇಳುವುದರಲ್ಲಿ ಏನಾದರು ಚಕಾರ ತಪ್ಪಾಗಿದ್ದರೆ ನಾನು

ತಲೆಬಾಗಲಿಕ್ಕೆ ರೆಡಿಯಾಗಿದ್ದೇನೆ. ನನ್ನ ಹಕ್ಕನ್ನು ಮೊಟಕುಗೊಳಿಸುವುದಕ್ಕೆ ಯಾರುಯಾರಿಗೆ ಎಷ್ಟೆಷ್ಟು ಅಧಿಕಾರ ಇದೆ. ಮೊನ್ನೆ ಮಾನ್ಯ ಲಕ್ಕಪ್ಪನವರು ಇಂಗ್ಲೀಷಿನಲ್ಲಿ ಮಾತನಾಡಿದರು. ಅವರನ್ನು ಕನ್ನಡದಲ್ಲಿ ಮಾತನಾಡಿ ಎಂದು ಹೇಳುವ ಅಧಿಕಾರ ನಿಮಗೆ ಯಾರಿಗೆ ಇದೆ. ಇದ್ದರೆ ಮೇಡಂ ಹೇಳಬಹುದು. ಇನ್ನೊಬ್ಬರು ಹೇಳಿದರೂ ಕೂಡ ಅವರಿಗೆ ಹಕ್ಕು ಹೇಗೆ ಬರುತ್ತದೆ. ನಮಗೆ ಇಲ್ಲಿ ಏನೇನು ಹಕ್ಕುಗಳು ಇವೆ ಅದನ್ನು ಕೂಡ ನೋಡ ಬೇಕಾಗುತ್ತದೆ. ನನಗೆ ಸರಿಯಾಗಿ ಕನ್ನಡ ಭಾಷೆಯಲ್ಲಿ ಎಕ್ಸಪ್ರೆಸ್ ಮಾಡಲಿಕ್ಕೆ ಬರುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ನೀವು ಇಷ್ಟು ಚೆನ್ನಾಗಿ ಕನ್ನಡ ಮಾತನಾಡುವುದನ್ನು ನೋಡಿ, ಅವರೇ ಸುಮ್ಮನೆ ಕೂತುಬಿಟ್ಟರು. ಮತ್ತೆ ಜಗಳ ಏತಕ್ಕೆ? ನನಗೇ ಬಹಳ ಸಂತೋಷ ಆಯಿತು.

(ಗೊಂದಲ)

ಉಪಾಧ್ಯಕ್ಷರು:- ಇಲ್ಲಿಗೆ ಈ ಪ್ರಶ್ನೆ ಮುಗಿಯಿತು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷಣಿಯವರೆ,

ಶ್ರೀ ಕಮರುಲ್ ಇಸ್ಲಾಂ:- ಪಾಯಿಂಟ್ ಆಫ್ ಆರ್ಡರ್.

ಶ್ರೀ ಎಂ. ರಾಮಪ್ಪ:- ಅವರು ಬುದ್ಧಿಗೇಡಿ ಎಂದು ಹೇಳಿದ್ದಾರೆ, ಆ ಶಬ್ದವನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು. ವಿತ್‌ಡ್ರಾ ಮಾಡಿಕೊಳ್ಳಬೇಕು.

(ಗೊಂದಲ)

ಉಪಾಧ್ಯಕ್ಷರು:- ನೀವೆಲ್ಲರೂ ಒಂದೇ ಸಾರಿ ನಿಂತುಕೊಂಡು ಕೂಗಾಡಿರುವುದು ಯಾವುದು ದಾಖಲೆಗೆ ಹೋಗಿಲ್ಲ.

SRI QUMARUL ISLAM:- Madam Deputy Speaker, I rise to a point of order. We have come here because the people have elected us and sent us here to represent them. This is our motherland. This is our country. As per the Constitution, and as per the rules of procedure and business of this House, the record here will only be in Kannada and English. That is why we are getting notices in Kannada and English. However, any hon.Member here, who does not know Kannada or English, he has a right to express his feelings in his mother-tongue. We need not get any advise from other hon.Members. The Chair is here to direct us and guide us. The hon.Members need not show overenthusiasm. Everybody has got a right to express their feelings here. I am learning Kannada. In one of the Notices, I wrote myself in Kannada the name of the hon.Member Sri Vatal Nagraj. He is a good friend of mine. I asked him to give Kannada paper and I wrote 5-6 lines. It will take some time for me to learn Kannada. I therefore, request the hon.Members here not to obstruct any one who wants to speak in English or in any other language which they know. they should not come in their way. One should not become emotional. When they become emotional equally the other hon.Members will also become emotional. It is their Constitutional right. I suggest that the Chair should guide the hon.Members in this behalf whenever such situation arises.

ಶ್ರೀ ಎಂ. ರಾಮಪ್ಪ:- ಅಧ್ಯಕ್ಷರೆ, ಕಡತಕ್ಕೆ ಹೋಗಿರುವುದನ್ನು ತೆಗೆಸಬೇಕು.

ಉಪಾಧ್ಯಕ್ಷರು:- ನೀವೆಲ್ಲಾ ಒಟ್ಟಿಗೆ ಸೇರಿ ಮಾತನಾಡಿದ್ದು ಯಾವುದು ಕಡತಕ್ಕೆ ಹೋಗಿಲ್ಲ. ಆದ್ದರಿಂದ ತೆಗೆಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ:- ನೇರವಾಗಿ ರಾಮಪ್ಪನವರು ನಾಗರಾಜರ ಬಗ್ಗೆ ಒಂದು ಶಬ್ದ ಸಹ ಉಪಯೋಗಿಸಿಲ್ಲ. ಆದರೆ, ಅವರು ಮಾತ್ರ ರಾಮಪ್ಪನವರ ವಿಚಾರ ಹೇಳಿದ್ದು ಏತಕ್ಕೆ? ಹಾಗಿದ್ದರೆ ಕನ್ನಡ ಅನ್ನುವಂಥಾದ್ದು....

ಉಪಾಧ್ಯಕ್ಷರು:- ಅವರಿಬ್ಬರು ಒಳ್ಳೆ ಸ್ನೇಹಿತರು ಅದಕ್ಕೆ. ಸಿಂಧ್ಯಾರವರೆ, ತಾವು ವಿಷಯಕ್ಕೆ ಬನ್ನಿ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ:- ಸ್ನೇಹಿತರು ಎಂದು ಆ ರೀತಿ ಹೇಳುವುದಕ್ಕೆ ಬರುತ್ತದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷಿಣಿಯವರೆ, ತಮ್ಮ ಆಜ್ಞೆ ಪ್ರಕಾರವಾಗಿ ನಾನು ನೇರವಾಗಿ ವಿಷಯಕ್ಕೆ ಬರುತ್ತೇನೆ.

ಉಪಾಧ್ಯಕ್ಷರು:- ಮುಗಿಸುತ್ತಿದ್ದೇನೆಂದು ಆಗಲೇ ಹೇಳಿದ್ದಿರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮುಗಿಸಿಬಿಡಲಿ.

ಉಪಾಧ್ಯಕ್ಷರು:- 5 ನಿಮಿಷದಲ್ಲಿ ಮುಗಿಸಿ. ಅದಷ್ಟು ಬೇಗ ಮುಗಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಆಗಬಹುದು. ಈ ಸರ್ಕಾರ ಕಾನೂನನ್ನು ಮೀರಿ ಈ ಕೆಲಸ ಮಾಡಿರತಕ್ಕದ್ದು, ಸರ್ಕಾರ ತಪ್ಪುಗಳನ್ನು ಮಾಡಿದೆ, ನೀತಿಯ ಬಗ್ಗೆ ಮಾತನಾಡತಕ್ಕ ಜನ ಈ ರೀತಿ ಮಾತನಾಡಿರತಕ್ಕದ್ದು ನಮಗೆಲ್ಲಾ ದುಃಖವಾಗಿದೆ. ಮಾನ್ಯ ಮುಖ್ಯಮಂತ್ರಿಗಳ ರಾಜೀನಾಮೆಯನ್ನು ಈ ವಿಚಾರದಲ್ಲಿ ಕೇಳಿದ್ದೇನೆ ಏಕೆಂದರೆ ಅವರು ಮಾಡಿರತಕ್ಕಂಥಾದ್ದು ತಪ್ಪು ಎಂದು.

ಶ್ರೀ ಎಂ. ರಾಮಪ್ಪ:- ಯಾರೊ ಹೇಳಿದ್ದನ್ನು ಕೇಳಿ ಇಲ್ಲಿ ಮಾತನಾಡುತ್ತಿದ್ದೀರಿ. ಈ ಮನೆಗೆ ತಪ್ಪು ಮಾಹಿತಿ ಕೊಟ್ಟು, ದೊಡ್ಡದಾಗಿ ಪ್ರಚಾರ ಪಡೆಯಲಿಕ್ಕೆ ಈ ರೀತಿ ಹೇಳುತ್ತಿದ್ದೀರೆಂದು ನಾನು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು:- ಮಾನ್ಯ ರಾಮಪ್ಪನವರೆ, ಅವರು ಈಲ್ಡ್ ಆಗಿಲ್ಲ, ದಯಮಾಡಿ ತಾವು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಯಾರೋ ಹೇಳಿದ್ದನ್ನು ಕೇಳಿ ಈ ಸದನದಲ್ಲಿ ಹೇಳಲಿಕ್ಕೆ ಹೋಗುವುದಿಲ್ಲ. ನನಗಿಂತಲೂ ಯಾರಾದರು ಅನುಭವಸ್ಥರು ಇದ್ದಾರೆಂದರೆ, ಅವರ ಮಾತನ್ನು ಕೇಳಿ, ನನಗೆ ಸರಿ ಎಂದು ಕಂಡರೆ, ನಾನು ಮಾತನಾಡುತ್ತೇನೆಯೇ ಹೊರತು, ನಾನು ಯಾರೊ ಹೇಳಿದ್ದನ್ನೆಲ್ಲಾ ಕೇಳಿಲಿಕ್ಕೆ ತಯಾರಿಲ್ಲ. ಯಾರೋ ಹೇಳಿದ್ದನ್ನು ಕೇಳಿಕೊಂಡು ಪಾಪ ನರಸಿಂಹಮೂರ್ತಿಯವರು ಇವೊತ್ತು ತಪ್ಪಿಗೆ ಸಿಕ್ಕಿಹಾಕಿಕೊಂಡಿದ್ದಾರೆ. ಆದರೆ ಅವರು ತಕ್ಷಣ ಏನು ಕ್ಯಾನ್ಸಲ್ ಮಾಡಿದ್ದಾರೆ ಅದನ್ನು ನಾನು ಮೆಚ್ಚುತ್ತೇನೆ. ಆದರೆ ಇದನ್ನು ಮಾಡಿರತಕ್ಕಂಥ ತಪ್ಪಿಗೆ ನೀವು ಶಿಕ್ಷೆ ಅನುಭವಿಸಬೇಕು. ಆ ಶಿಕ್ಷೆಯ ಭಾಷೆಯನ್ನು ನಾನು ಹೇಳಲಿಕ್ಕೆ ಹೋಗುವುದಿಲ್ಲ. ರಾಜೀನಾಮೆ ಕೊಡಬೇಕೆಂದು ಹೇಳಿ, ತಾವು ಇಷ್ಟು ಹೊತ್ತು ಮಾತನಾಡಲಿಕ್ಕೆ ಅವಕಾಶ.....

SRI A.B. JAKANUR:- Denotification has been done under the Land Development Authority Act. If there is a provision, why you are asking the Minister to resign?

ಉಪಾಧ್ಯಕ್ಷರು:- ಮೆಂಬರ್ ಯೀಲ್ಡ್ ಆಗಿಲ್ಲ, ಈಗ ಮಾನ್ಯ ಸದಸ್ಯರು ತಮ್ಮ ಭಾಷಣ ಮುಗಿಸಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ನನ್ನ ಭಾಷಣವನ್ನು ಮುಗಿಸಿಬಿಡುತ್ತಿದ್ದೆ. ಇಗ ಅವರು ಕೇಳಿದ್ದರಿಂದ ಹೇಳಬೇಕಾಗಿದೆ. ಈಗ ಮಾನ್ಯ ಜಕನೂರ್‌ರವರು ವಿಷಯದ ಬಗ್ಗೆ ಕೇಳಿದರು. ಅವರು ನನಗೆ ಬೇಕಾಗಿರತಕ್ಕ ಸ್ನೇಹಿತರು. ಅವರು ವಕೀಲರು, ನಾನು

ಇಂಜಿನಿಯರ್, ಪ್ರಾವಿಜನ್‌ಗೆ ಅವಕಾಶ ಇದೆಯೋ, ಇಲ್ಲವೋ ನನಗೆ ಏನು ಗೊತ್ತಿದೆ? ನನಗೆ ಗೊತ್ತಿರುವುದು ಕಾಮನ್‌ಸೆನ್ಸ್ ಪ್ರಕಾರ ಹೇಳಿದ್ದೇನೆ. ನಾನು ಏನು ಲಾಯರ್ ಅಲ್ಲ. ಪ್ರಾಕ್ಟೀಸ್ ಮಾಡಿಲ್ಲ. ಲಾ ಡಿಗ್ರಿನೂ ಗೊತ್ತಿಲ್ಲ. ಕಾಮನ್‌ಸೆನ್ಸ್ ಪ್ರಕಾರ ಅವಕಾಶವಿಲ್ಲ. ಇದು ಅಕ್ರಮವಾಗಿ ಮಾಡಿರತಕ್ಕಂತಾದ್ದು. ಆದ್ದರಿಂದ, ಮಾನ್ಯ ಮುಖ್ಯಮಂತ್ರಿಗಳ ರಾಜೀನಾಮೆಯನ್ನು ಈ ಸಂದರ್ಭದಲ್ಲಿ ಈ ವಿಚಾರದಲ್ಲಿ ಕೇಳಿ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇವೆ.

† ಶ್ರೀ ಎಂ. ರಾಮಪ್ಪ (ಬಳ್ಳಾರಿ): ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಸ್ಕೀಮ್ ತಯಾರು ಮಾಡುವಾಗ ನಾನು ಇಂಪ್ರೂವ್‌ಮೆಂಟ್ ಬೋರ್ಡ್ ಛೇರ್ಮನ್ ಆಗಿದ್ದೆ. ಆ ಸ್ಕೀಮಿನಲ್ಲಿ ಏನಾದರು ಫ್ರೀ ಆಗಿ ಕೊಡುತ್ತೇನೆಂದು ಹೇಳಿದ ಆ ಲ್ಯಾಂಡ್ ಸಹ ಇದರಲ್ಲಿ ಇನ್‌ಕ್ಲೂಡ್ ಆಗಿದೆ. ಅದು ಇನ್‌ಕ್ಲೂಡ್ ಆಗಿರುವುದರಿಂದ, ಅದು ಫ್ರೀಯಾಗಿ ಕೂಡ ಕೊಟ್ಟಿದ್ದಾರೆ. ಆದರೆ ಇವೊತ್ತು ಬಡವರಿಗಾಗಿ ಏನೂ ಕೊಟ್ಟಿಲ್ಲ. ಇನ್ನೊಂದು ಏನಾಗಿದೆ, ನಮ್ಮ ಸ್ಕೀಮ್ ಅನ್ನು ಯಾವಾಗಲು ಜಾರಿ ಮಾಡಬೇಕಾಗಿರುವುದು, ಎಲ್ಲಾ ಭಾಗಗಳ ಡೆವಲಪ್‌ಮೆಂಟ್ಸ್‌ಗಾಗಿ. ನಾವು ಇದರ ಜೊತೆಗೆ ಮಿಕ್ಕ ಮುನಿಸಿಪಲ್ ಏರಿಯಾದಲ್ಲೂ ಕೂಡ ಡೆವಲಪ್‌ಮೆಂಟ್ ಮಾಡಬೇಕಾಗಿತ್ತು. ಎಲ್ಲ ಕಡೆಯೂ ನಾವು ಅಭಿವೃದ್ಧಿ ಮಾಡಬೇಕಾಗುತ್ತದೆ. ನಾವೇನು ಗ್ರೀನ್‌ಲ್ಯಾಂಡ್ ತೆಗೆದುಕೊಂಡು ಹೋಗಿ. ಯಾರಿಗೂ ಏನು ಅನುಕೂಲ ಮಾಡಿಲ್ಲ. ಗ್ರೀನ್‌ಲ್ಯಾಂಡ್ ತೆಗೆದುಕೊಂಡು ಹೋಗಿಬಿಟ್ಟು ಮತ್ತೊಂದು ಸ್ಕೀಮಿನಲ್ಲಿ ಹಾಕಿಕೊಂಡುಬಿಟ್ಟು ಎನ್.ಆರ್.ಐ. ಸ್ಕೀಮ್ ರೀತಿಯಲ್ಲಿ ಏನೂ ನಾವು ಮಾಡಿಲ್ಲ. ಈ ಒಂದು ಸ್ಕೀಮ್ ಕೂಡ ಫ್ರೀಯಾಗಿ ಕೊಟ್ಟಿರುವುದು, ಈಗ ಅದನ್ನು ಸ್ವೀಕಾರ ಮಾಡುತ್ತೇವೆಂದು ಹೇಳಿಬಿಟ್ಟು ಹೆಚ್ಚು ಕಡಿಮೆ ಯಾರು ಯಾರು ಮಾಡಿದ್ದಾರೆಂದರೆ, ಇದರಲ್ಲಿ ಚಂದ್ರಶೇಖರ್ ಅವರು ಇದ್ದಾರೆ, ರಾಮಕೃಷ್ಣ ಹೆಗಡೆಯವರು ಇದ್ದಾರೆ. ಹಾಗು ಹೋದ ಮಿನಿಸ್ಟ್ರಿಯಲ್ಲಿ ಎಲ್ಲರು ಭಾಗಿಗಳಾಗಿದ್ದಾರೆ. ಮಾನ್ಯ ದೇಶಪಾಂಡೆ ಅವರು ಸುಮ್ಮನೆ ಇದರ ಪೇಪರ್‌ಗಳನ್ನು ಇಟ್ಟುಕೊಂಡಿದ್ದರು. ಆ ವ್ಯವಹಾರ ಏನು ಎಂದು ಈಗ ಮಾತನಾಡಲಿಕ್ಕೆ ಬರುವುದಿಲ್ಲ.ಇಂತಹ ವ್ಯವಹಾರದಲ್ಲಿ....

ಶ್ರೀ ಡಿ.ಬಿ. ಚಂದ್ರೇಗೌಡ:- ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್. ಎಲ್ಲಾ ಮಂತ್ರಿಗಳು ಇದ್ದಾರೊ, ಬಿಟ್ಟಿದ್ದಾರೋ ಗೊತ್ತಿಲ್ಲ, ದೇಶಪಾಂಡೆಯವರು ಏನು ವ್ಯವಹಾರ ಮಾಡಿದ್ದರು. ಅದನ್ನು ಹೇಳಲಿಕ್ಕೆ ಹೋಗುವುದಿಲ್ಲ ಎಂದು ಹೇಳಿದರು. ಅದನ್ನು ಅವರು ಹೇಳಬೇಕು.

(ಗೊಂದಲ)

ಶ್ರೀ ಎಂ. ರಾಮಪ್ಪ:- ಪೇಪರ್ ಇಟ್ಟುಕೊಂಡಿದ್ದರು ಎಂದು ಹೇಳಿದೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಈಗ ಗ್ರೀನ್‌ಬೆಲ್ಟ್ ವಿಷಯ ಹೇಳಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು:- ಅವರು ಏನು ಹೇಳುತ್ತಾರೆ ಕೇಳೋಣ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಅವರು ಏನು ಮಾಡಿಲ್ಲವೆಂದು ನಾವು ರಾಜೀನಾಮೆ ಕೇಳಲಿಲ್ಲ, ಅವರು ಸರ್ಕಾರಿ ಆಜ್ಞೆ ಹೊರಡಿಸಿದ್ದೇನೆ ಎಂದು ಹೇಳಿದಮೇಲೆ ರಾಜೀನಾಮೆ ಕೇಳಿದ್ದು, ಅದಕ್ಕಿಂತಲು ಮುಂಚೆ ನಾವು ಕೇಳಲಿಲ್ಲ.

(ಗೊಂದಲ)

ಶ್ರೀ ಎಂ. ರಾಮಪ್ಪ:- ಪುಷ್ಟಿ ಕೊಟ್ಟಿರುವವರು ಯಾರು ಯಾರು, ಇದರಲ್ಲಿ ಮಧುದಂಡವತೆ ಚಂದ್ರಶೇಖರ್ ಎಲ್ಲಾ ವಿಚಾರ ಬಂದಿದೆ. ನಾನು ರೆಕಾರ್ಡ್ ನೋಡಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಶ್ರೀಮಾನ್ ರಾಮಪ್ಪನವರು ಊಟ ಮಾಡಿ ಮಲಗಿಬಿಟ್ಟರು, ನಾವು ಸದನಕ್ಕೆ ಬಂದಿದ್ದೇವೆ ಅಷ್ಟೆ.

(ಗೊಂದಲ)

ಶ್ರೀ ಎಂ. ರಾಮಪ್ಪ:- ನಾನು ಊಟ ಮಾಡುತ್ತೇನೆ ಹೊರತು, ಮತ್ತೇನು ಮಾಡುವುದಿಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಈಗ ನೀವು ಚಂದ್ರಶೇಖರ್ ಮಾತು ಏನು ಪ್ರಸ್ತಾಪಮಾಡುತ್ತಿದ್ದೀರೋ ಅದನ್ನೆಲ್ಲಾ, ನಾವೇ ಪ್ರಸ್ತಾಪ ಮಾಡಿದ್ದೇವೆ.

ಶ್ರೀ ಎಂ. ರಾಮಪ್ಪ:- ರೆಕಾರ್ಡಿನಲ್ಲಿದೆ, ನನ್ನ ಬಗ್ಗೆ ಏಕೆ ಹೇಳುತ್ತೀರಿ ಇದ್ದ ವಿಚಾರವನ್ನು ಹೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗಾಗಲೇ ಇದರ ಬಗ್ಗೆ ಇಲ್ಲಿ ಪ್ರಸ್ತಾವನೆ ಇಲ್ಲಿ ಬಂದಿದೆ. ಮಧುದಂಡವತೆಯ ಲೆಟರ್ ಮತ್ತು ಚಂದ್ರಶೇಖರ್‌ರಿಂದ ಏನು ಬಂದಿದೆ ಎಲ್ಲವನ್ನು ಓದಿದ್ದಾರೆ. ನಿಮಗಿಂತ ಮುಂಚೆ ನಾವು ಸಹ ಪ್ರಸ್ತಾಪ ಮಾಡಿದ್ದೇವೆ. ನಾವೂ ಕೂಡ 5 ನಿಮಿಷ ಮಾತನಾಡಬೇಕಾಗಿದೆ. ರಾಮಪ್ಪನವರೂ 5 ನಿಮಿಷ ಮಾತನಾಡಲಿ, ಬಳ್ಳಾರಿ, ಗುಲ್ಬರ್ಗ, ಬೀದರ್‌ವರೆಗೆ ಸ್ವಲ್ಪ ಭಾಷೆ ಬೇರೆ ಇರುತ್ತದೆ. ಪ್ರತಿಯೊಂದಕ್ಕು ಇಂಟರ್‌ಪ್ರಿಟೇಷನ್ ಮಾಡಿದರೆ ಕನ್ನಡ ಸಾಹಿತ್ಯ ಪರಿಷತ್ ಡಿಕ್ಷನರಿಯನ್ನು ತಂದು ಇಡಬೇಕಾಗುತ್ತದೆ. ಇವರ ನಂತರ ನಮಗೆ 5-10 ನಿಮಿಷ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ನಾವು ಸಹ ಮಾತನಾಡುತ್ತೇವೆ.

ಶ್ರೀ ಎಂ. ರಾಮಪ್ಪ:- ಮೊನ್ನೆ ಕೌನ್ಸಿಲ್‌ನಲ್ಲಿ ಕೂಡ ಇದನ್ನು ಎತ್ತಿ ಈ ಜಮೀನು 2-3 ಕೋಟಿ ರೂಪಾಯಿ ಬೆಲೆ ಬಾಳುತ್ತದೆ ಎಂದು ಹೇಳುತ್ತಿದ್ದರು, ನಾನು ಕೋಟಿಯನ್ನೇ ನೋಡಿಲ್ಲ, ಬರಿ ಕೋಟುಗಳನ್ನು ನೋಡಿದ್ದೇನೆ. ಸುಮ್ಮನೆ ಯಾರ ಮೇಲಾದರೂ ಆಪಾದನೆ ಮಾಡುವುದಷ್ಟೇ ಇವರ ಕೆಲಸವಾಗಿದೆ. 2 ಕೋಟಿ ಎಂದು ಹೇಳುತ್ತಾರೆ. 50 ಲಕ್ಷ ರೂಪಾಯಿ ಕೊಡಲಿ, ಅಂತಹ ಲ್ಯಾಂಡ್ ಅನ್ನು ಸಿಟಿಯಲ್ಲಿಯೇ ಕೊಡಿಸುತ್ತೇನೆ. ಬರೀ ಅಪಾದನೆ ಮಾಡುವುದನ್ನು ಕಲಿತಿದ್ದೀರಿ. ಉದಾಹರಣೆಗೆ ಹೇಳುವುದಾದರೆ ಸಿರಗುಪ್ಪದಲ್ಲಿ ಫ್ರೀ ಲ್ಯಾಂಡ್ ಅನ್ನು ಕೊಡುತ್ತೇವೆಂದು ಹೇಳಿ ಇದುವರೆಗು ಫ್ರೀ ಆಗಿ ಕೊಟ್ಟಿಲ್ಲ. ಡೀ ನೋಟಿಫಿಕೇಷನ್ ಆಗಿದೆ. ಆದರೂ ಕೊಟ್ಟಿಲ್ಲ. ಇದು ಬಡವರಲ್ಲಿ ಅತಿ ಬಡವರಿಗೆ ಕೊಡುವಂಥಾದ್ದು ಇದು. ಆದರೆ ಇದು ನೋ ಲಾಸ್ ನೋ ಪ್ರಾಫಿಟ್ ಮೇಲೆ ಕೊಟ್ಟಿರುವುದು, ಆದರೆ ಅಲ್ಲಿ ಎಸ್.ಸಿ.ಎಸ್.ಟಿ.ಯವರಿಗೆ ನೀಡಿರುವುದು. ಆ ವೀಕರ್ ಸೆಕ್ಷನ್ ಮೇಲೆ ಆಪಾದನೆ ಮಾಡುವುದು ಸರಿಯಲ್ಲ. ಇದು ನನಗೆ ಚಿಂತೆಯಾಗಿದೆ. ಯಾರೋ ಒಬ್ಬರ ಮೇಲೆ ಗೂಬೆ ಕೂರಿಸುವುದನ್ನು ಕಲಿತು ಕೊಂಡಿರುವುದನ್ನು ನೋಡಿದರೆ ನನಗೆ ನಾಚಿಕೆಯಾಗುತ್ತದೆಂಬ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: (ಗುರುಮಿಠಕಲ್):- ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಚಂದ್ರೇಗೌಡರು, ಏಕಾಂತಯ್ಯನವರು ಹಾಗೂ ಸಿಂಧ್ಯರವರು ಬಹಳ ವಿಸ್ತಾರವಾಗಿ ಇದರ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ಇರುವ ಪ್ರಶ್ನೆ ಇಷ್ಟೇ. ಇದು 82 ರಿಂದ ಪ್ರಾರಂಭವಾಗಿ 86ರ ಸೆಪ್ಟೆಂಬರ್‌ವರೆಗೆ ಫೈನಲ್ ನೋಟಿಫಿಕೇಷನ್ ಆಗಿ ಹ್ಯಾಂಡ್ ಓವರ್ ಮಾಡಿದ ನಂತರ ಸೈಟ್ ಮಾಡಿ ಪುನ: ಅದನ್ನು ಕ್ಯಾನ್ಸಲ್ ಮಾಡಿ ಡೀನೋಟಿಫೈ ಮಾಡಿರುವುದು ಒಂದು ಉದ್ದೇಶ ಪೂರ್ವಕವಾಗಿ ಮಾಡಿದ್ದೀರಿ ಎಂಬ ಗುರುತರವಾದ ಅಪಾದನೆಯನ್ನು ಇವರು ಮಾಡಿದ್ದಾರೆ. ಈ ರೀತಿ ಆಪಾದನೆ ಮಾಡತಕ್ಕಂಥಾದ್ದು ಅಥವಾ ಯಾವ ಇಂಟೆನ್‌ಷನ್‌ನಲ್ಲಿ ಮಾಡಿದ್ದೀರಿ ಎನ್ನುವುದನ್ನು ಅವರು ಏನು ಹೇಳುತ್ತಿದ್ದಾರೆ. ಅದಕ್ಕೆ ಪೂರ್ವಭಾವಿಯಾಗಿ ಅದರಲ್ಲಿರತಕ್ಕಂತಹ ಪತ್ರ ವ್ಯವಹಾರ ಮತ್ತು ಅನೇಕ ಮಂತ್ರಿಗಳು ಯಾವ ರೀತಿಯಾಗಿ ಎಂಡಾರ್ಸ್‌ಮೆಂಟ್ ಮಾಡಿದ್ದಾರೆಂಬುದರ ಬಗ್ಗೆ ಕೂಡ ಅವರೇ ಹೇಳಿಕೊಂಡಿದ್ದಾರೆ. ಅಂದಾಗ ಯಾವ ಈ ಸರ್ವೆ ನಂ. 868, 839, 841 ಇದನ್ನು ಡೀನೋಟಿಫೈ ಮಾಡಿದ್ದು ಈಗ ಸರಿಯಲ್ಲ ಅನ್ನತಕ್ಕಂಥ ವಾದವನ್ನು ಕೂಡ ಇಟ್ಟಿದ್ದಾರೆ.

ಆದರೆ ಹಿಂದೆ ಅವರ ಸರಕಾರವಿದ್ದಾಗ ಈ ಬಳ್ಳಾರಿ ಸಿಟಿ ಇಂಪ್ರೂವ್‌ಮೆಂಟ್ ಬೋರ್ಡ್ ಏನು ಸೈಟ್ಸ್ ಮಾಡಿ ಹಂಚಿದರು, ಅದರ ಬಗ್ಗೆ ಸರಕಾರದಲ್ಲಿ ಒಂದು ಪ್ರೊಸೀಡಿಂಗ್ಸ್ ಆಗಿದೆ. cancellation of resolution passed by the Improvement Board, Bellary; Proceedings of the Government of Karnataka dated 28.10.1987.

ಅಂದರೆ ಈ ಪ್ರಿಯಾಂಬಲ್‌ನಲ್ಲಿ ಏನು ಹೇಳಿದ್ದಾರೆಂದರೆ

"In Government Order dated 28.10.87, read with Sl.No.1 above, orders have been passed staving the execution of the resolution of C.I.T.B., Bellary regarding the allotment of sites in Raghavendranagar Layout and allotment of sites in Sanjay Gandhinagar Layout and Beechinagar layout and calling upon the C.I.T.B to show cause why the resolution should not be cancelled..."

ಎಂದು ಇದೆ. ಇನ್ನು ಮುಂದೆ ಏನಿದೆ ಅದನ್ನು ನಾನು ಪೂರ್ತಿಯಾಗಿ ಓದುವುದಕ್ಕೆ ಹೋಗುವುದಿಲ್ಲ. ಅಲಾಟ್‌ಮೆಂಟ್ ಆಫ್ ಸೈಟ್ಸ್ ಆಗಿರತಕ್ಕದ್ದು ಇರ್ರೆಗ್ಯುಲರ್ ಆಗಿದೆ, ಆದ್ದರಿಂದ ಅದನ್ನು ಕ್ಯಾನ್ಸಲ್ ಮಾಡಿ ಎಂದು ಹೇಳಿದ್ದಾರೆ. ರಾಘವೇಂದ್ರ ನಗರ ಎಂದರೆ ಈ ಸರ್ವೆ ನಂ.ನಲ್ಲೇ ಬರುತ್ತದೆ. ಈ ಸರ್ವೆ ನಂಬರುಗಳು ಎಂದರೆ 868, 839, 841. ಆಗ ಒಂದು ತೀರ್ಮಾನ ಮಾಡಿದರು.

"Government by virtue of powers vested under Section 67 Sub Clause 3 of the Karnataka. Urban Development Authorities Act, 1987, hereby cancel the following resolution passed by the then Improvement Board Bellary"

1) Allotment of sites in Raghavendranagar Layout,

2) Allotment of stray sites made in Sanjay Gandhinagar Layout and Beechinagar Layout.

The resolution passed except one acre of land free of cost from Sathyanarayana and Govindappa Shetty as they dropped land acquisition from the Ramakrishna Hegde Nagar Scheme."

ಅಂದರೆ ಈ ಪ್ರೊಸೀಡಿಂಗ್ಸ್ ಆಗಲೇ ಆಗಿದೆ. ಅಂದರೆ ನಾವು ಇದಕ್ಕೆ ಮೋಟಿವ್ ಹೇಳುವುದಕ್ಕಾಗುತ್ತದೆಯೇ ಅಂದರೆ ಸೈಟ್ಸ್ ಅಲಾಟ್‌ಮೆಂಟ್ ಆದುದನ್ನು ಕ್ಯಾನಸಲ್ ಮಾಡಿದೆ ಎನ್ನತಕ್ಕ ಒಂದು ಪ್ರೊಸೀಡಿಂಗ್ಸ್ ಏನಿದೆ, ಇದು 88ನೇ ಡಿಸೆಂಬರ್ 2ನೇ ತಾರಿಖಿನಲ್ಲೇ ಆಗಿದೆ. ಮತ್ತು ಇದಕ್ಕಿಂತ ಹಿಂದೆ ಅವರು ಕಳುಹಿಸಿಕೊಟ್ಟಿದ್ದು, ಸರ್ಕಾರದಲ್ಲಿ ಇದ್ದುದು, ಅನಂತರ ಅವರು ಲೆಟರ್‌ನ್ನು ಬರೆದಿರತಕ್ಕದ್ದು ಎಲ್ಲಾ ಆಗಿದೆ. 28-10-87ರಲ್ಲಿ ಲೆಟರ್ ಬರೆದಿದ್ದನ್ನು ಇವರು ಇಲ್ಲಿ ಕ್ಯಾನ್ಸಲ್ ಮಾಡಿದ್ದಾರೆ, ಮತ್ತು ಅದರಮೇಲೆ ಅಲಿಗೇಷನ್ ಕೂಡ ಇದೆ. ಅಂದರೆ ಸೈಟುಗಳನ್ನು ಹಂಚುವುದರಲ್ಲಿ ಲಕ್ಷಾಂತರ ರೂಪಾಯಿ ಅವ್ಯವಹಾರವಾಗಿದೆ, ಇದು ಸರಿಯಾಗಿಲ್ಲ ಎಂದು. ಲೋಕಾಯುಕ್ತಕ್ಕೆ ಇದನ್ನು ರೆಫರ್ ಮಾಡಿದರು. ಅಲ್ಲಿ ಅವರು ಕೆಲವು ಛಾರ್ಜಸ್‌ನ್ನು ಫ್ರೇಂ ಮಾಡಿ ಇದನ್ನು ಮಾಡಿರತಕ್ಕದ್ದು ತಪ್ಪು ಎಂದು ಅವರು ಹೇಳಿದ್ದಾರೆ. ಅಂದಮೇಲೆ ನಾವು ಅದಕ್ಕೆ ಮೋಟಿವ್ ಮಾಡುವುದಕ್ಕೆ ಸಾಧ್ಯವೆ? ಸೈಟುಗಳ ಅಲಾಟ್‌ಮೆಂಟ್‌ನ್ನು ಕ್ಯಾನ್ಸಲ್ ಮಾಡಿದಮೇಲೆ ಮುಂದಿನ ಪ್ರೊಸೀಜರ್ ಏನಾಗುತ್ತದೆ ಎಂದರೆ ಅಲ್ಲಿ ಯಾರಿಗೂ ಸೈಟನ್ನೇ ಕೊಟ್ಟಿಲ್ಲ ಎಂದು ಹೇಳಿದಂತಾಗುತ್ತದೆ. ಒಂದುಸಾರಿ ಅಲಾಟ್‌ಮೆಂಟ್ ಕ್ಯಾನ್ಸಲ್ ಮಾಡಿದಮೇಲೆ ಆ ಪ್ರಶ್ನೆ ಉದ್ಭವಿಸುವುದಿಲ್ಲ. ಒಂದುವೇಳೆ ಇದೆಯೆಂದು ತೆಗೆದುಕೊಂಡರೂ, ಕೂಡ ಮುಂದೆ ಅಲಾಟ್‌ಮೆಂಟ್‌ನ್ನು ಕ್ಯಾನ್ಸಲ್ ಮಾಡಿ ಯಥಾಪ್ರಕಾರ ಲ್ಯಾಂಡ್ ಇದ್ದಾಗ ಅವರು ಒಂದು ರೆಪ್ರೆಸೆಂಟೇಷನ್‌ನ್ನು ಕೊಟ್ಟರು. ಇವರು ಹಿಂದೆ ಅನೇಕ ಜನ ಮಂತ್ರಿಗಳಿಗೆ ಕೊಟ್ಟರು. ಕೇವಲ ನರಸಿಂಹಮೂರ್ತಿಯವರಿಗೇ ಅಥವಾ ಈಗಿನ

ಮುಖ್ಯಮಂತ್ರಿಗಳಿಗೆ ಮಾತ್ರ ಕೊಟ್ಟಿಲ್ಲ. ಹಿಂದೆ ಹೆಚ್.ಯು.ಡಿ. ಮಂತ್ರಿಗಳಾಗಿದ್ದ ಮಾನ್ಯ ಚಂದ್ರಶೇಖರ್‌ವರಿಗೂ ಕೊಟ್ಟಿದ್ದಾರೆ. ಮಧುದಂಡವತೆಯವರಿಗೂ ಕೊಟ್ಟಿದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರೆಗೂ ಕೊಟ್ಟಿದ್ದಾರೆ. ಈ ರೀತಿ ಕೊಟ್ಟೂ ಕೊಟ್ಟೂ ಆದೆಲ್ಲಾ ಪರಿಶೀಲನೆಯಾಗಿ ಒಂದು ಹಂತಕ್ಕೆ ಬಂತು. ಈಗಿರತಕ್ಕ ಜಿಲ್ಲಾಧಿಕಾರಿಯವರಿಗೆ ಕೊಟ್ಟಮೇಲೆ ಅವರು 3 ಕಂಡೀಷನ್ಸ್ ಹಾಕಿದ್ದರು. ಏನೆಂದರೆ ಈ ಜಮೀನನ್ನು ಬಿಟ್ಟುಕೊಡಬೇಕಾದರೆ ನೀವು 11 ಎಕರೆ ಜಮೀನನ್ನು ಫ್ರೀ ಆಫ್ ಕಾಸ್ಟ್ ಬಿಟ್ಟುಕೊಡಬೇಕು ಅಂತ. ಆ 3 ಕಂಡಿಷನ್ಸ್ ಏನಿವೆ ಎಂಬುದನ್ನು ತಮಗೆ ಓದಿ ಹೇಳುತ್ತೇನೆ.

1) To provide 11 acres of land in Survey No.935 of Bellary Village to Urban Development Authority, Bellary free of cost and free from all encumbrances.

2) The applicants should bear the cost of acquisition and formation of 30 ft wide approach road to land survery No.935.

3) To carry out the layout in the land to be denotified to reimburse the amount spent by the erstwhile City Improvement Board. ಸಿಟಿ ಇಂಪ್ರೂವ್‌ಮೆಂಟ್ ಬೋರ್ಡ್‌ನವರು ಸುಮಾರು 1 ಲಕ್ಷ ಚಿಲ್ಲರೆ ಏನು ಖರ್ಚುಮಾಡಿದ್ದಾರೆ, ಅಷ್ಟು ಹಣವನ್ನೂ ಅವರಿಗೆ ವಾಪಸು ಕೊಡಬೇಕು ಎಂದು ಹೇಳಿ, ಈ 3 ಕಂಡಿಷನ್‌ಗಳನ್ನೂ ನೀವು ಒಪ್ಪಿಕೊಂಡರೆ ನಿಮ್ಮ ಜಮೀನನ್ನು ನಿಮಗೇ ಕೊಡುತ್ತೇವೆ, ಡಿ ನೋಟಿಫೈ ಮಾಡುತ್ತೇವೆಂದು ಹೇಳಿದ್ದಾರೆ. ಈ ರೀತಿ ಹೇಳಿದಮೇಲೆ ಅದೇ ಪ್ರಕಾರ ಅರ್ಜಿದಾರರು ಆ ಕಂಡೀಷನ್ಸ್‌ಗಳನ್ನು ಫುಲ್‌ಫಿಲ್‌ಮೆಂಟ್ ಮಾಡಿದರು. 11 ಎಕರೆ ಜಮೀನನ್ನು ರೆಸ್ಟೋರ್ ಮಾಡಿಕೊಟ್ಟರು. ಆಮೇಲೆ ಒಂದು ಲಕ್ಷ ನಲವತ್ತೂರುಸಾವಿರ ರೂಪಾಯಿಗಳನ್ನು ಕೂಡ ಡಿಪಾಸಿಟ್ ಮಾಡಿದರು. ತದನಂತರ ಅಲ್ಲಿ ರೋಡಿದೆ, ಆ ರೋಡ್‌ನ್ನು ವೈಡನ್ ಮಾಡತಕ್ಕಂಥದ್ದು, ಅನಂತಪುರಕ್ಕೆ ಹೋಗುವುದು, ಅದಕ್ಕೂ ಕೂಡ ಲ್ಯಾಂಡ್ ಅಕ್ವಿಜಿಷನ್ ಮಾಡಿ 30 ಫೀಟ್ ವೈಡ್ ರೋಡಿಗೆ ಕೂಡ ಒಪ್ಪಿಕೊಂಡರು. ಇದಾದಮೇಲೆ ಆ ಕಂಡೀಷನ್‌ಗಳನ್ನು ಫುಲ್‌ಫಿಲ್‌ಮೆಂಟ್ ಮಾಡಿ ಒಪ್ಪಿಕೊಂಡನಂತರ ಡಿ ನೋಟಿಫಿಕೇಷನ್ ಆಗಿದ್ದು. ಎಲ್ಲಿಂದ ಪ್ರೊಸೆಸ್ ಸ್ಟಾರ್ಟ್ ಆಗಿದೆ? ಇದು 1986-87ನಿಂದ ಹಾಗೆಯೇ ಬರುತ್ತಿದೆ. ಅಂದಾಗ ಇವತ್ತು ಸಡನ್ ಆಗಿ ಕಾನೂನು ಬಾಹಿರವಾಗಿ ಮಾಡಿದ್ದೀರಿ. ಇದರಲ್ಲಿ ಏನೋ ಇನ್‌ಟೆನ್‌ಷನ್ ಇದೆ. ನೀವು ವಿಲ್ಲಿಂಗ್ ಮಾಡಿದಿರಿ, ಇದರೊಳಗೆ ಏನೊ ದುರುದ್ದೇಶವಿದೆ ಅಂತ ಹೇಳತಕ್ಕಂಥದ್ದು ಸರಿಯಲ್ಲ. ಏತಕ್ಕೆಂದರೆ ಪಾಪ ಅವರು ಯಾರು ಅಪ್ಲಿಕೆಂಟ್ಸ್ ಬಂದು ಇಲ್ಲಿ ಡಿಫೈಂಡ್ ಮಾಡಿಕೊಳ್ಳುವಂತಿಲ್ಲವಲ್ಲ. ಮತ್ತು ಇದರಲ್ಲಿ ನಾವು ಹಿಂದಿನವರು ಕೂಡ ದುರುದ್ದೇಶದಿಂದ ಮಾಡಿದ್ದಾರೆ ಎನ್ನತಕ್ಕಂಥದ್ದಲ್ಲ. ಅವರು ಹೇಳಿದ್ದಾರೆ. ಏನು? ನೀವು ನನ್ನ ಲ್ಯಾಂಡ್ ಏನು ಅಕ್ವೈರ್ ಮಾಡುತ್ತಿದ್ದೀರಿ. ಅಷ್ಟೇ ಲ್ಯಾಂಡ್ ಅನ್ನು ಪಕ್ಕದ ಸರ್ವೆ ನಂಬರ್‌ನಲ್ಲಿ ಜಮೀನು ಪರ್ಚೇಸ್ ಮಾಡಿ ಕೊಡುತ್ತೇನೆಂದು ಹೇಳಿದ್ದಾರೆ. ಅವರು ನಿಮಗೂ ಕೂಡ ಇದಕ್ಕೆ ಸಂಬಂಧಪಟ್ಟ ಮ್ಯಾಪ್ ಮತ್ತು ಡಾಕ್ಯುಮೆಂಟ್ಸ್ ಎಲ್ಲ ತೋರಿಸಿರಬಹುದು. ಅದರಲ್ಲಿ ನೀವು ಡೆವಲಪ್‌ಮೆಂಟ್ ಮಾಡಿಕೊಳ್ಳಿ ಮತ್ತೆ ನೀವು ಏನು ಖರ್ಚು ಮಾಡಿದ್ದೀರಿ, ಅದನ್ನು ಕೂಡ ನಾನು ಕೊಡುತ್ತೇನೆಂದು ಹೇಳಿದ ಮೇಲೆ ಮತ್ತು ಸರ್ಕಾರದ ಮೇಲೆ ಭಾರ ಇಲ್ಲ, ಅಂದಾಗ ಡೆಪ್ಯುಟಿ ಕಮಿಷನರ್ ಕೂಡ ಸರ್ಕಾರಕ್ಕೆ ಒಂದು ರೆಕಮೆಂಡೇಶನ್ ಕೊಟ್ಟರು. ಇದು ನಮಗೆ ಬೆನಿಫಿಷಿಯಲ್ ಆಗುತ್ತದೆ, ತೆಗೆದುಕೊಳ್ಳಿ ಎಂದು. ಇದೆಲ್ಲ ಕಾನೂನು ಪ್ರಕಾರ ಫುಲ್‌ಫಿಲ್‌ಮೆಂಟ್ ಮಾಡಿದರೆ, ಕಾನೂನು ರೀತಿಯಾಗಿ ನೀವು ಹೇಳಿದ್ದೆಲ್ಲ ಮಾಡಿದಮೇಲೆ ತಾಪತ್ರಯ ಏನಿದೆ? ಡಿ ನೋಟಿಫೈ ಮಾಡುವುದರಲ್ಲಿ ತಪ್ಪೇನಿದೆ? ಡಿ ನೋಟಿಫೈ ಮಾಡಿದರು. ಇದರ ಹಿಂದೆ ನೀವು ಮಾಡಿರಲಿಲ್ಲವೆ? ಒಂದು ಉದಾಹರಣೆಯನ್ನು ಬೇಕಾದರೆ ಕೊಡುತ್ತೇನೆ. ಇದರ ಹಿಂದೆ ಒಂದು ಪ್ರಿಸಿಡೆಂಟ್ ಇದೇ ರೀತಿ ಆಗಿದೆ. The land of Nagabhushan of Siruguppa was denotified and acquired in Notification dated 18-9-86. ಅವರ ಜಮೀನನ್ನು ಷೆಡ್ಯೂಲ್‌ಕ್ಯಾಸ್ಟ್ ಷೆಡ್ಯೂಲ್

ಟ್ರೈಬ್‌ನವರಿಗೆ ಸೈಟ್ಸ್ ಕೊಡುವುದಕ್ಕೆಂದು ಅಕ್ವೈರ್ ಮಾಡಿದ್ದರು. ಅದನ್ನು ಡಿನೋಟಿಫೈ ಮಾಡಿಬಿಟ್ಟರು. ಮಾಡಿ ಮಾಲೀಕರಿಗೆ ಪೊಜೆಷನ್ ಕೊಟ್ಟು ಬಿಟ್ಟರು. ಆಕ್ವಿಜಿಷನ್ ಆಗಿ ಸೈಟ್ಸ್ ಡಿಸ್ಟ್ರಿಬ್ಯೂಷನ್ ಮಾಡತಕ್ಕಂಥ ಸ್ಟೇಜ್‌ನಲ್ಲಿತ್ತು. ಈಗ ಅರ್ಬನ್ ಡೆವಲಪ್‌ಮೆಂಟ್ ಆಕ್ಟ್‌ನಲ್ಲಿ ನನಗೆ ಅಥಾರಿಟಿ ಅಂದರೆ ನಾನು ಕ್ಯಾನ್ಸಲ್ ಮಾಡಿದರೆ ಆದರಿಂದ ಏನಾಗುತ್ತದೆ? ನನಗೆ ಅಥಾರಟಿ ಇಲ್ಲದೆ ಮಾಡಿದ್ದರೆ ತಪ್ಪು ಎಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇದನ್ನು ಕಾನೂನು ಪ್ರಕಾರ ಡಿ ನೋಟಿಫೈ ಮಾಡಿದರೆ ಅದಕ್ಕೆ ಮೋಟೀವ್ ಮಾಡಿದರೆ ಹೇಗೆ? ಮತ್ತೆ ನೀವು ಇದರ ಹಿಂದೆ ಮಾಡಿದ್ದೀರಿ, ಇಲ್ಲವೆಂದಲ್ಲ, ಇದೇ ರೀತಿಯಾಗಿ ನೀವು ಮಾಡಿದ್ದೀರಿ. ಅದು ಬಡವರ ಸೈಟ್ಸ್, ಆದರೆ ರಾಘವೇಂದ್ರ ನಗರದಲ್ಲಿ ಯಾರಿದ್ದಾರೆ Middle class and Upper Middle Class, how many sites were given to other weaker sections and backward classes, SCs free of cost? ಎನ್ನುವುದನ್ನು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇಲ್ಲಿ ಯಾರಿಗೆ ಕೊಟ್ಟಿದ್ದು ಎಂದರೆ ಮಿಡಲ್‌ಕ್ಲಾಸ್ ಅಂಡ್ ಅಪ್ಪರ್ ಮಿಡಲ್‌ಕ್ಲಾಸ್‌ಗೆ ನೋಲಾಸ್, ನೋಫ್ರಾಫಿಟ್ ಬೇಸಿಸ್‌ಮೇಲೆ ಕೊಟ್ಟಿದ್ದಾರೆ. ಇದು ಒಂದು. ಎರಡನೆಯದು, ಅವರು ಪಾಪ ಸ್ವತಃ ನಾನು ಇದನ್ನು ಒಪ್ಪಿಕೊಳ್ಳುತ್ತೇನೆ, ಸೈಟ್ ಕೊಡುವುದಕ್ಕೆ ಎಂದು ಹೇಳಿ 11 ಎಕರೆಗೆ ಅವರೇ ಡೊನೇಟ್ ಮಾಡಿ ರಿಜಿಸ್ಟ್ರೇಷನ್ ಮಾಡಿ ದುಡ್ಡನ್ನು ಸಹ ತುಂಬಿದ್ದಾರೆ. ಹಾಗಾದರೆ ಒಂದು ಕಡೆ ನಾನು ಕೇಳಬೇಕಾಗುತ್ತದೆ. ಕೌನ್ಸಿಲ್‌ನಲ್ಲಿ ಇದನ್ನು ನಾನು ಕ್ಯಾನ್ಸಲ್ ಮಾಡುತ್ತೇವೆಂದು ಹೇಳಿದ್ದರೆ, ಅದು ಸರಿಯುಲ್ಲವೆನ್ನತಕ್ಕಂಥವಾದ ನನ್ನದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಅದಕ್ಕಾಗಿ ಇದನ್ನು ಹೇಳಿದ್ದೆ. 9-10-1986ರಲ್ಲಿ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 7-10-86ರಂದು ರಾಘವೇಂದ್ರ ಬಡಾವಣೆ ನಿವೇಶನ ಮಂಜೂರಾತಿಯಾದ ಬಗ್ಗೆ ಹೊರಡಿಸಲಾದ ಪ್ರಕಟಣೆಯಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ಮುಂಗಡ ಠೇವಣಿ ಹಣ ಕಟ್ಟುವ ವಿವರಗಳನ್ನು ತೋರಿಸಲಿಲ್ಲವೆನ್ನುವ ಕಾರಣಕ್ಕಾಗಿ ಒಂದು ಸ್ಪೆಷಲ್ ನೋಟಿಫಿಕೇಷನ್ ಆಗಿದೆ. ಆದ್ದರಿಂದ ರೆಕಾರ್ಡ್‌ನ್ನು ತಿದ್ದುವುದಕ್ಕೆ ಹೋಗಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಡಿಸೆಂಬರ್ 1988ರಲ್ಲಿ ಕ್ಯಾನ್ಸಲ್ ಆದಮೇಲೆ ಸೈಟ್ಸ್...

ಶ್ರೀ ಡಿ.ಬಿ. ಚಂದ್ರೇಗೌಡ:- ಸ್ವಾಮಿ ಸೈಟ್ಸ್ ಕ್ಯಾನ್ಸಲ್ ಮಾಡುವುದು ಬೇರೆ, ಡಿ-ನೋಟಿಫೈ ಮಾಡುವುದು ಬೇರೆ. ನೀವು ಮಂತ್ರಿಯಾಗಿದ್ದಾಗ 1982ರಲ್ಲಿ ಈ ಸ್ಕೀಂ ತಯಾರಾದದ್ದು. ಆದ್ದರಿಂದ ನಿಮಗೆ ಹೆಚ್ಚು ವಿಚಾರಗಳು ಗೊತ್ತಿರಬೇಕು.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ:- ಈಗ ಸೈಟುಗಳನ್ನು ಒಂದು ಸಾರಿ ಕ್ಯಾನ್ಸಲ್ ಮಾಡಿದ ಮೇಲೆ ಸೈಟು ಓನರ್‌ಗಳು ಇದ್ದರು ಎಂದು ಅಲ್ಲ. ಲ್ಯಾಂಡ್ ಇದೆ ಸೈಟ್ ಫಾರ್ಮೇಷನ್ ಮಾಡಿದ್ದು ಇರಬಹುದು. ಹಣ ತುಂಬಿದ್ದರು, ಅವರಿಗೆ ಕನ್‌ಫರ್ಮೇಷನ್ ಆಗಿತ್ತು ಎಂಬುದು ಇಲ್ಲ. ಕ್ಯಾನ್ಸಲ್ ಮಾಡದೆ ಹೋಗಿದ್ದರೆ ಕನ್‌ಫರ್ಮ್ ಆಗುತ್ತಿತ್ತು. 2-12-88ರಲ್ಲಿ ಸರ್ಕಾರ ಕ್ಯಾನ್ಸಲ್ ಮಾಡಿದ ಮೇಲೆ ಸರ್ಕಾರವೇ ಅದರ ಓನರ್. ಅದು ಸರ್ಕಾರದ ವಶದಲ್ಲಿದ್ದಾಗ ಅರ್ಬನ್ ಡೆವಲಪ್‌ಮೆಂಟ್ ಆಕ್ಟ್ ಪ್ರಕಾರ if the Government has got power to denotify then this won't come. ಎರಡನೆಯದಾಗಿ ಅವರಿಗೆ ಕಂಡೀಷನ್ ಹಾಕಿ, ಇಂತಹ ಕಂಡೀಷನ್ಸ್ ಫುಲ್‌ಫಿಲ್ ಮಾಡಿ, ಅಂದಾಗ, ನಾವು ಡಿ-ನೋಟಿಫೈ ಮಾಡಿ ನಿಮಗೆ ಪೊಸೆಷನ್ ಕೊಡುತ್ತೇವೆಂದು ಹೇಳಿದ್ದರು. ಅವರಿಗೆ ಪೊಸೆಷನ್ ಸಹ ಕೊಟ್ಟಿದ್ದಿರಿ, ಅವರು ಆಗಲೇ ಪೊಸೆಷನ್ ತೆಗೆದುಕೊಂಡಿದ್ದರು. ಈಗ ಯಾವ ಸ್ಥಿತಿಯಲ್ಲಿ ಸರ್ಕಾರ ತೆಗೆದುಕೊಳ್ಳುತ್ತದೆ? ಇದು ನನಗೆ ಅರ್ಥವಾಗಿಲ್ಲ. ಏಕೆಂದರೆ ದುಡ್ಡು ತುಂಬಿ ಆಯಿತು. ಸೇಲ್ ಡೀಡ್ ಮಾಡಿಕೊಡಲಾಯಿತು. ಎಲ್ಲಾ ಕಂಡೀಷನ್‌ಗಳನ್ನು ಫುಲ್‌ಫಿಲ್ ಮಾಡಿ ಕೊನೆಗೆ ಇಲ್ಲಿಂದ ಡಿ.ಸಿ.ಗೆ ಸರ್ಕಾರದಿಂದ ಆರ್ಡರ್ ಹೋಗುತ್ತದೆ.

"I am enclosing a representation from......regarding de-notification of survey Nos. 831 and 841 of Bellary and fulfilment of conditions therein. Sri Pullaiah has requested to Government for a clear instruction to Bellary Urban Developement Authority for taking necessary action and to accept the pay order of.....Canara Bank, Bellary for Rs.1,49,485/-. In this regard it is further mentioned that the Government has already issued notification on 25.5.1990 and action should be taken accordingly."

ಅಂದಾಗ ಅಲ್ಲಿ ಕೂಡಲೇ ಪೊಸೆಷನ್ ಹ್ಯಾಂಡ್ ಓವರ್ ಆಗಿದೆ. ಈಗ ತಿರುಗಿ ಯಾವ ಪದ್ಧತಿಯಿಂದ ಸರ್ಕಾರದವರು ಅದನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ತಾವು ಹೇಳಿದಿರಿ, ಡಿ–ನೋಟಿಫಿಕೇಷನ್ ಮಾಡಿದ್ದು ತಪ್ಪು ಎಂದು ಹೇಳುತ್ತಿದ್ದೀರಿ. ಅದಕ್ಕಾಗಿ ಇಂಥ ಒಂದು ಸಂದರ್ಭದಲ್ಲಿ ನಿಜವಾಗಿ ನೋಡಿದ್ದರೆ, ಎಮೋಷನಲ್ ಇಶ್ಯೂ ಎಂದು ಟ್ರೀಟ್ ಮಾಡಿ, ನಮ್ಮ ಮಂತ್ರಿಗಳು ಕ್ಯಾನ್ಸಲ್ ಮಾಡಿದರೋ ಏನೋ ಎಂದು ಅನ್ನಿಸುತ್ತದೆ. ಏಕೆಂದರೆ, ಇಷ್ಟೆಲ್ಲ ಫುಲ್‌ಫಿಲ್‌ಮೆಂಟ್ ಮಾಡಿದ್ದ ಮೇಲೆ ನಾಳೆ ಕೋರ್ಟಿಗೆ ಹೋಗಿ ಸ್ಟೇ ತರುತ್ತಾರೆ. ಆ ಮಾತು ಬೇರೆ. ಆದರೆ ಅದರಲ್ಲಿ ಸರ್ಕಾರದ ಉದ್ದೇಶ ಏನಿದೆ? ಏನಾದರು ಹಣದ ವ್ಯವಹಾರ ಇದೆಯೋ? ಏಕೆ ಚುಚ್ಚಿ ಚುಚ್ಚಿ ಹೇಳುತ್ತಿದ್ದಾರೊ ನನಗೆ ಗೊತ್ತಿಲ್ಲ. ಒಂದು ವೇಳೆ ದುರುದ್ದೇಶ ಇದ್ದರೆ, ಎಲ್ಲಾ ಲೀಡರ್‌ಗಳು ರೆಕಮಂಡೇಷನ್ ಮಾಡುತ್ತಿರಲಿಲ್ಲ, ಮಂತ್ರಿಗಳು ರೆಕಮಂಡೇಷನ್ ಮಾಡುತ್ತಿರಲಿಲ್ಲ. ಇವತ್ತೂ ಕೂಡ ಅಲ್ಲಿ ಏನು ನಡೆದಿದೆ ಎಂದರೆ, ಲೋಕಲ್ ಪಾಲಿಟಿಕ್ಸ್ ಇನ್‌ವಾಲ್ವ್ ಆಗಿದೆ. ಮತ್ತೇನು ಇಲ್ಲ. ಪಾರ್ಟಿ ಬೇಸಿಸ್ ಮೇಲೆ ಒಂದು ಲೋಕಲ್ ಪಾಲಿಟಿಕ್ಸ್ ಇನ್‌ವಾಲ್ವ್ ಆಗಿದೆ. ಇದು ಕೆಳಗಿನದ್ದು ಅದಕ್ಕಾಗಿ ಪೊಲಿಟಿಕಲಿ ಮೋಟಿವೇಟೆಡ್ ಸ್ಟೇಟ್‌ಮೆಂಟ್ ಯಾರೂ ಸಹ ಮಾಡುವುದು ಸರಿಯಲ್ಲ. ಅದು ಯಾರಿಗೆ ನ್ಯಾಯವಾಗಿ ಸಿಗಬೇಕು, ಅವರಿಗೆ ಕೊಡಿ. ಸೈಟು ಮಾಡುವುದಕ್ಕೆ ಏನು ಲ್ಯಾಂಡ್ ಕೊಟ್ಟಿದ್ದಾರೆ, ಅದನ್ನು ಸರ್ಕಾರ ಫ್ರೀ ಆಫ್ ಕಾಸ್ಟ್ ತೆಗೆದುಕೊಂಡು ಹಂಚುವುದಕ್ಕೆ ಏನು ತೊಂದರೆಯಾಗುತ್ತದೆ? ಅದಕ್ಕಾಗಿ ಕಾನೂನು ರೀತಿಯಾಗಿ ಒಂದು ಹಂತಕ್ಕೆ ಬಂದು ಮುಟ್ಟಿರುವುದರಿಂದ ಪುನಃ ಏನಾದರು ತಿರುಗಿ ಮಾಡುವುದಕ್ಕೆ ಹೋದರೆ ಕೋರ್ಟಿಗೆ ಹೋಗಿ ಸ್ಟೇ ಆಗಿ ಯಾರಿಗೆ ಸೈಟು ಕೊಡಬೇಕೋ ಅವರಿಗೆ ಕೊಡುವುದಕ್ಕಾಗುವುದಿಲ್ಲ. ಮತ್ತೆ ಈ 11 ಎಕರೆ ಜಮೀನು ಹೋಗುತ್ತದೆ ಹಣವೂ ಹೋಗುತ್ತದೆ. ಮತ್ತೆ ಹತ್ತಾರು ವರ್ಷ ಕೇಸುಗಳು ನಡೆಯುತ್ತವೆ. ಆದಕ್ಕಾಗಿ ದಯವಿಟ್ಟು ಮಂತ್ರಿಗಳು ಇದನ್ನು ಪುನರ್ ಪರಿಶೀಲನೆ ಮಾಡಬೇಕು. ಸೈಟ್ ಕನ್‌ಫರ್ಮ್ ಮಾಡಿ ಸಂಬಂಧಪಟ್ಟವರಿಗೆ ಕೊಡಬೇಕು ಸಂಬಂಧಪಟ್ಟವರು ಅಂದರೆ ಬಡವರಿಗೆ ಏನು ಫ್ರೀ ಆಫ್ ಕಾಸ್ಟ್ ಕೊಡುತ್ತೇವೆಂದು ಹೇಳಿದ್ದೀರಿ, ಆ ಪ್ರಕಾರ 11 ಎಕರೆ ಜಾಗವನ್ನು ತೆಗೆದುಕೊಂಡು ಫ್ರೀ ಆಫ್ ಕಾಸ್ಟ್‌ನಲ್ಲಿ ಕೊಟ್ಟು ನ್ಯಾಯ ದೊರಕಿಸಿಕೊಡಬೇಕು. ಈ ನನ್ನ ಸಲಹೆಯನ್ನು ಮಾನ್ಯ ಮಂತ್ರಿಗಳು ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು:– ಈಗ ಮಾನ್ಯ ನಗರಾಭಿವೃದ್ಧಿ ಸಚಿವರಿಂದ ಉತ್ತರ.

ನಗರಾಭಿವೃದ್ಧಿ ಸಚಿವರಿಂದ ಉತ್ತರ.

4.55. ಪಿ.ಎಂ.

† ಶ್ರೀ ಟಿ.ಎನ್. ನರಸಿಂಹ ಮೂರ್ತಿ:– (ನಗರಾಭಿವೃದ್ಧಿ ಸಚಿವರು): ಸನ್ಮಾನ್ಯ ಸಭಾಧ್ಯಕ್ಷಣಿಯವರೆ, ಬಳ್ಳಾರಿ ನಗರದಲ್ಲಿ ಅಲ್ಲಿನ ಪ್ರಾಧಿಕಾರದವರು ಅಂದರೆ ಇವತ್ತು ಅದನ್ನು ಪ್ರಾಧಿಕಾರ ಎಂದು ಕರೆಯುತ್ತೇವೆ, ಅಂದಿನ ನಗರಾಭಿವೃದ್ಧಿ ಸಮಿತಿಯವರು 1982ನೇ ಸಾಲಿಯಲ್ಲಿ ಅಲ್ಲಿನ ನಾಗರೀಕರಿಗೆ ನಿವೇಶನಗಳನ್ನು ಹಂಚುವಂಥ ಸರ್ಕಾರದ ಕಾರ್ಯಕ್ರಮದ ರೀತ್ಯ ಸುಮಾರು 17 ಎಕರೆ 34 ಗುಂಟೆ ಜಮೀನುಗಳನ್ನು ಅಕ್ವೈರ್ ಮಾಡಬೇಕು ಎಂದು ಮತ್ತು ಅಕ್ವೈರ್ ಆದ

ವಿಚಾರಗಳು, ನಂತರ ಬಡಾವಣೆಯನ್ನು ಅಂದರೆ ಲೇ ಔಟ್ ಮಾಡಿದ್ದು, ಸೈಟ್‌ಗಳನ್ನು ವಿಂಗಡಣೆ ಮಾಡಿದ್ದು ಎಲ್ಲ ಹಂತಗಳಲ್ಲಿ ನಡೆದಿದೆ. ಇವತ್ತಿನ ಈ ಮಹತ್ವದ ಸಭೆಯಲ್ಲಿ ಬಂದಿರತಕ್ಕ ಪ್ರಶ್ನೆ ಬಳ್ಳಾರಿಯ ಅಭಿವೃದ್ಧಿ ಪ್ರಾಧಿಕಾರದವರು ಸರ್ವೆ ನಂಬರ್ 831(ಬಿ), 839(ಸಿ), 841(ಎ), 841 ಜಮೀನಿನಲ್ಲಿ ನಿವೇಶನ ಹಂಚಿರುವ ಬಗ್ಗೆ ಚರ್ಚಿಸುವುದು ಎಂದು ಹೇಳಿ 2 ಘಂಟೆ 35 ನಿಮಿಷಕ್ಕೆ ಈ ಸದನದಲ್ಲಿ ಚರ್ಚೆ ಪ್ರಾರಂಭ ಆಯಿತು. ಈಗ 4 ಘಂಟೆ 55 ನಿಮಿಷಗಳು ಆಗಿದೆ. ಈ ಸಾರ್ವಜನಿಕ ಪ್ರಾಮುಖ್ಯವಾದ ವಿಷಯದ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಈ ವಿಷಯದ ಚರ್ಚೆಗೆ ಸರಿಯಾದ ವಾತಾವರಣ ಸಿಕ್ಕಿಲ್ಲ. ಇದು ಬೇರೆ ವಾತಾವರಣದಲ್ಲಿ ಚರ್ಚೆ ಆಗಿದ್ದರೆ ನೈಜವಾದ ಚಿತ್ರ ಸಿಗುತ್ತಿತ್ತು. ವಿರೋಧಪಕ್ಷದ ನಾಯಕರು, ಮಾನ್ಯ ವಿರೋಧಪಕ್ಷದ ಮಾನ್ಯ ಉಪನಾಯಕರು ಮತ್ತು ಅಲ್ಲಿನ ಪ್ರತಿಭಾವಂತರಾದ ಮೂರು ಜನ ಸದಸ್ಯರು ಏನು ಮಾತನಾಡಿದ್ದಾರೆ, ಅವರೆಲ್ಲರು ನಿನ್ನೆ ಆದರು ಚರ್ಚೆ ಮಾಡಿದ್ದರೆ ನನಗೆ ನೈಜವಾದ ಅಂಶಗಳು ಸಿಗುತ್ತಿತ್ತು. ಮತ್ತು ಆಳುವ ಪಕ್ಷದಲ್ಲಿ ಸನ್ಮಾನ್ಯ ರಾಮಪ್ಪನವರು ಮಾತನಾಡಿದ್ದಾರೆ. ಮಲ್ಲಿಕಾರ್ಜುನ ಖಾರ್ಗೆಯವರು ಮಾತನಾಡಿದ್ದಾರೆ. ಒಂದು ಮಾತನ್ನು ಈ ಸಮಯದಲ್ಲಿ ಪ್ರಾಮಾಣಿಕವಾಗಿ ಹೇಳಬೇಕು ಎಂದು ನನಗೆ ಅನ್ನಿಸುತ್ತದೆ. ಒಮ್ಮೆ ನಮ್ಮ ರಾಜ್ಯದ ಯಾವುದೇ ಭಾಗದಲ್ಲಿ ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ಭೂಮಿ ಸ್ವಾಧಿನಪಡಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಬೆಂಗಳೂರು ಪ್ರಾಧಿಕಾರಕ್ಕೆ ಬೇರೆ ಕಾಯಿದೆ ಇದೆ. ನಗರದ ಪ್ರಾಧಿಕಾರಗಳು 20 ಜಿಲ್ಲೆಗಳಲ್ಲೂ ಇವೆ. 1987ನೇ ಇಸವಿಯಿಂದೀಚೆಗೆ 20 ಪ್ರಾಧಿಕಾರಗಳು ನಮ್ಮ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿವೆ. ಅದರಲ್ಲಿ ಬಳ್ಳಾರಿ ನಗರ ಪ್ರದೇಶ ಕೂಡ ಆ ವ್ಯಾಪ್ತಿಯಲ್ಲಿ ಬರುತ್ತದೆ. 1982ರಲ್ಲಿ ಅಂದಿನ ನಗರಾಭಿವೃದ್ಧಿ ಸಮಿತಿಯವರು ಈ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಎಲ್ಲಿಯವರೆಗೆ ಇದು ಹೋಯಿತು ಎಂಬ ವಿಚಾರವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಸೈಟುಗಳು ವಿಂಗಡಣೆ ಆದಮೇಲೆ ಮತ್ತು 135 ಜನರಿಗೆ ಕೊಟ್ಟು ಆದ ಮೇಲೆ ಇದು ಮುಗಿದುಹೋಗಿದ್ದರೆ ಎಂದು ಈ ಚಿತ್ರ ಬರುತ್ತಿರಲಿಲ್ಲ ಎಂದೆನಿಸುತ್ತದೆ. 1982ರಲ್ಲಿ ಈ ಭೂಸ್ವಾಧೀನ ಮಾಡುವಾಗ ಪ್ರಿಲಿಮಿನರಿ ನೋಟಿಫಿಕೇಷನ್ ಸ್ಟೇಜಿನಲ್ಲಿ ಈ ಭೂ ಒಡೆಯರು ಒಬ್ಬರಿಗೆ ಅಧಿಕಾರವನ್ನು ಕೊಟ್ಟು ಅವರು ಶ್ರೇಷ್ಠ ನ್ಯಾಯಲಯಕ್ಕೆ ಹೋಗಿ, ಸುಮಾರು ಎರಡು ವರ್ಷಗಳ ಕಾಲ ನಮ್ಮ ರಾಜ್ಯದ ಶ್ರೇಷ್ಠ ನ್ಯಾಯಾಲಯದ ಆದೇಶದ ಮೇರೆಗೆ ಸ್ಟೇ ಪಡೆದು ಹೈಕೋರ್ಟಿನಲ್ಲಿ ಉಳಿದಿತ್ತು. ಮಾನ್ಯ ವಿರೋಧಪಕ್ಷದ ನಾಯಕರು ಏನಿದ್ದಾರೆ, ಅವರು ವೈಯುಕ್ತಿಕವಾಗಿ ನನ್ನ ಆತ್ಮಿಯ ಮಿತ್ರರು. ಅವರು ಈ ಸದನದಲ್ಲಿ ವಿರೋಧಪಕ್ಷದ ನಾಯಕರಾಗಿರುವ ಸಂದರ್ಭದಲ್ಲಿ ಈ ಪ್ರಶ್ನೆ ಬಂದಿದ[illegible]ರು ಮೇಲ್ಮನೆಯಲ್ಲಿ ವಿರೋಧಪಕ್ಷದ ನಾಯಕರಾಗಿದ್ದಂಥವರು ಮತ್ತು ಪಾರ್ಲಿಮೆಂಟಿನಲ್ಲಿ ಎರಡು ಸದನದಲ್ಲೂ ಸದಸ್ಯರಾಗಿದ್ದವರು. ಮತ್ತು ಈ ಉನ್ನತವಾದ ಸ್ಥಾನದಲ್ಲಿ ಕೆಲಸ ಮಾಡಿರುವವರಾಗಿದ್ದಾರೆ.

ಒಬ್ಬ ಮಾನ್ಯ ಸದಸ್ಯರು:- ಅವರು ಯಾವ ಮನೆಯನ್ನೂ ಬಿಟ್ಟಿಲ್ಲ.

ಶ್ರೀ ಟಿ.ಎನ್. ನರಸಿಂಹಮೂರ್ತಿ:- ಅವರು ಎಲ್ಲ ಮನೆಯಲ್ಲೂ ಕೆಲಸ ಮಾಡಿರುವವರು. ನಿಜವಾಗಿ ನಾನು ಎಲ್ಲಿ ತಪ್ಪು ಮಾಡಿದ್ದೇನೆ ಎಂಬ ವಿಚಾರ ಹೇಳಿದ್ದರೆ, ನಾನು ಏನಾದರು ತಪ್ಪು ಮಾಡಿದ್ದರೆ ಈ ಕ್ಷಣದಲ್ಲಿ, ಈ ಗಳಿಗೆಯಲ್ಲಿ ಈ ಮನೆ ಬಿಟ್ಟು ಹೋಗುತ್ತಿದ್ದೆ. ಅಷ್ಟೇ ಅಲ್ಲ ಸಾರ್ವಜನಿಕ ಜೀವನವನ್ನೇ ಬಿಟ್ಟುಹೋಗುತ್ತಿದ್ದೆ ಎಂದು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಆದರೆ ಈ ವಾದವನ್ನು ಮಾಡುವ ಕಾಲದಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ ಉಪನಾಯಕರು ಏನು ಹೇಳಿದ್ದಾರೆ ಅಂದರೆ, ಇಡೀ ಸರ್ಕಾರವೇ ರಾಜೀನಾಮೆ ಕೊಡಬೇಕು, ಮತ್ತು ಮಾನ್ಯ ವೀರೇಂದ್ರ ಪಾಟೀಲರೇ ಇದಕ್ಕೆ ಕುಮ್ಮಕ್ಕು ಕೊಟ್ಟಿದ್ದಾರೆ ಎಂದು. ಇದು ಸತ್ಯಕ್ಕೆ ಬಹಳ ದೂರವಾದುದು. ಯಾವುದೇ ರೀತಿಯಲ್ಲಿ ಆ ಬಗ್ಗೆ ವಾದ ಮಾಡುವ ವಿಷಯ ಅಲ್ಲ ಎಂದು ಹೇಳಿ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳತಕ್ಕದ್ದು ಅಗತ್ಯ. ನಾವು ಅಧಿಕಾರಕ್ಕೆ ಬಂದು 7-8 ತಿಂಗಳಾಗಿರಬಹುದು. ಶ್ರೀಮಾನ್ ವೀರೇಂದ್ರಪಾಟೀಲ್‌ರವರ ನೇತೃತ್ವದ ಸರ್ಕಾರ ಇವತ್ತು ಕಾಂಗ್ರೆಸ್ (ಐ) ಸರ್ಕಾರ

ಆಗಿದೆ. ನಮ್ಮ ಪ್ರಣಾಳಿಕೆಯಲ್ಲೂ ಕೂಡ ನಾವು ಹೇಳಿದ್ದೇವೆ. ಇಲ್ಲೂ ಕೂಡ ಅನೇಕ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಏನೆಂದರೆ, ದಕ್ಷ, ಸ್ವಚ್ಛ ಪ್ರಾಮಾಣಿಕವಾದ ಆಡಳಿತವನ್ನು ಕೊಡುವುದಕ್ಕೆ ನಿಮ್ಮ ಪಕ್ಷ ದೃಢ ಸಂಕಲ್ಪ ಮಾಡಿದೆ. ಆ ದಿಸೆಯಲ್ಲಿ ಹೆಜ್ಜೆಯನ್ನು ಇಟ್ಟಿದ್ದೇವೆ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ನಾನು ಈ ಸಭೆಯಲ್ಲಿ ಈ ಒಂದು ಮಾತನ್ನು ಹೇಳುವಾಗ, ಇಲ್ಲಿ ಒಂದು ಕಡತ ನನ್ನಲ್ಲಿದೆ. ನಿಮ್ಮ ಸಮ್ಮುಖದಲ್ಲಿ ಇದನ್ನು ಹೇಳತಕ್ಕಂತಹದ್ದು ಅಗತ್ಯ. ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಕಾಯಿದೆ ಚೌಕಟ್ಟಿನಲ್ಲಿ ಸೈಟಿಗಾಗಿ ಒಂದು ಭೂಮಿಯನ್ನು ಅಕ್ವಿಜಿಷನ್ ಮಾಡಿ, ಅದರಲ್ಲಿ ಸೈಟುಗಳನ್ನು ಮಾಡಿದ್ದಾರೆ. ಬಡಾವಣೆಯನ್ನು ಮಾಡಿದ್ದಾರೆ. ರಾಘವೇಂದ್ರ ಸ್ವಾಮಿ ಹೆಸರಿನಲ್ಲಿ ಮಂತ್ರಾಲಯದ ರಾಘವೇಂದ್ರ ಸ್ವಾಮಿ ಹೆಸರಿನಲ್ಲಿ ಲೇ ಔಟ್ ಮಾಡಿದ್ದಾರೆ. 135 ಜನಗಳಿಗೆ ಸೈಟನ್ನು ಕೊಡಬೇಕೆಂದು ಹಂಚಿಕೆಯನ್ನೂ ಮಾಡಿದರು. ಆದರೂ ಏತಕ್ಕಾಗಿ ಇಷ್ಟು ಗಾತ್ರದ ಕಡತವಾಯಿತು? ಇಷ್ಟು ಗಾತ್ರದ ಕಡತವಾಗುವುದಕ್ಕೆ ಯಾರು ಕಾರಣವೆಂದು ನಾನು ಕೇಳುತ್ತಿದ್ದೇನೆ. ಇವತ್ತು ನನ್ನ ಮೇಲೆ ಒಂದು ಮಾತನ್ನು ಹೇಳಿದರು. ನನ್ನ ಅಪ್ರಾಮಾಣಿಕತೆ ಬಗ್ಗೆ ನೀವೇನಾದರು ಒಂದು ಸಾಸಿವೆ ಕಾಳಿನಷ್ಟು ಪ್ರೂವ್ ಮಾಡುವುದಾದರೆ, ನನ್ನ ಮಂತ್ರಿ ಸ್ಥಾನಕ್ಕಲ್ಲ, ನನ್ನ ಪಕ್ಷದಿಂದ ಹೋಗುತ್ತೇನೆ. ಕೊನೆಗೆ ಸಾರ್ವಜನಿಕ ಜೀವನದಿಂದ ಹೋಗುತ್ತೇನೆ ಎನ್ನತಕ್ಕಂತಹದ್ದನ್ನು ಈ ಸಭೆಯಲ್ಲಿ ಹೇಳುತ್ತೇನೆ. ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಅಧಿಕಾರಕ್ಕೆ ಬಂದಿದ್ದೇನೆ. ಆದರೆ ನಾನು ಮಾಡಿದಂತಹ ಅಪರಾಧ ಅವರ ದೃಷ್ಟಿಯಲ್ಲಿ ಕಡತ ವಿಲೇವಾರಿ ಮಾಡಿದ್ದು. 1982ನೇ ಇಸವಿಯಿಂದ ಇದ್ದಂತಹ ಕಡತವನ್ನು ದಿನಾಂಕ 17-5-90ನೇ ದಿವಸ ಅಂತ ಕಾಣುತ್ತೆ. ಆ ಕಡತವನ್ನು ವಿಲೇವಾರಿ ಮಾಡಿದ್ದು, ಅದೇ ಅಪರಾಧವಿರಬಹುದೆಂದು ನನಗನ್ನಿಸುತ್ತದೆ. ಆ ಅಪರಾಧಕ್ಕೆ ಮಂಜುನಾಥ ಸ್ವಾಮಿ ನನಗೆ ಶಿಕ್ಷೆ ಕೊಡಬೇಕಾಗುತ್ತದೆ. ಆದರೆ ಒಂದು ಮಾತನ್ನು ಶ್ರೀಮಾನ್ ಏಕಾಂತಯ್ಯನವರು ಹೇಳಿದರು. ಪ್ರೊ: ಮಧುದಂಡವತೆಯವರ ಬಗ್ಗೆ ನಮಗೂ ಗೌರವ ಇದೆ. ಇಪತ್ತಿನ ಜನತಾದಳದ, ಅಪತ್ತಿನ ಜನತಾ ಪಕ್ಷದ ಒಬ್ಬ ಪ್ರತಿಭಾವಂತ ನಮ್ಮ ರಾಷ್ಟ್ರದ ನಾಯಕರಲ್ಲಿ ಒಬ್ಬರು ಎಂಬುದಾಗಿ ಅವರ ಬಗ್ಗೆ ಗೌರವ ಇದೆ. ಅವರು ಇವತ್ತು ನಮ್ಮ ಪ್ರಧಾನ ಮಂತ್ರಿಗಳ ಪಕ್ಕದಲ್ಲಿ ಕುಳಿತಿರತಕ್ಕಂಹವರು. ಇಡೀ ರಾಷ್ಟ್ರದ ರಥವನ್ನು ಎಳೆಯುವಂತಹ ಜವಾಬ್ದಾರಿಯನ್ನು ಹೊತ್ತಿರುವ ನಾಯಕರು. ನಮ್ಮ ನೆಚ್ಚಿನ ಏಕಾಂತಯ್ಯನವರು ಹೇಳಿದರು. ಆದರೆ ಮಧು ದಂಡವತೆಯವರ ಪತ್ರವನ್ನು ಇಲ್ಲಿ ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ಇದನ್ನು ರಾಜಕೀಯ ಉದ್ದೇಶದಿಂದ ಹೇಳುತ್ತಿಲ್ಲ. ಡಿ-ನೋಟಿಫೈ ಮಾಡಿ ಎಂದು ಅವರು ಹೇಳಿದ್ದಾರೆಯೋ ಹೇಳಿ ನೋಡೋಣ, ಅಂತ ಅವರು ಕೇಳಿದರು. ಅವರ ಪತ್ರವನ್ನು ಇಲ್ಲಿ ಓದುವುದು ಅಗತ್ಯವೆಂದು ತಿಳಿದುಕೊಂಡು ಈ ಸಂದರ್ಭದಲ್ಲಿ ಹೇಳಬೇಕಾಗುತ್ತವೆ. 27ನೇ ಜನವರಿ 1989ರಲ್ಲಿ ಒಂದು ಪತ್ರ ಬರೆದಿದ್ದಾರೆ. ಮತ್ತೊಂದು ಪತ್ರವನ್ನು 7-6-1985. 7-6-85ರಲ್ಲಿ ಶ್ರೀಮಾನ್ ಲಕ್ಷ್ಮೀಸಾಗರ್ ರವರಿಗೆ ಅಂದಿನ ನಗರಾಭಿವೃದ್ಧಿ ಸಚಿವರಾಗಿದ್ದಾಗ, ಬರೆದಿರತಕ್ಕಂತಹ ಪತ್ರವನ್ನು ಓದುವುದು ಅಗತ್ಯವೆಂದು ತಿಳಿದಿದ್ದೇನೆ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

ಶ್ರೀ ಎಚ್. ಏಕಾಂತಯ್ಯ:- ನಾನೇ ಓದಿದ್ದೇನೆ.

ಶ್ರೀ ಟಿ.ಎನ್ ನರಸಿಂಹ ಮೂರ್ತಿ:- ನಾನು ಮತ್ತೆ ಓದುತ್ತೇನೆ. ನನ್ನ ಬಾಯಲ್ಲಿ ಕೇಳಿ.

"My dear Lakshmisagarji,

This is to bring to your notice a problem that former M.P. Sri Pullaiah, who has a plot in Bellary alongwith ten others, is facing. The lands are being acquired by the City Improvement Trust Board. According to the procedure the RTCs have been given due notice so that the owners of the lands would file objections. It seems this was

not done. You will kindly ask the concerned authorities to look into the problem and do the needful."

ಅಂತ ಹೇಳಿದರು. ಆಮೇಲೆ ಇನ್ನೊಂದು ಪತ್ರ ಇದೆ. ಅದನ್ನು ಸಹ ಓದುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಅಧ್ಯಕ್ಷರೆ....

ಶ್ರೀ ಟಿ.ಎನ್. ನರಸಿಂಹಮೂರ್ತಿ:- ತಾವು ಭಾಷಣ ಮಾಡುವಾಗ ಬಹಳ ಸೌಮ್ಯದಿಂದ ನಿಮ್ಮ ಮಾತನ್ನು ಕೇಳಿದ್ದೇನೆ. ಈಗ ನಾನು ಹೇಳುವುದನ್ನು ಕೇಳಿ ಸ್ವಾಮಿ, ಮತ್ತೊಂದು ಪತ್ರ ಇಲ್ಲಿದೆ. 1989ರಲ್ಲಿ ಅವರು ಬರೆದಿರತಕ್ಕ ಪತ್ರದ ಬಗ್ಗೆ ನಾನು ಪ್ರಸ್ತಾಪ ಮಾಡುತ್ತೇನೆ. ಈ ಎರಡು ಪತ್ರಗಳ ಬಗ್ಗೆ ಶ್ರೀಮಾನ್ ಎಂ.ಪಿ.ಪ್ರಕಾಶ್‌ರವರು, ಶ್ರೀ ಮಧುದಂಡವತೆರವರ ಪತ್ರಗಳ ಬಗ್ಗೆ ಅವರು ತಮ್ಮ ಶಂಕೆಯನ್ನು ವ್ಯಕ್ತಮಾಡಿದ್ದಾರೆ. ಇಂತಹ ಪತ್ರವನ್ನು ಅವರು ಬರೆದೇ ಇಲ್ಲ. ಮಾನ್ಯ ಮಂತ್ರಿಗಳೇ ಹೇಳಿದ್ದಾರೆ. ಆ ರೀತಿ ಏನಾದರು ಇದ್ದರೆ ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆಂದು ಹೇಳಿದ್ದಾರೆ. ಇಲ್ಲದಿದ್ದರೆ ಮಾನ್ಯ ಮಂತ್ರಿಗಳು ರಾಜೀನಾಮೆ ಕೊಟ್ಟು ಹೋಗಬೇಕೆಂದು ಹೇಳಿದ್ದಾರೆ. ಈ ಪ್ರಶ್ನೆಯನ್ನು ಹಾಕುವಾಗ ತಾವು ಇರಲಿಲ್ಲ. ಅವರು ನನಗೆ ಸವಾಲು ಹಾಕಿದರು. ಪ್ರೊ: ಮಧುದಂಡವತೆಯವರು 27ನೇ ಜನವರಿ 1989ರಂದು ಬರೆದ ಪತ್ರ ಈ ರೀತಿ ಇದೆ:

My dear Deshpande,

I had written to Sri.Lakshmisagar on 7th June 1985 in connection with a problem the former M.P.Sri Pullaiah, who has a plot of land in Bellary alongwith others, was facing. I am told Sri Pullaiah and others had offered in alternative land free of cost for distribution of sites. It seems the proposal have been accepted. I learnt there are some procedural difficulties and as a result the process for denotification has been held up. May I request you to advise the concerned officers to get the matter enquired into and do the needful. ಆಮೇಲೆ ಮಾನ್ಯ ಚಂದ್ರಶೇಖರ್‌ರವರು, ಶ್ರೀಮಾನ್ ಕೃಷ್ಣಯ್ಯರ್‌ನವರು ಮಂತ್ರಿಗಳಾಗಿದ್ದಾಗ ಒಂದು ಪತ್ರ ಬರೆಯುತ್ತಾರೆ. 24-6-88ರಂದು ಡಿನೋಟಿಫೈ ಮಾಡಿದ್ದಾರೆ. ಆ ಡಿನೋಟಿಫಿಕೇಷನ್ ಅನ್ನು ಏತಕ್ಕೆ ಜಾರಿಕೊಡಲಿಲ್ಲವೆಂದರೆ, ಸೈಟುಗಳೆಲ್ಲಾ ಬೆನಿಫಿಷರಿಯಸ್‌ಗೆ ಅಲಾಟ್ ಆಗಿತ್ತು. ಅದನ್ನು ಕ್ಯಾನ್‌ಸಲ್ ಮಾಡದ ಹೊರತು ಇದನ್ನು ಡಿನೋಟಿಫೈ ಮಾಡುವುದಿಲ್ಲ ಎಂದು ಒಂದೇ ಒಂದು ತಾಂತ್ರಿಕ ಕೊರತೆಯಿಂದ ಇದು ಆಗಿದೆ ಹೊರತು ಡಿನೊಟಿಫಿಕೇಷನ್ 1988ನೇ ಇಸವಿಯಲ್ಲಿ ಅಂದಿನ ನಗಾರಾಭಿವೃದ್ಧಿ ಸಚಿವರಾಗಿದ್ದ ಶ್ರೀಮಾನ್ ಚಂದ್ರಶೇಖರ್ ಮಾಡಿದ ಮೇಲೆ ನನ್ನದು ಏನಿದೆ? I will tell you what is there. ಶ್ರೀಮಾನ್ ಕೃಷ್ಣಯ್ಯರ್‌ನವರಿಗೆ ಶ್ರೀಮಾನ್ ಚಂದ್ರಶೇಖರ್‌ರವರು ಬರೆಯುತ್ತಾರೆ. ಹೈಕೋರ್ಟಿನಲ್ಲಿ ಸ್ಟೇ ವೆಕೆಟ್ ಆದ ತಕ್ಷಣವೇ ಮಂತ್ರಿಗಳ ಹಸ್ತಕ್ಷೇಪ. ಹೈಕೋರ್ಟ್‌ನಲ್ಲಿ ಸ್ಟೇ ವೆಕೆಟ್ ಆದಮೇಲೆ ಲ್ಯಾಂಡ್ ಫ್ರೀ ಆಗುತ್ತದೆ. ಮತ್ತೆ ಶ್ರೀಮಾನ್ ಚಂದ್ರಶೇಖರ್‌ರವರು ನಗರಾಭಿವೃದ್ಧಿ ಸಚಿವರಿಗೆ 18-10-84ರಂದು ಒಂದು ಪತ್ರ ಬರೆಯುತ್ತಾರೆ.

ಸನ್ಮಾನ್ಯ ಕೃಷ್ಣಯ್ಯರ್‌ನವರೇ,

ಶ್ರೀ ಡಿ. ಪುಲ್ಲಯ್ಯ, ಲೋಕಸಭಾ ಸದಸ್ಯರು, ಆಂಧ್ರಪ್ರದೇಶ ಅವರನ್ನು ತಮಗೆ ಈ ಪತ್ರದ ಮುಖಾಂತರ ಪರಿಚಯ ಮಾಡಿಕೊಳ್ಳಲು ಸಂತೋಷವಾಗುತ್ತದೆ. ಬಳ್ಳಾರಿ ಪಟೇಲ್‌ನಗರದಲ್ಲಿ ಶ್ರೀಮಂತರಿಗೆ ಮತ್ತಿತರ 8 ಮಂದಿಗೆ ಸೇರಿದ ಸುಮಾರು 16 ಎಕರೆ ಜಮೀನನ್ನು ಬಳ್ಳಾರಿ ನಗರಾಭಿವೃದ್ಧಿ ಮಂಡಲಿಯವರು ಅಕ್ವೈರ್ ಮಾಡಿಕೊಳ್ಳಲು ಪ್ರಸ್ತಾವನೆ ಇದ್ದು, ಸದರಿಯವರು ರಾಧಾಕೃಷ್ಣ ಕೋ ಆಪರೇಟಿವ್ ಹೌಸಿಂಗ್ ಬಿಲ್ಡಿಂಗ್ ಸೊಸೈಟಿ ಲಿಮಿಟೆಡ್ ಮಾಡಿಕೊಂಡಿದ್ದು, ಈ ಜಮೀನನ್ನು ಸದರಿ ಸಂಸ್ಥೆಗೆ ಸಿ.ಐ.ಟಿ.ಬಿ. ಮತ್ತು ಯೋಜನೆ ಇಲಾಖೆಯವರು ಮಂಜೂರು ಮಾಡುವ

ಬಡಾವಣೆಯ ಪ್ಲಾನ್ ಪ್ರಕಾರ ತೆಗೆದುಕೊಳ್ಳುವರೆಂದು ತಿಳಿಸಿದ್ದಾರೆ. ಈ ಹಿಂದೆ ನಾನು ನಗರಾಭಿವೃದ್ಧಿ ಇಲಾಖೆಯ ಹೊಣೆಗಾರಿಕೆಯನ್ನು ಹೊಂದಿದ್ದಾಗ, ಸದರಿ ಜಮೀನನ್ನು ಅಕ್ವೈರ್ ಮಾಡುವುದನ್ನು ಪರಿಶೀಲಿಸಿ ಕೈಬಿಡಬೇಕೆಂದು ಸೂಚನೆ ಇಟ್ಟಿದ್ದೆನು. ಸದರಿಯವರು ಹೌಸಿಂಗ್ ಕೋ ಆಪರೇಟಿವ್ ಮಾಡಿಕೊಂಡಿದ್ದು, ನಗರಾಭಿವೃದ್ಧಿ ಮಂಡಳಿ ಮತ್ತು ಯೋಜನೆ ಇಲಾಖೆಯವರು ಸೊಸೈಟಿಯವರ ಬಡಾವಣೆ ಮಾಡಲು ಅನುಮತಿ ಕೋರಿದ್ದಾರೆ. ಉಳಿದ ವಿಚಾರವನ್ನು ನಾನು ತಮ್ಮೊಡನೆ ಮಾತನಾಡುತ್ತೇನೆ. ಈ ವಿಚಾರದಲ್ಲಿ ಚಂದ್ರಶೇಖರ್, ಕೃಷ್ಣಯ್ಯನವರು ಪ್ರತ್ಯೇಕವಾಗಿ ಮಾತನಾಡಬೇಕೆಂಬ ಸೂಚನೆಯನ್ನು ಕೂಡ ಕೊಟ್ಟಿದ್ದಾರೆ.ಈ ಬಗ್ಗೆ ತ್ವರಿತವಾಗಿ ತೆಗೆದುಕೊಳ್ಳಲು ಆದೇಶ ನೀಡಬೇಕೆಂದು ಕೋರುತ್ತೇನೆ. ಇದು ಮಾನ್ಯ ಚಂದ್ರಶೇಖರ್‌ರವರು ಆವತ್ತಿನ ಲೋಕೋಪಯೋಗಿ ಸಚಿವರಾಗಿ ಬರೆದಿರತಕ್ಕದ್ದು. ಇನ್ನೊಂದು ಮಾತನ್ನು ಬಹಳ ಜವಾಬ್ದಾರಿಯಿಂದ ಹೇಳಿದ್ದೀರಿ. ಶ್ರೀಮಾನ್ ಎಂ.ಪಿ.ಪ್ರಕಾಶ್ ಅವರ ಪತ್ರ ತಮ್ಮಲ್ಲಿ ಇಲ್ಲವೆಂದು ಕಾಣುತ್ತದೆ. ಅವರು 27-6-1986ರಲ್ಲಿ ಆ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾಗಿದ್ದುಕೊಂಡು ಏನು ಬರೆದಿದ್ದಾರೆಂದು ಹೇಳುತ್ತೇನೆ. ಕೇಳಿ.

"It is represented that it is proposed to acquire the land situated in Survey No.839/B, 839/C and 841 A and B consisting about 17.5 guntas in Bellary Town by the City Improvement Trust Board Bellary for the purpose of-formation of sites belonging to Sri.Pullaiah Ex-MP and 8 others. In this connection, it is represented that most of the land owners are farmers and are entirely depending on these lands for their livelihood and as such they have requested to drop the proceedings by the City Improvement Trust Board, Bellary. The Hon'ble Minister may kindly get the request examined in detail and issue necessary direction to the concerned to drop the proceedings for the acquisition of lands proposed by the city improvement Trust Board, Bellary early.

ಶ್ರೀ ಹೆಚ್. ಏಕಾಂತಯ್ಯ:- ಅದನ್ನು ಸಹ ನಾನು ಓದಿದ್ದೇನೆ

ಶ್ರೀ ಟಿ.ಎನ್. ನರಸಿಂಹಮೂರ್ತಿ:- ಇದನ್ನು ನೀವು ಓದಲಿಲ್ಲ. ಇದು ರೆಕಾರ್ಡಿನಲ್ಲಿ ಇಲ್ಲ. ಬೇಕಾದರೆ ತೆಗೆದುನೋಡಿ. ಇಲ್ಲಿ ಮತ್ತೊಂದು ಮುಖ್ಯವಾದ ವಿಚಾರ ಹೇಳುತ್ತೇನೆ. ಅದೇನೆಂದರೆ, Sri. C.Gopal Reddy, he as the private Secretary to the then Chief Minister: ಏನು ಹೇಳಿದ್ದಾರೆಂದರೆ : Chief Minister has seen the file on 25.2.87 vide No. SCM END/74/87. Sri.Pullaiah has offered to give alternative land and the sketch given by him is placed in this file. The Chief Minister has desired that an objective report may be obtained from the Dy.Commissioner. Since the requirement of the CITB, Bellary is only sites not particular survey member, DCCB may kindly be contained and put up. ಮಾನ್ಯ ಅಧ್ಯಕ್ಷರೇ, ಅಂದಿನ ಮುಖ್ಯಮಂತ್ರಿಗಳು ಸಹಾ ತಮ್ಮ ಸೂಚನೆಯನ್ನು ಹೇಗೆ ಕೊಟ್ಟಿದ್ದಾರೆಂದು ನಮಗೆ ಗೊತ್ತಿದೆ. ಅಂದಿನ ಮುಖ್ಯಮಂತ್ರಿಗಳು ತಮ್ಮ ಅಭಿಪ್ರಾಯವನ್ನು ಕೇಳಿದ್ದಾರೆ. ಮತ್ತೊಂದು ಬಹಳ ಮುಖ್ಯವಾಗಿರತಕ್ಕದ್ದು ಅಂದರೆ ಅಂದಿನ ರಾಜ್ಯಪಾಲರು ರಾಷ್ಟ್ರಪತಿ ಆಡಳಿತ ಕಾಲದಲ್ಲಿ ಸೂಕ್ಷ್ಮವಾಗಿ ಏನು ಹೇಳಿದ್ದಾರೆಂದರೆ, His Excellency the Governor Sri Venkatasubbaiah has also ordered for denotification on 29th November, 1989. The Advocate General's opinion is, there is no prohibition under the articles for denotification, ಎಂದು

ಹೇಳಿರುವುದರಿಂದ ಇದಕ್ಕೆ ಎಲ್ಲಾ ಹಂತದಲ್ಲೂ ಕೂಡಾ ಗ್ರಹಣ ಹಿಡಿದಿದೆ. ಈ ಗ್ರಹಣವನ್ನು ನಾನು ಬಿಡಿಸಿದ್ದೇನೆ. ಅಷ್ಟೇ, ಇವತ್ತು ಆಡಳಿತದ ವ್ಯವಸ್ಥೆಯಲ್ಲಿ ಬಹಳ ಮುಖ್ಯವಾದ ಪ್ರಾಮುಖ್ಯವಾದ ಅಂಗಗಳು ಎರಡು. ಒಂದು ಹಣಕಾಸು ಇಲಾಖೆ, ಇನ್ನೊಂದು ಕಾನೂನು ಇಲಾಖೆ. ನಾವು ಯಾವುದೇ ಅಭಿವೃದ್ಧಿ ಕಾರ್ಯಗಳಿಗೆ ಹಣ ಕೊಡಬೇಕಾದರೆ, ಇವತ್ತು ಬಜೆಟ್ ಪಾಸ್ ಮಾಡಿದ್ದರೂ ಕೂಡಾ ಫೈನಾನ್ಸ್ ಡಿಪಾರ್ಟ್‌ಮೆಂಟ್ ಕ್ಲಿಯರೆನ್ಸ್ ಇಲ್ಲದೇ ಏನೂ ಮಾಡುವುದಕ್ಕಾಗುವುದಿಲ್ಲ. ಕಾನೂನು ಇಲಾಖೆ ಅಭಿಪ್ರಾಯದಲ್ಲಿ ಭಿನ್ನ ಬಂದಾಗ, The Advocate General's opinion, I think, is something which is almost an inevitable advise to the Government. ಇವತ್ತು ರಾಷ್ಟ್ರಮಟ್ಟದಲ್ಲಿ ಅಟಾರ್ನಿ ಜನರಲ್ ಹಾಗೂ ರಾಜ್ಯಮಟ್ಟದಲ್ಲಿ ಅಡ್ವಕೇಟ್ ಜನರಲ್ ಇದ್ದಾರೆ. ಒಬ್ಬರು ಅಲ್ಲ ಇಬ್ಬರು ಅಡ್ವಕೇಟ್ ಜನರಲ್ ತಮ್ಮ ಅಭಿಪ್ರಾಯ ಕೊಟ್ಟಿದ್ದಾರೆ. ಅವರು ಏನು ಹೇಳುತ್ತಾರೆ ಅಂದರೆ ಈ 11 ಎಕರೆ ಜಮೀನು ಬೇರೆ ಕಡೆ ಕೊಡುತ್ತಿದ್ದಾರಂತೆ, ಆದರಿಂದ ಸರ್ಕಾರಕ್ಕೆ ನಷ್ಟವಾಗುವುದಿಲ್ಲವಾದ್ದರಿಂದ ಬಡಜನರಿಗೆ ಸೈಟ್ ಕೊಡುವುದಕ್ಕೆ ಅನುಕೂಲವಾಗುತ್ತದೆ. ಈ ಸರ್ವೇನಂಬರ್ 935ರಲ್ಲಿ ನಮ್ಮ ಜಿಲ್ಲಾಧಿಕಾರಿಗಳ ವರದಿ ಪ್ರಕಾರ ಆ ರಾಘವೇಂದ್ರ ಕಾಲೋನಿ ಎಂದು ಏನು 17 ಎಕರೆ 5 ಗುಂಟೆ ಜಮೀನಿನಲ್ಲಿದೆ, ಆದಕ್ಕೆ ಬದಲಾಗಿ ಬೇರೆ ಕಡೆ ಅವರು ಏನು ಕೊಡುತ್ತಿದ್ದಾರ 935ನೇ ಸರ್ವೇ ನಂಬರ್‌ನಲ್ಲಿ ಆ ಸರ್ವೇ ನಂಬರ್‌ನಲ್ಲಿ ಕೊಡುವ 11 ಎಕರೆ ಜಮೀನಿಗೂ ಅಲ್ಲಿಗೂ ಕೂಡಾ 1 ಕಿ.ಮೀ. ದೂರ ಇದೆಯೆಂದು ಏನು ಹೇಳುತ್ತಾರೆ. ಅದನ್ನು ನಾನು ನೋಡಿಲ್ಲ. ಬಹುಶಃ ಅವರು ಕೊಟ್ಟಿರತಕ್ಕ ವರದಿಯ ಹಿನ್ನೆಲೆಯಲ್ಲಿ ನಾನು ಹೇಳುತ್ತಿದ್ದೇನೆ. ತಾವು ಆ ಸ್ಥಾನದಲ್ಲಿ ಕುಳಿತಿದ್ದೀರಿ. ಆ ಪ್ರಾಮಾಣಿಕವಾದ ಸರ್ಕಾರದ ನಿಲುವನ್ನು ನಾನು ಹೇಳುತ್ತಿದ್ದೇನೆ. ನನಗೆ ಅಡ್ವಕೇಟ್ ಜನರಲ್‌ರವರ ಅಭಿಪ್ರಾಯ ಬಂತು. ಇವತ್ತು ತಮಗೆ ಒಂದು ಸಂತೋಷದ ವಿಷಯ ಹೇಳಬೇಕೆಂದರೆ, ನಮ್ಮ ಮುಖ್ಯಮಂತ್ರಿಗಳು ನಮಗೆ ಕೊಟ್ಟಿರತಕ್ಕ ಸೂಚನೆಗಳ ಬಗ್ಗೆ ಇಲ್ಲಿ ಹೇಳಬೇಕಾಗುತ್ತದೆ. ನಾವು ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದರೆ ಅವನ್ನು ಜಾಗ್ರತೆ ತೆಗೆದುಕೊಳ್ಳಿ, ಸಾರ್ವಜನಿಕರ ದೃಷ್ಟಿಯಿಂದ ಕಡತ ವಿಲೇವಾರಿ ಮಾಡಿ ಮತ್ತು ನಿರ್ಧಾರ ತೆಗೆದುಕೊಳ್ಳುವಾಗ ಯೋಗ್ಯವಾದ ನಿರ್ಧಾರ ತೆಗೆದುಕೊಳ್ಳಿ ಎನ್ನುವ ಸ್ವಾತಂತ್ರ್ಯವನ್ನು ನಮಗೆ ಕೊಟ್ಟಿದ್ದಾರೆ. ಈಗ ಮುಖ್ಯಮಂತ್ರಿಗಳು ಸಹ ಸಭೆಯಲ್ಲಿದ್ದಾರೆ. ಇದನ್ನು ನಾನು ಸಂತೋಷದಿಂದ ಹೇಳುತ್ತೇನೆ. ನನಗೆ ಕೊಟ್ಟಿರತಕ್ಕ ಇಲಾಖೆಯಲ್ಲಿ ಹೆಚ್.ಯು.ಡಿ.ಗೆ ಸಂಬಂಧಪಟ್ಟ 376 ಫೈಲ್‌ಗಳಲ್ಲಿ ನಾನು 369 ಫೈಲ್‌ಗಳನ್ನು ವಿಲೇವಾರಿ ಮಾಡಿದ್ದೇನೆ. ಅದರಲ್ಲಿ ಇದೂ ಒಂದು. ಅಡ್ವಕೇಟ್ ಜನರಲ್‌ರವರ ಅಭಿಪ್ರಾಯ ಬಂದಿದೆ. ಒಬ್ಬರಲ್ಲ ಇಬ್ಬರು ಹೇಳಿದ್ದಾರೆ. ಆದ್ದರಿಂದ ಈ ಕಡತವನ್ನು ವಿಲೇವಾರಿ ಮಾಡಲೇಬೇಕಾಗಿತ್ತು. ಏಕೆಂದರೆ, ಅಡ್ವಕೇಟ್ ಜನರಲ್‌ರವರ ಅಭಿಪ್ರಾಯಕ್ಕೆ ಮಾನ್ಯತೆ ಕೊಡಬೇಕಾಗುತ್ತದೆ. ಇದಕ್ಕೆ ಕಾನೂನು ಮಂತ್ರಿಗಳೂ ಕೂಡ ಒಪ್ಪಿಗೆ ಕೊಟ್ಟಿದ್ದಾರೆಂದು ಹೇಳಿದ ಮೇಲೆ ಇದು ಒಂದಕ್ಕೆ ನಾನು ರಾಜೀನಾಮೇ ಕೊಡಬೇಕೇ? ಅಥವಾ ಈ ಕಡತ ವಿಲೇವಾರಿ ಮಾಡಿದ್ದಕ್ಕೆ ಇಡೀ ಸರ್ಕಾರ ರಾಜೀನಾಮೆ ಕೊಡಬೇಕೇ? ಇಲ್ಲಿ ನಾವು ಏನು ತಪ್ಪು ಮಾಡಿದ್ದೇವೆಂದು ಹೇಳಿ. ಮಾನ್ಯ ಅಧ್ಯಕ್ಷರೇ, ಒಂದು ಮಾತನ್ನು ನಾನು ತಮಗೆ ಹೇಳುತ್ತೇನೆ. ಅವತ್ತು ಈ ವಿಚಾರ ಪತ್ರಿಕೆಗಳಲ್ಲಿ ಬಹಳದೊಡ್ಡದಾಗಿ ಬಂತು. ಮೇಲ್ಮನೆಯಲ್ಲಿ ನನ್ನ ಮಿತ್ರರಾದ ನಾಣಯ್ಯನವರು 29ನೇ ತಾರೀಖು ಎತ್ತಿದ ವಿಷಯದ ಬಹಳ ದೊಡ್ಡದಾಗಿ ಪತ್ರಿಕೆಗಳಲ್ಲಿ ಬಂತು. ಬಹುಶಃ ಅವತ್ತು ಏನು ನಮ್ಮ ಮನೆಯಲ್ಲಿ ಆಯಿತು ಎಂಬುದನ್ನು ಹೇಳಿದರೆ ತಾವು ಸಹ ಒಪ್ಪುತ್ತೀರಿ. ನಮ್ಮ ಮನೆಯಲ್ಲಿ ಹೆಂಗಸರಾದಿಯಾಗಿ ನಮ್ಮ ಹೆಂಡತಿ ಮಕ್ಕಳೂ ಕೂಡಾ ಕಣ್ಣಲ್ಲಿ ನೀರು ಹಾಕಿದ್ದಾರೆ. ಒಂದು ಕ್ಷಣದಲ್ಲಿ ನಾನು ಮಂತ್ರಿ ಆಗಿರಲಿಕ್ಕೆ ಇಷ್ಟ ಇರುತ್ತಿರಲಿಲ್ಲ ನನಗೆ.

(ಈ ಸಂದರ್ಭದಲ್ಲಿ ಸಚಿವರು ಗದ್ಗದಿತರಾಗಿ ಒಂದು ನಿಮಿಷ ಮೌನವಾಗಿ ನಿಂತರು)

ಶ್ರೀ ಎ.ಬಿ. ಜಕನೂರ್:- ಅಯ್ಯರ್‌ರವರಿಗೆ ಪತ್ರ ಬರೆದಿದ್ದು ಇನ್ನುಳಿದ ವಿಷಯವನ್ನು ಸಮಕ್ಷಮದಲ್ಲಿ ಮಾತನಾಡೋಣವೆಂದು ಹೇಳಿದ್ದಾರೆ. ಆ ಉಳಿದ ವಿಷಯ ಏನೆಂದು ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಅದೇನೆಂದು ನಮಗೆ ಗೊತ್ತಿಲ್ಲ. ಅವರಿಗೆ ಗೊತ್ತಿದ್ರೆ ಹೇಳಲಿ. ಅದೇನೆಂದು ನೀವು ಕೇಳಿ.

ಶ್ರೀ ಎ.ಬಿ. ಜಕನೂರ್:- ಅವರು ಫೈಲ್ ನೋಡಿ ಹೇಳಲಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಸುಪ್ರೀಂ ಕೋರ್ಟ್‌ನ ಜಡ್ಜ್ ಅವರಿಂದ ತನಿಖೆ ಮಾಡಿಸಿ. ಅವರು ತನಿಖೆ ಮಾಡಿ ವರದಿ ಕೊಡಲಿ. ಆಮೇಲೆ ಚರ್ಚೆ ಮಾಡೋಣ.

ಶ್ರೀ ಟಿ.ಎನ್. ನರಸಿಂಹಮೂರ್ತಿ:- ಮಾನ್ಯ ಅಧ್ಯಕ್ಷರೆ, ಅವೊತ್ತು ಶ್ರೀಮಾನ್ ನಾಣಯ್ಯನವರು 29ನೇ ತಾರೀಖು ಹಠಾತ್ ಈ ವಿಚಾರವನ್ನು ಪ್ರಸ್ತಾಪ ಮಾಡಿದರು. ನಾನು ಆಗ ಹೇಳಿದೆ, ನಾನು ಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಮಾಡುವಾಗ, ದೇವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದ್ದೇನೆ. ನಾನು ಏನಾದರು ತಪ್ಪು ಹೆಜ್ಜೆ ಇಟ್ಟಿದ್ದರೆ, ಅಪರಾಧ ಮಾಡಿದ್ದರೆ ಅದನ್ನು ತಿದ್ದಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ನಾನು ಪ್ರಾರಂಭದಲ್ಲಿ ಹೇಳಿದೆ. ಮಾಜಿ ಮುಖ್ಯಮಂತ್ರಿಗಳು ಮತ್ತು ಪ್ಲಾನಿಂಗ್ ಕಮಿಷನ್‌ನ ಡೆಪ್ಯುಟಿ ಛೇರ್ಮನ್‌ನವರು ರಾಜಿನಾಮೆ ಕೊಟ್ಟಿದ್ದು ಅವೊತ್ತು ಪತ್ರಿಕೆಗಳಲ್ಲಿ ಬಂದಿತ್ತು. ಬಹುಶಃ ಅವೊಂದು ಹಿನ್ನೆಲೆಯಲ್ಲಿ ಇಂತಹ ಒಂದು ಪ್ರಕರಣ ಕರ್ನಾಟಕದ ಇತಿಹಾಸದಲ್ಲಿ ನಡೆದಿಲ್ಲ ಭಾರೀ ಪ್ರಮಾಣದ ಕೋಟ್ಯಾಂತರ ರೂಪಾಯಿ ಹಸ್ತಾಂತರವಾಗಿದೆ. ಇದು ಬಹುಶಃ ಕರ್ನಾಟಕ ರಾಜ್ಯದಲ್ಲಿ ಇದುವರೆಗೆ ನಗರಾಭಿವೃದ್ಧಿ ಇಲಾಖೆಯಲ್ಲಿ ನಡೆದಿಲ್ಲವೆಂದು ಹೇಳಿದ ಮಾತು ಪತ್ರಿಕೆಗಳಲ್ಲಿ ದೊಡ್ಡದಾಗಿ ಬಂತು. ನಾನು ಅವೊತ್ತು ಹೇಳಿದ ಮಾತನ್ನು ಮಾನ್ಯ ಏಕಾಂತಯ್ಯನವರು ಪ್ರಸ್ತಾಪ ಮಾಡಿದ್ದಾರೆ. ನೀವು ಅವೊತ್ತು ಸಭೆಯಲ್ಲಿ ಹೇಳಿದ್ದೀರಿ, ಈ ರೀತಿಯಾಗಿ ತಪ್ಪು ಹೆಜ್ಜೆ ಇಟ್ಟಿದ್ದೇ ಆದರೆ. ರಾಜಿನಾಮೆ ಕೊಡುತ್ತೇನೆ ಎನ್ನುವ ಮಾತನ್ನು ಹೇಳಿದ್ದೀರಿ ಎಂದು ಹೇಳಿದರು. ಆ ಮಾತನ್ನು ಇಂದೂ ಸಹ ಹೇಳುತ್ತೇನೆ. ನನ್ನನ್ನು ಮಂತ್ರಿ ಮಾಡಿದವರು ಮುಖ್ಯಮಂತ್ರಿಗಳು. ನಮ್ಮ ಮುಖ್ಯಮಂತ್ರಿಗಳು ಶಾಸಕಾಂಗದ ಕಾಂಗ್ರೆಸ್ ಪಕ್ಷ ಇಲ್ಲಿದೆ. ನಮ್ಮ ಪಕ್ಷ ಇಲ್ಲಿದೆ. ಅಲ್ಲಿ ಬಿಚ್ಚು ಮನಸ್ಸಿನಿಂದ ಚರ್ಚೆಯಾಗುತ್ತದೆ. ನಾನು ತಪ್ಪು ಮಾಡಿದ್ದರೆ, ಅದು ರುಜುವಾತಾಗಿದ್ದರೆ ಯಾರಾದರೂ ಶಾಸಕರು ಶಾಸಕಾಂಗದ ಸಭೆಯಲ್ಲಿ ಬೆರಳು ತೋರಿಸಿದರೆ ನಾನು ರಾಜಿನಾಮೆಯನ್ನು ಮುಖ್ಯ ಮಂತ್ರಿಗಳಿಗೆ ಕೊಡುತ್ತಿದ್ದೆ. ಏತಕ್ಕೆ ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಹೊರಟರು? ಹೆಗಡೆಯವರ ಮೇಲೆ ಕುಲದೀಪಸಿಂಗ್ ಆಯೋಗದ ರಿಪೋರ್ಟ್ ಬಂದಿದೆ. ಅವರು ರಾಜಿನಾಮೆಯನ್ನು ಕೊಟ್ಟ ಪ್ರಕರಣಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಇದರಲ್ಲಿ ಏನೋ ಸಿಗುತ್ತದೆಂದು ಪ್ರಸ್ತಾಪ ಮಾಡಿದ್ದಾರೆ. ಕನ್ನಡದಲ್ಲಿ ಒಂದು ಗಾದೆಯಿದೆ. ಮಂಡ್ಯ ಮತ್ತು ಮೈಸೂರು ಕಡೆಗಳಲ್ಲಿ ಇದನ್ನು ಹೇಳುತ್ತಾರೆ. ಏನೆಂದರೆ "ಬೆಟ್ಟ ಅಗೆದು ಇಲಿ ಹಿಡಿದರು" ಎಂದು, ಆದರೆ ಮಾನ್ಯ ಚಂದ್ರೇಗೌಡರಿಗೆ ಈ ಪ್ರಕರಣದಲ್ಲಿ ಇಲಿಯೂ ಸಹ ಸಿಗಲಿಲ್ಲವೆಂದು ನಾನು ವಿಷಾದದಿಂದ ಹೇಳಬೇಕಾಗಿದೆ. ನಾನು ಅದಕ್ಕಾಗಿ ಪ್ರಾರಂಭದಲ್ಲಿ ಹೇಳಿದೆ. ಅವರು ವಿಧಾನಸಭೆಯ ಅಧ್ಯಕ್ಷರಾಗಿದ್ದವರು, ಮೇಲ್ಮನೆಯಲ್ಲಿ ವಿರೋಧಪಕ್ಷದ ನಾಯಕರಾಗಿದ್ದವರು, ದೇವರಾಜ್‌ಅರಸ್‌ರವರ ಮಂತ್ರಿಮಂಡಲದಲ್ಲಿ ಮಂತ್ರಿಯಾಗಿದ್ದವರು, ಇಲ್ಲಿ ಈಗ ವಿರೋಧಪಕ್ಷದ ನಾಯಕರಾಗಿದ್ದಾರೆ. ಲೋಕಸಭೆಯ ಸದಸ್ಯರಾಗಿದ್ದವರು, ರಾಜ್ಯಸಭೆಯ ಸದಸ್ಯರಾಗಿದ್ದವರು ವಿಷಯವನ್ನು ತಿಳಿದುಕೊಂಡು ಮಾತನಾಡಿದ್ದರೆ ಬಹುಶಃ ಈ ವಿಚಾರ ಪ್ರಸ್ತಾಪ ಮಾಡುವುದಕ್ಕೆ ಹೋಗುತ್ತಿರಲಿಲ್ಲವೆಂದು ನನಗನ್ನಿಸುತ್ತದೆ. ಬಹುಶಃ ವಾತಾವರಣವನ್ನು ನಾನು ಆಗಲೇ ಹೇಳಿದ್ದೇನೆ. ಆದರೆ ದುರ್ದೈವ ಕುಲದೀಪಸಿಂಗ್ ಆಯೋಗದ ವರದಿ ಬಂದಮೇಲೆ, ಅದಕ್ಕೆ ಸರಿಸಮಾನವಾದ ಪ್ರಕರಣ ಇದೆಂದು ಹೇಳುವುದಕ್ಕೆ ಹೊರಟು ಬಹಳ ನಿರಾಶರಾಗಿದ್ದಾರೆ. ನೀವು ನೆಲ ಕಚ್ಚಿದ್ದೀರೆಂದು ನಾನು ಹೇಳುತ್ತೇನೆ. ಇದರಲ್ಲಿ ಏನೂ ಇಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಚಂದ್ರೇಗೌಡರು ಇರಬಹುದು, ಉಪನಾಯಕರಾದ ಶ್ರೀಮಾನ್ ಸಿಂಧ್ಯಾರವರು, ಮತ್ತು ಶ್ರೀಮಾನ್ ಏಕಾಂತಯ್ಯನವರ ವಾದವನ್ನು ನೆನಸಿಕೊಂಡರೆ ಅವರು ಸದನವನ್ನು ತಪ್ಪು ದಾರಿಗೆ ಎಳೆಯುವುದಕ್ಕೆ ಪ್ರಯತ್ನ ಮಾಡಿದ್ದಾರೆ. ನಿಜವಾದ ಚಿತ್ರವನ್ನು ತಿಳಿದುಕೊಳ್ಳುವುದಕ್ಕೆ ಅವರು ಪ್ರಯತ್ನ ಮಾಡಿಲ್ಲವೆಂದು ಈ ಮಾತನ್ನು ನಾನು ಬಹಳ ದುಃಖದಿಂದ

ಹೇಳಬೇಕಾಗಿದೆ. ಈ ರೀತಿಯಾಗಿ ರಾಜಕಾರಣದಲ್ಲಿರುವವರು ಪ್ರೊ:ಮಧುದಂಡವತೆಯವರು ಇಂತಹ ವಿಷಯಗಳಲ್ಲಿ ಕೈಹಾಕಬಾರದೆಂದು ಏನೂ ಇಲ್ಲ. ಹೆಜ್ಜೆ ಹೆಜ್ಜೆಗೂ ಕೂಡ 1982ರಿಂದ ಭೂಸ್ವಾಧೀನ ಕಾಯಿದೆ ರೀತ್ಯ ಆ ಭೂಮಿಯನ್ನು ಅಕ್ವೈರ್ ಮಾಡಿದಾಗಿನಿಂದ ಹಿಡಿದು ಆ ಭೂಮಾಲೀಕರು ಎಷ್ಟು ಪ್ರಬಲರಾಗಿದ್ದಾರೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತಿದ್ದೇನೆ. ಶ್ರೇಷ್ಠ ನ್ಯಾಯಾಲಯದಿಂದ ಸ್ಟೇ ಬಂದಿದೆ. ನಗರಾಭಿವೃದ್ಧಿ ಸಚಿವರು ಯಾರ‍್ಯಾರು ಇಲ್ಲಿಯವರೆಗೆ ಬಂದಿದ್ದಾರೆ ಅವರೆಲ್ಲರು ತಡೆಹಿಡಿದಿದ್ದಾರೆ. ಮಾನ್ಯ ಬೊಮ್ಮಾಯಿಯವರು ರೆವಿನ್ಯೂ ಮಂತ್ರಿಗಳಾಗಿದ್ದಾಗ ಸ್ಟೇ ಮಾಡಿ ಮತ್ತೆ ವೆಕೇಟ್ ಮಾಡಿದ್ದಾರೆ. ಮಾನ್ಯ ಚಂದ್ರಶೇಖರ್‌ರವರು ನಗರಾಭಿವೃದ್ಧಿ ಸಚಿವರಾಗಿದ್ದಾಗ ದಿನಾಂಕ 24-6-1988ರಲ್ಲಿ ಡೀನೋಟಿಫೈ ಮಾಡಿದ್ದೇನೆಂದು ಹೇಳಿ ಅಲಾಟ್ ಆಗಿರತಕ್ಕ ಸೈಟುಗಳನ್ನು ಜಾರಿಗೆ ಕೊಡುವುದಕ್ಕೆ ಆಗುವುದಿಲ್ಲ ಎಂಬ ಬಗ್ಗೆ ಒಂದು ಪ್ರಾಮಾಣಿಕ ಮಾತನ್ನು ಹೇಳುತ್ತಿದ್ದೇನೆ. ಏನೆಂದರೆ, ಬಡವರಿಗೆ ಸೈಟು ಕೊಡತಕ್ಕ ಕಾರ್ಯಕ್ರಮವಿರಬಹುದು, ನಾಗರಿಕರಿಗೆ ಸೈಟು ಕೊಡತಕ್ಕ ಕಾರ್ಯಕ್ರಮ ಇರಬಹುದು; ಒಂದು ಸಾರಿ ಅಕ್ವೈರ್ ಮಾಡಿದ ಮೇಲೆ ಅದನ್ನು ಕೈಬಿಡತಕ್ಕದ್ದು ಸರಿಯಲ್ಲ ಅನ್ನುವ ವಾದವೇ ನನ್ನ ವೈಯುಕ್ತಿಕ ಅಭಿಪ್ರಾಯ. When once a notification is issued there ends the matter. There cannot be reconsideration for denotification.

ಈ ತತ್ವದಲ್ಲಿ ನನಗೆ ವೈಯುಕ್ತಿಕವಾಗಿ ನಂಬಿಕೆಯಿದೆ. ನಮ್ಮ ಸರ್ಕಾರಕ್ಕೂ ಕೂಡ ನಂಬಿಕೆ ಇದೆ. ಆದರೆ ಈ ದುರ್ದೈವ ಒಂದು ವಿಚಾರದಲ್ಲಿ, ಫ್ರೀ ಆಗಿ 11 ಎಕರೆ ಜಮೀನು ಸಿಗುತ್ತಿದೆಯೆಂದು ಹೇಳಿ, ಅದರ ಜೊತೆಗೆ ಪ್ರಪೋಸ್ ಮಾಡಿರತಕ್ಕ ಜಮೀನಿನಲ್ಲಿ ಏನೇನು ಡೆವಲಪ್‌ಮೆಂಟ್ಸ್ ಮಾಹಲಾಗಿದೆ ಅದರ ಚಾರ್ಜಸ್ ನಾವು ಕೊಡುತ್ತೇವೆಂದು ಹೇಳಿ ಅಡ್ವಕೇಟ್ ಜನರಲ್ ಅವರ ಅಭಿಪ್ರಾಯ ಬಂದು, ಕಾನೂನು ಸಚಿವರ ಅಭಿಪ್ರಾಯ ಬಂದ ಮೇಲೆ ಕಡತ ವಿಲೇವಾರಿ ಮಾಡಬೇಕಾಗಿ ಬಂತು. ಅಲ್ಲಿನ ಜಿಲ್ಲಾಧಿಕಾರಿಗಳು ಯಾರು ಪ್ರಾಧಿಕಾರದ ಅಧ್ಯಕ್ಷರು ಆಗುತ್ತಾರೆ, ಅವರೂ ಕೂಡ ಒಂದಲ್ಲ ಅನೇಕ ಪತ್ರಗಳನ್ನು ಸರ್ಕಾರಕ್ಕೆ ಬರೆದಿದ್ದಾರೆ. ಹಿಂದಿನ ನೋಟೀಫಿಕೇಶನ್ ಅನ್ನು ಡೀನೋಟೀಫಿಕೇಶನ್ ಮಾಡಿ ಎಂದು ಏನು ತೀರ್ಮಾನ ಮಾಡಿದ್ದಾರೆ, ಅದು ಕಾನೂನಿನ ಚೌಕಟ್ಟಿನೊಳಗಡೆ ಇದೆ. ನಾನು ಕೂಡ ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ. ಸಾರಾಯಿ ಬಾಟ್ಲಿಂಗ್ ಪ್ರಕರಣ ಇರಬಹುದು. ಎಕ್ಸೈಸ್ ಆಕ್ಷನ್ ಕೇಸ್ ಇರಬಹುದು, ಟೆಲಿಫೋನ್ ಟ್ಯಾಪಿಂಗ್ ಇರಬಹುದು, ಇತ್ತೀಚಿನ ಭೂಹಗರಣ ಕೇಸ್ ಇರಬಹುದು. ಇವುಗಳ ಬಗ್ಗೆ ಸ್ಪಷ್ಟವಾದಂಥ ತೀರ್ಪುಗಳು ಬಂದಿವೆ. ಎರ‍್ಯಾಕ್ ಬಾಟಲಿಂಗ್ ಕೇಸ್‌ನಲ್ಲಿ ಹೈಕೋರ್ಟ್ ಜಡ್ಜ್‌ಮೆಂಟ್ ಬಂದಿದೆ, ಸುಪ್ರೀಂಕೋರ್ಟ್ ಜಡ್ಜಮೆಂಟ್ ಬಂದಿದೆ. ಎಕ್ಸೈಸ್ ಆಕ್ಷನ್ ಕೇಸ್‌ನಲ್ಲಿ ಕೂಡ ಹೈಕೋರ್ಟಿನ ಜಡ್ಜಮೆಂಟ್ ಬಂದಿದೆ ಮತ್ತು ಸುಪ್ರೀಂ ಕೋರ್ಟ್‌ನವರು ಅದನ್ನು ರ‍್ಯಾಟಿಫಿಕೇಶನ್ ಮಾಡಿದ್ದಾರೆ. ಟೆಲಿಫೋನ್‌ದ್ದು ಪಾರ್ಲಿಮೆಂಟರಿ ಕಮಿಟಿ ಆಗಿದೆ. ಎನ್.ಆರ್.ಐ. ಹಗರಣದಲ್ಲಿ ಸುಪ್ರೀಂ ಕೋರ್ಟ್ ನ್ಯಾಯಾಧೀಶರ ಆಯೋಗ ವರದಿಯನ್ನು ಕೊಟ್ಟಿದೆ. ನಾನು ಕೂಡ ವಿರೋಧ ಪಕ್ಷದ ನಾಯಕನಾಗಿ ಶ್ರೀಮಾನ್ ಚಂದ್ರೇಗೌಡರ ಸ್ಥಾನದಲ್ಲಿ ಇದ್ದಂಥ ಸಂದರ್ಭದಲ್ಲಿ, ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ ಮತ್ತು ಶ್ರೀ ಎಸ್.ಆರ್.ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿದ್ದಾಗ ಎಂ.ಡಿ. ಸೀಟ್ ಸ್ಕ್ಯಾಂಡಲ್‌ನಲ್ಲಿ ಕಾನೂನು ಬಾಹಿರವಾಗಿ ಇವೆಲ್ಲಾ ಮಾಡಿದ್ದಾರೆ ಎಂದು ಗೊತ್ತಾದಾಗ ನಾನು ರಾಜೀನಾಮೆಯನ್ನು ಕೇಳಿದ್ದೆ. ಅವರು ಕೊಡುವುದಿಲ್ಲ ಎಂದು ಹೇಳಿದಾಗ ನಾನು ಸುಮ್ಮನಾದೆ. ಮಾನ್ಯ ಮುಖ್ಯಮಂತ್ರಿಗಳು ಸಭೆಗೆ ಬಂದಿದ್ದಾರೆ. ನಾನು ಎಲ್ಲಿಯಾದರೂ ಒಂದು ಕಡೆ ಸಂಪ್ರದಾಯ ಉಲ್ಲಂಘನೆ ಮಾಡಿರುವುದಾಗಲೀ, ಯಾವುದೇ ತೀರ್ಮಾನವನ್ನು ಉಲ್ಲಂಘನೆ ಮಾಡಿರುವುದಾಗಲೀ, ಕಾನೂನು ಬಾಹಿರವಾಗಿ ಉಲ್ಲಂಘನೆ ಮಾಡಿರುವುದನ್ನು ನೀವು ಒಂದನ್ನಾದರೂ ಸಾಬೀತುಮಾಡಿ ತೋರಿಸಿಕೊಟ್ಟರೆ ನಾನು ನಿಮಗೆ ತಲೆಬಾಗುತ್ತೇನೆ. ನಾನು ರಾಜೀನಾಮೆ ಕೊಟ್ಟು ಮನೆಗೆ ಹೋಗುವುದಕ್ಕೆ ತಯಾರಿದ್ದೇನೆ. ಆದರೆ ಇಂತಹ ಆಪಾದನೆಗಳಿಂದ ತೇಜೋವಧೆ ಮಾಡತಕ್ಕಂಥ ಪ್ರಯತ್ನ ನಾವು ಯಾರು ಮಾಡಬಾರದು. ನಾನು ಬಹಳ ಕಷ್ಟಪಟ್ಟು ವ್ಯಕ್ತಿತ್ವನ್ನು ಸಂಪಾದನೆ ಮಾಡುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಏಕಾ

ಏಕಿ ಯಾವುದೇ ವಿಷಯವನ್ನು ತಿಳಿದುಕೊಳ್ಳದೆ, ನೀವು ವ್ಯಕ್ತಿತ್ವದ ತೇಜೋವಧೆ ಮಾಡುವುದಾದರೆ, ನಾವು ಪ್ರಾಣ ಬಿಡುವುದೇ ಲೇಸೆಂದು ನನಗನ್ನಿಸುತ್ತದೆ. ಆದರೆ ರಾಜಕೀಯ ದುರುದ್ದೇಶದಿಂದ, ರಾಜಕೀಯ ದುರುದ್ದೇಶ ಇಟ್ಟುಕೊಂಡು ನೀವು ವ್ಯಕ್ತಿಯ ತೇಜೋವಧೆ ಮಾಡುವುದು ಸರಿಯಲ್ಲ. ನಾನು ಏಳು ವರ್ಷಗಳ ಕಾಲ ವಿರೋಧ ಪಕ್ಷದ ನಾಯಕನಾಗಿದ್ದಾಗ ಶ್ರೀಮಾನ್ ಸಿಂಧ್ಯಾರವರು ಮಂತ್ರಿಯಾಗಿದ್ದರು. ಎಲ್ಲರನ್ನೂ ಕೂಡ ನಾನು ನೋಡಿದ್ದೇನೆ. ಎಂದೂ ನಾನು ಈ ಮಟ್ಟಕ್ಕೆ ಹೋಗಿಲ್ಲ. ಆದರೆ ದುರಾದೃಷ್ಟವಶಾತ್ ಇವತ್ತು, ಈ ಎನ್.ಆರ್.ಐ. ಬಗ್ಗೆ ಕುಲದೀಪ್‌ಸಿಂಗ್ ಆಯೋಗದ ವರದಿ ಮತ್ತು ಇನ್ನು ಕೆಲವು ವರದಿಗಳು ಬಂದವು. ಆದರೆ ಈ ದುರ್ದೈವದ ಈ ಒಂದು ವಾತಾವರಣದಲ್ಲಿ ನನ್ನನ್ನು ಪೇಚಿಗೆ ಸಿಕ್ಕಿಸಿರುವುದಕ್ಕೆ ಏನು ಹೇಳಬೇಕೋ ಗೊತ್ತಿಲ್ಲ. ಆದ್ದರಿಂದ, ಇದರಲ್ಲಿ ಏನೂ ನಡೆದಿಲ್ಲ. ಇಲ್ಲಿ ನಮ್ಮ ಮುಖ್ಯಮಂತ್ರಿಗಳ ಕೈವಾಡ ಇಲ್ಲ. ನಾನು ಒಂದು ಮಾತನ್ನು ಹೇಳುತ್ತೇನೆ. ಏಕೆಂದರೆ ಈ ಸದನ it is the supreme house.

ಅಡ್ವೋಕೇಟ್ ಜನರಲ್ ಅವರ ಅಭಿಪ್ರಾಯ ಪಡೆದು ಇದನ್ನು ಕ್ಲಿಯರ್ ಮಾಡಿದೆ. ಲಾ ಮಿನಿಸ್ಟರ್ ಅವರ ಅಭಿಪ್ರಾಯ ಪಡೆದು ಇದನ್ನು ಕ್ಲಿಯರ್ ಮಾಡಿದೆ. ಮಾನ್ಯ ಅಧ್ಯಕ್ಷರೇ, ಇದು ಶ್ರೇಷ್ಠ ನ್ಯಾಯಾಲಯ. ಪೀಪಲ್ಸ್ ಕೋರ್ಟ್ ಇದು. Lower House, upper House and Parliament, these are all supreme so far as democratic set up is concerned.

ಅಲ್ಲಿ ಶ್ರೀ ನಾಣಯ್ಯನವರು ಮತ್ತು ಕೆಲವರು ಮಾಡಿದಂಥ ಆಪಾದನೆಯ ಹಿನ್ನೆಲೆಯಲ್ಲಿ ಕೋಟ್ಯಾಂತರ ರೂಪಾಯಿಗಳ ಹಸ್ತಕ್ಷೇಪ ನಡೆದಿವೆ, ಭಾರಿ ಅವ್ಯವಹಾರ ನಡೆದಿದೆ ಎಂದಾಗ, ಶಾಸನಸಭೆಯಲ್ಲಿ ಇಂತಹ ಒಂದು ಆಪಾದನೆಗಳು ಬಂದಂಥ ಕಾಲದಲ್ಲಿ ಬಹುಶಃ ನಾನು 25.5.90ರಲ್ಲಿ ಏನು ತೀರ್ಮಾನ ಕೈಗೊಂಡಿದ್ದೆ, ಡಿ ನೋಟಿಫೈ ಮಾಡಬೇಕು ಎಂದು ಹೇಳಿ ಅದನ್ನು ಎರಡನೇ ದಿವಸ ಮೇಲ್ಮನೆಯಲ್ಲಿ ನಾನು ಸ್ವಪ್ರೇರಣೆಯಿಂದ ಈ ಶಾಸನಸಭೆಯಲ್ಲಿ ಬಂದಂಥ ಒಂದು ಆರೋಪಣೆಯ ಹಿನ್ನಲೆಯಲ್ಲಿ ನಾನು ಆ ಸಭೆಗೆ ಗೌರವ ಕೊಟ್ಟು, ಅದನ್ನು ಮತ್ತೆ ಡಿ ನೋಟಿಫೈ ಮಾಡಿದ್ದನ್ನು ರದ್ದು ಮಾಡತಕ್ಕಂಥ ಅನಿವಾರ್ಯವಾದಕಾರ್ಯಕ್ರಮ ಅವಾಗ ಬಂತು. ಆದ್ದರಿಂದ ಇವತ್ತು ನಮ್ಮ ಸರ್ಕಾರ ಏನಿದೆ, ಈ ಸರ್ಕಾರ ಬಂದಂದಿನಿಂದ ಈಚೆಗೆ ಯಾವುದೇ ತರಹದ ಭೂಹಗರಣದಲ್ಲಾಗಲೀ, ಅಥವಾ ಡಿ ನೋಟಿಫೈ ಮಾಡುವುದರಲ್ಲಿ ಆಗಲಿ ನಾವು ಬಹಳ ಎಚ್ಚರಿಕೆಯಿಂದ ಹೆಜ್ಜೆ ಇಡುತ್ತಿದ್ದೇವೆ ಮತ್ತು ಯಾವತ್ತೂ ತಪ್ಪು ಹೆಜ್ಜೆ ಇಡದ ರೀತಿಯಲ್ಲಿ ದೇವರು ನಮಗೆ ಸದ್ಬುದ್ಧಿ ಕೊಡಲಿ ಎಂದು ಪ್ರಾರ್ಥನೆ ಮಾಡುತ್ತಿದ್ದೇವೆ. ದಯಮಾಡಿ ಇನ್ನುಮೇಲಾದರೂ ಟೀಕೆಟಿಪ್ಪಣಿ ಮಾಡುವಾಗ ಅರ್ಥಮಾಡಿಕೊಂಡು, ವಿಷಯಗಳನ್ನು ಸಂಗ್ರಹಮಾಡಿ ನೇರವಾಗಿ ಮಾತನಾಡಿ. ಈ ಸಮಯದಲ್ಲಿ ನಾನು ತಮ್ಮನ್ನು ಕೇಳುತ್ತೇನೆ. ನಾನೇನಾದರೂ ಪ್ರಾಧಿಕಾರದ ಕಾಯದೆಗೆ ವಿರುದ್ಧವಾಗಿ. ಕೆಲಸ ಮಾಡಿದ್ದೇನೆಯೋ ಅಥವಾ ಅಡ್ವೊಕೇಟ್ ಜನರಲ್ ಅವರ ಅಭಿಪ್ರಾಯಕ್ಕೆ ವಿರುದ್ಧವಾಗಿ ಹೋಗಿದ್ದೇನೆಯೆ? ಇದನ್ನು ಕೂಡ ತಾವು ಯೋಚನೆ ಮಾಡಬೇಕಾಗುತ್ತದೆ. ಇವತ್ತು ಪ್ರಾಧಿಕಾರದ ನಿಯಮಗಳ ಪ್ರಕಾರ ಡಿ-ನೋಟಿಫೈ ಮಾಡುವುದಕ್ಕೆ ಅಧಿಕಾರ ಇದೆ. 1987ನೇ ಇಸವಿಯ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ 87ರ ಪ್ರಕಾರ, ಇವತ್ತು 19.7 "The authorities shall not denotify or reconvey and land included in the Scheme without specific order of the Government".

5.25 ಪಿ.ಎಂ.

ಅಂದಮೇಲೆ ನಾವು ಈ ತೀರ್ಮಾನ ಕೈಗೊಳ್ಳಲು ಕೂಡ ಕಾನೂನಿನ ಚೌಕಟ್ಟಿನಲ್ಲಿ ನನಗೆ ಅಧಿಕಾರ ಇದೆ. ಮತ್ತು ಇಂತಹ ಸಂದರ್ಭದಲ್ಲಿ ಸಂದಿಗ್ಧ ಪರಿಸ್ಥಿತಿ ಬಂದಂಥ ಕಾಲದಲ್ಲಿ ಅಡ್ವೊಕೇಟ್ ಜನರಲ್ ಅವರ ಅಭಿಪ್ರಾಯವನ್ನು ಪಡೆದಿದ್ದೇನೆ. He is a most important person in a system like this where we have to refer for him in certain matters. ಅವರ ಒಪೀನಿಯನ್ ತೆಗೆದುಕೊಳ್ಳಬೇಕು, ಒಪ್ಪಲೇಬೇಕು ಎಂದು ಇಲ್ಲ ಎನ್ನುವುದನ್ನು ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದರು. ಬಳ್ಳಾರಿಯಲ್ಲಿ ನಾಗರೀಕರಿಗೆ ನಿವೇಶನಗಳನ್ನು ಕೊಡಬೇಕೆಂದು 17 ಎಕರೆ 5 ಗುಂಟೆ 1982ರಲ್ಲಿ ಅಕ್ವೈರ್ ಮಾಡಿದೆವು. ಆಗ ಕಾಂಗ್ರೆಸ್ ಸರ್ಕಾರ ಇತ್ತು. ಅವತ್ತಿನ ಕಾಂಗ್ರೆಸ್ ಸರ್ಕಾರ ಈ

ಬಡವರಿಗೆ, ನಾಗರೀಕರಿಗೆ ಸೈಟು ಕೊಡಬೇಕೆಂದು ತೀರ್ಮಾನ ಮಾಡಿತು. ಇವತ್ತೂ ಕೂಡ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇದೆ, ಈ ನಿವೇಶನಗಳನ್ನು ಹಂಚಬೇಕೆಂದು ಪ್ರಗತಿಪರವಾದ ಕಾರ್ಯ ಮಾಡಿದೆ. ನಾನು ಮೊನ್ನೆ ತೆಗೆದುಕೊಂಡ ನಿರ್ಧಾರ ಏನಿದೆ, ಪ್ರಗತಿಪರವಾದ ಒಂದು ನಿರ್ಧಾರ. ಪ್ರಗತಿಪರವಾದ ಹೆಜ್ಜೆಯನ್ನು ಇಟ್ಟಿದ್ದೇನೆ. ನಾಗರೀಕರಿಗೆ ಸೈಟು ಕೊಡುವ ಕೆಲಸವನ್ನು ಮಾಡಿದ್ದೇನೆ. ಇದನ್ನು ಮಾನ್ಯ ಯಡಿಯೂರಪ್ಪನವರು ಪ್ರಶ್ನೆ ಮಾಡಿದ್ದರೆ ಒಪ್ಪುತ್ತಿದ್ದೆ, ವಾಟಾಳ್ ನಾಗರಾಜ್‌ರವರು ಪ್ರಶ್ನೆ ಮಾಡಿದರೆ ಒಪ್ಪುತ್ತಿದ್ದೆ ಅಥವಾ ಬೇರೆ ಜನತಾದಳದ ಮುಖಂಡರು ಮಾತನಾಡುವುದು ಬಿಟ್ಟು ರೈತ ಸಂಘದವರು ಪ್ರಸ್ತಾಪ ಮಾಡಿದ್ದರೆ ಒಪ್ಪುತ್ತಿದ್ದೆ. ಆದರೆ ಇವರು ಇದನ್ನು ಭೂ ಹಗರಣ ಎಂದು ಕರೆಯತಕ್ಕಂತಾದ್ದು, ಭ್ರಷ್ಟಾಚಾರ ನಡೆದಿದೆ ಎನ್ನುವುದು, ಇದೆಲ್ಲವನ್ನೂ ದೇವರೇ ನೀನೇ ಮೇಲಿದ್ದೀಯೇ. ಎಲ್ಲವನ್ನೂ ನೀನೇ ನೋಡಿಕೋ...

ಶ್ರೀ ಎಲ್.ಆರ್. ಶಿವರಾಮೇಗೌಡ:- ಈ ಸರ್ಕಾರದ ಮೇಲೆ ಒಂದು ಭ್ರಷ್ಟಾಚಾರದ ಆಪಾದನೆಯೂ ಇಲ್ಲ ಎನ್ನುವುದನ್ನು ಹೇಳಿ.

ಶ್ರೀ ಡಿ. ಬಿ. ಚಂದ್ರೇಗೌಡ:- ಅವರನ್ನು ಹೊಸದಾಗಿ ಅಪಾಯಿಂಟ್ ಮಾಡಿಕೊಂಡಿದ್ದೀರಾ ಸರ್ಟಿಫಿಕೇಟ್ ಕೊಡುವುದಕ್ಕೆ, ಅವರು ಯಾರು ಏನು ಎಂಬುದನ್ನು ಸ್ವಲ್ಪ ನಮಗೆ ಹೇಳಿ.

ಶ್ರೀ ಡಿ.ಎನ್. ನರಸಿಂಹಮೂರ್ತಿ:- ಬಳ್ಳಾರಿಯಲ್ಲಿ ನಾಗರೀಕರಿಗೆ ನಿವೇಶನಗಳನ್ನು ಕೊಡತಕ್ಕ ಒಂದು ಕಾರ್ಯಕ್ರಮ ಏನಿತ್ತು, ಈ ಕಾರ್ಯಕ್ರಮದಲ್ಲಿ 8 ವರ್ಷಗಳ ಕಾಲ, ಯಾವ ಶಕ್ತಿ ಇದರ ಹಿಂದೆ ಇತ್ತು ಎನ್ನುವುದನ್ನು ಹೇಳಿದ್ದೇನೆ. ಎಂತಹ ಉನ್ನತ ಮಟ್ಟದ ಪ್ರಭಾವಿಗಳು ಇದ್ದರು ಎಂಬುದು ತಮಗೂ ಗೊತ್ತಿದೆ. ಭೂಮಾಲೀಕರ ಕಡೆ ಇದ್ದವರು ನೀವೇ ಹೊರತು, ನಾವಲ್ಲ, ನಾವು ನಾಗರೀಕರಿಗೆ ಸೈಟು ಕೊಡುವುದಕ್ಕೆ ಹೋಗಿದ್ದೇವೆ. ವಿರೋಧಪಕ್ಷದ ನಾಯಕರದಾದ ಶ್ರೀಮಾನ್ ಚಂದ್ರೇಗೌಡರು, ಶ್ರೀಮಾನ್ ಸಿಂಧ್ಯರವರೂ, ಮತ್ತು ಏಕಾಂತಯ್ಯನವರು ನ್ಯಾಯ, ಸತ್ಯ, ಧರ್ಮ ಯಾವುದೇ ಚೌಕಟ್ಟಿನಲ್ಲಿ ಬರದೇ ಇರತಕ್ಕ ವಾದವನ್ನು ಇಟ್ಟಿದ್ದಾರೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅವರು ಎಮೋಷನಲ್ ಆಗುತ್ತಾರೆ, ನಾವೂ ಎಮೋಷನಲ್ ಆಗಿ ಏನಾದರೂ ಹೇಳಿದರೆ ಹೇಗೆ?

ಶ್ರೀ ಟಿ.ಎನ್. ನರಸಿಂಹಮೂರ್ತಿ:- ನಾನು ಏಕೆ ಆ ಮಾತನ್ನು ಹೇಳಿದೆ ಎಂದರೆ, ಮಾನ್ಯ ಸಿಂಧ್ಯರವರು ದಯವಿಟ್ಟು ಬೇಜಾರು ಮಾಡಿಕೊಳ್ಳಬಾರದು, ಸಾಮಾನ್ಯವಾಗಿ ಪಾರ್ಲಿಮೆಂಟರಿ ಸಿಸ್ಟಂನಲ್ಲಿ ಹರಿತವಾದ ಭಾಷೆಯಲ್ಲಿ ಮಾತನಾಡತಕ್ಕಂತಾದ್ದು ಏನಿದೆ, ಆ ಅರ್ಥದಲ್ಲಿ ನಾನು ಹೇಳಿದ್ದೇನೆಯೇ ಹೊರತು, ಬೇರೆ ರೀತಿಯಲ್ಲಿ ಅಲ್ಲ. ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ನಿಮ್ಮ ಭಾಷೆ ಏನಿದೆ ಅದು ಹಾಗೆ ಇದೆ. ಆದ್ದರಿಂದ ಇದಕ್ಕೆ ಅಪಾರ್ಥ ಕಲ್ಪಿಸುವುದು, ಕಟ್ಟುಕತೆ ಕಟ್ಟುವುದು, ಕೃತಕವಾದ ವಾದ ಮಾಡುವುದು, ನಿಜವಾಗಿಯೂ ಈ ಒಂದು ವ್ಯವಸ್ಥೆಯಲ್ಲಿ ಸರಿಯಲ್ಲ. ಅದಕ್ಕೆ ನಾನು ಪ್ರಾರಂಭದಲ್ಲೇ ಹೇಳಿದೆ, ಇವತ್ತು ಈ ವಿಷಯ ಬರದೇ ಇನ್ನೊಂದು ಸಾರಿ ಬಂದಿದ್ದರೆ, ಇಷ್ಟೊಂದು ಆಕ್ರೋಷವಾಗಿ ಮಾತನಾಡುತ್ತಾ ಇರಲಿಲ್ಲ, ಈ ಆಕ್ರೋಶಕ್ಕೆ ಕಾರಣವನ್ನೂ ಕೂಡ ಕೊಟ್ಟಿದ್ದೇನೆ. ಈ ಸಂದರ್ಭದಲ್ಲಿ ಹೆಚ್ಚು ಮಾತನಾಡುವುದಕ್ಕೆ ಹೋಗದೇ, ಮಾನ್ಯ ಖರ್ಗೆಯವರು ಒಂದು ಮಾತನ್ನು ಹೇಳಿದರು. ತಾವು ಡೀನೋಟಿಫೈ ಮಾಡಿರುವುದನ್ನು ಕ್ಯಾನ್ಸಲ್ ಮಾಡಿ ಎಂದು ಹೇಳಿದ್ದಾರೆ, ಅದನ್ನು ಕ್ಯಾನ್ಸಲ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಬಳ್ಳಾರಿಯ ನಾಗರೀಕರಿಗೆ ನಿವೇಶನ ಕೊಡಬೇಕೆಂದು ಆವತ್ತಿನ ಕಾಂಗ್ರೆಸ್ ಸರ್ಕಾರ ಏನು ನಿರ್ಧಾರಮಾಡಿತ್ತೋ ಆ, ನಿರ್ಧಾರವನ್ನು ನಾನು ಪ್ರತಿಪಾದನೆ ಮಾಡಿದ್ದೇನೆ. ಮತ್ತು ಸರ್ಕಾರ ಆ ದಿಕ್ಕಿನಲ್ಲಿ ಹೋಗುತ್ತದೆ, ಮತ್ತೆ ಇದನ್ನು ಪುನರ್ ಪರಿಶೀಲನೆ ಮಾಡತಕ್ಕ ಪ್ರಶ್ನೆಯೇ ಇಲ್ಲವೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಪುನರ್ ಪರಿಶೀಲನೆ ಪ್ರಶ್ನೆ ಅಲ್ಲ, ಡೀ ನೋಟಿಫೈ ಮಾಡಿದ್ದೀರಿ, ಡಿ-ನೋಟಿಫೈ ಮಾಡಿದಮೇಲೆ ರೀಕನ್ಸ್ ಮಾಡಿ, ಪೊಸಿಷನ್ ಕೊಟ್ಟಿದ್ದೀರಿ, ಅವರು ಪೊಸಿಷನ್‌ನಲ್ಲಿದ್ದಾರೆ. again are you going to notify the area? Is there any provision to take back one more? ತಾವು ಡಿ-ನೋಟಿಫೈ ಮಾಡಿ, ಮರು ಕಂಡೀಷನ್

ಹಾಕಿದ್ದೀರಿ, ಒಂದು ಲಕ್ಷ ನಲವತ್ತೈದು ಸಾವಿರ ಹಣ ಕಟ್ಟಬೇಕು, ಆಲ್ಟರ್‌ನೇಟ್ ಸೈಟ್‌ಗಳನ್ನು 11 ಎಕರೆಯಲ್ಲಿ ಸೈಟ್ ಫಾರ್ಮೇಷನ್ ಮಾಡಿ, ಸೈಟುಗಳನ್ನು ಫ್ರೀಯಾಗಿ, ಬಳ್ಳಾರಿ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಗೆ ಕೊಡಬೇಕು. ಆಮೇಲೆ ರೋಡ್ ಮಾಡಬೇಕು, ಈ ಮೂರು ಕಂಡೀಷನ್‌ಗಳನ್ನು ಅವರು ಫುಲ್‌ಫಿಲ್‌ಮೆಂಟ್ ಮಾಡಿದ ಮೇಲೆ ಡೆಪ್ಯೂಟಿ ಕಮೀಷನರ್, ಈ ಮೂರು ಕಂಡೀಷನ್ ಫುಲ್‌ಫಿಲ್ ಮಾಡಿದ್ದಾರೆ, ಜಮೀನನ್ನು ಅವರ ವಶಕ್ಕೆ ಕೊಡಬೇಕೆಂದು ಪತ್ರ ಬರೆದರು. ಅದರಂತೆ ಅವರು ಕೂಡಲೇ ಪೊಸಿಷನ್ ತೆಗೆದುಕೊಂಡರು. ಪೊಸಿಷನ್ ತೆಗೆದುಕೊಂಡ ಮೇಲೆ, ಇವತ್ತು ಪುನಃ ಓನರ್ ಪೊಸಿಷನ್‌ನಲ್ಲೇ ಆ ಭೂಮಿ ಇದೆ. ಪುನಃ ನೀವು ಯಾವರೀತಿ ಅದನ್ನು ತೆಗೆದುಕೊಳ್ಳುತ್ತೀರಿ? ಅದು ಹೇಗೆ ಬರುತ್ತದೆ? ಪುನಃ ಲ್ಯಾಂಡ್ ಅಕ್ವಿಜಿಷನ್ ಮಾಡಿಕೊಳ್ಳಬೇಕಾಗುತ್ತದೆ. ಪುನಃ ಎ.ಬಿ.ಸಿ.ಡಿ.ಯಿಂದ ಸ್ಟಾರ್ಟ್ ಮಾಡಬೇಕಾಗುತ್ತದೆ. ಇಲ್ಲವೆಂದರೆ ಅವರು ಕೋರ್ಟಿಗೆ ಹೋಗುತ್ತಾರೆ. ಪುನಃ ಯಾವಾಗ ಸೈಟನ್ನು ಹಂಚುತ್ತೀರಿ?

ಶ್ರೀ ಟಿ.ಎನ್. ನರಸಿಂಹಮೂರ್ತಿ:- ಬಹಳ ಗುರುತರವಾದ ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ಭೂಮಿಯನ್ನು ನಾವು ಅವರ ಸ್ವಾಧೀನಕ್ಕೆ ಕೊಟ್ಟಿಲ್ಲ. ನಾವು ರಿಕನ್ವ್ ಮಾಡಿಲ್ಲ. ಅದನ್ನು ಕ್ಯಾನ್ಸಲ್ ಮಾಡಿದ್ದೇವೆ, ಅಷ್ಟೇ. ಅದಕ್ಕೆ ರೆಗ್ಯುಲರ್ ಆಗಿ ಒಂದು ಅಕ್ವಿಜಿಷನ್ ಮಾಡಬೇಕಾಗುತ್ತದೆ. ಆದುದರಿಂದ ಆ ಜಮೀನು ಮಾಲೀಕರ ಕೈಯಲ್ಲಿ ಕೊಟ್ಟಿಲ್ಲ. ಮಾಲೀಕರ ಕೈಯ್ಯಲ್ಲಿ ಆ ಜಮೀನು ಇಲ್ಲ ಎಂಬ ಮಾತನ್ನು ಸ್ಪಷ್ಟಪಡಿಸುತ್ತೇನೆ. ಬಹುಶಃ ಅವರಿಗೆ ಏನಾದರು ಯಾವುದೇ ಆಗ್ರೀವ್ಡ್ ಪಾರ್ಟಿ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಡಿನೋಟಿಫೈ ಮಾಡಿದಮೇಲೆ ಇನ್ನೇನು?

SRI T.N. NARASIMHA MURTHY:- So far as the Government is concerned, I have simply cancelled the de-notification & further procedure will be taken up and the land is vested with the Government. ಬಳ್ಳಾರಿ ಅಭಿವೃದ್ಧಿ ಪ್ರಾಧಿಕಾರದಲ್ಲಿದೆ. ಆದ್ದರಿಂದ ಶ್ರೀಮಾನ್ ಖರ್ಗೆಯವರು ಎತ್ತಿರತಕ್ಕಂಥ ಪ್ರಶ್ನೆ ಬಹುಶಃ ಅದು ಅಧಿಕೃತವಾದ ವಿಷಯ ಅಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. That may be his opinion.

ಶ್ರೀ ಕಾಗೋಡು ತಿಮ್ಮಪ್ಪ:- ಈಗ ಅವರಿಂದ ಹನ್ನೊಂದು ಎಕರೆ ಜಮೀನನ್ನು ರಿಜಿಸ್ಟರ್ ಮುಖಾಂತರ ಬರೆಸಿಕೊಂಡಿದ್ದೀರಲ್ಲ, ಅದಕ್ಕೆ ಏನು ಮಾಡಬೇಕು, ಅವರಿಂದ ಡೆವೆಲಪ್‌ಮೆಂಟ್ ಚಾರ್ಜಸ್ ಎಂದು ಒಂದೂವರೆ ಲಕ್ಷ ರೂಪಾಯಿ ಕಟ್ಟಿಸಿಕೊಂಡಿದ್ದೀರಿ, ಮತ್ತೆ ಹನ್ನೊಂದು ಎಕರೆ ಜಮೀನನ್ನು ಇವರಿಗೆ ರಿಜಿಸ್ಟರ್ ಮುಖಾಂತರ ಬರೆದುಕೊಟ್ಟಿದ್ದಾರೆ. ಆ ಜಮೀನು ಏನಾಗಬೇಕು? ಇದೂ ಹೋಯಿತು, ಅದೂ ಹೋಯಿತು.

ಶ್ರೀ ಟಿ.ಎನ್. ನರಸಿಂಹಮೂರ್ತಿ:- ಹಿಂದೆ ತೆಗೆದುಕೊಂಡ ಜಮೀನಿಗೆ ಅವರಿಗೆ ಕಾಂಪನ್‌ಸೇಷನ್ ಹೋಗುತ್ತದೆ. He has to take the compensation because he is the owner of the land along with others. ಆದುದರಿಂದ ಸಬ್‌ಸ್ಟಿಟ್ಯೂಟ್ ಆಗಿ ಆಗಿರತಕ್ಕಂಥಾದ್ದು ಏನಿದೆ, ಇವತ್ತು ನಾವು ಡಿನೋಟಿಫೈ ಕ್ಯಾನ್ಸಲ್ ಮಾಡಿದಮೇಲೆ ಒರಿಜಿನಲ್ ಸ್ಟೇಟಸ್ vested with the Bellary Development Authority ಮಾನ್ಯ ಅಧ್ಯಕ್ಷರೇ, ಸೂಕ್ಷ್ಮವಾಗಿ ತಾವು ಅಪ್ಪಣೆ ಕೊಡುವುದಾದರೆ ಒಂದೆರಡು ನಿಮಿಷ ಕೆಲವು ವಿಚಾರಗಳನ್ನು ಹೇಳುತ್ತೇನೆ. ಬೆಂಗಳೂರು ಪ್ರಾಧಿಕಾರದಲ್ಲಿ ಆಗಿರತಕ್ಕ ಡಿನೋಟಿಫೈ ಪ್ರಕರಣಗಳನ್ನು ಹೇಳುತ್ತೇನೆ. ಸಿಂಧ್ಯಾರವರು ಗಮನವಿಟ್ಟು ಕೇಳಬೇಕು. 1983-84 ರಲ್ಲಿ ಸುಮಾರು 86 ಎಕರೆ 26 ಗುಂಟೆಯನ್ನು ಡಿನೋಟಿಫೈ ಮಾಡಿದ್ದಾರೆ. 84-85 ರಲ್ಲಿ ಸುಮಾರು 27 ಎಕರೆ 31 ಗುಂಟೆ ಡಿನೋಟಿಫೈ ಮಾಡಿದ್ದಾರೆ. 85-86ರಲ್ಲಿ 308 ಎಕರೆ 9 ಗುಂಟೆ ಡಿನೋಟಿಫೈ ಮಾಡಿದ್ದಾರೆ. ಮಾನ್ಯ ಯಡಿಯೂರಪ್ಪನವರೇ ದಯವಿಟ್ಟು ಕೇಳಿ. 1985-86ರಲ್ಲಿ 308 ಎಕರೆ 9 ಗುಂಟೆ ಜಮೀನನ್ನು ಇವತ್ತು ಡಿನೋಟಿಫೈ ಮಾಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ನಿನ್ನೆ ಒಂದು ಮಾತನ್ನು ಹೇಳಿದೆ. ಕುಲದೀಪ್‌ಸಿಂಗ್ ಆಯೋಗದ ವರದಿ ಬಗ್ಗೆ ಚರ್ಚೆಯಾಗತಕ್ಕಂಥ ಸಂದರ್ಭದಲ್ಲಿ ಅನೇಕ ಪ್ರಸಂಗಗಳನ್ನು ನೋಡಿದಾಗ

ಇಲ್ಲಿ ಏನೇನು ನಡೆದಿದೆ ಎಂಬುದನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಿದ್ದೆ. ಈಗ ಅಲ್ಲಿದ್ದವರು ಇಲ್ಲಿದ್ದಾರೆ, ಇಲ್ಲಿದ್ದವರು ಅಲ್ಲಿದ್ದಾರೆ. ಅದಕ್ಕಾಗಿ ಈಗ ನೀವುಗಳು ಏನೇನು ಮಾಡಿದ್ದೀರಿ ಎಂಬುದನ್ನು ಕೇಳುವ ಕೆಲಸ ಮಾತ್ರ ಸಧ್ಯಕ್ಕೆ ಮಾಡುತ್ತೇವೆ. ಸಂದರ್ಭ ಬಂದಾಗ ಸೂಕ್ತ ಮಾತುಗಳನ್ನಾಡೋಣ, ಅಥವಾ ಸಲಹೆಗಳನ್ನು ಹೇಳೋಣ ಎಂದು ಕೇಳುತ್ತಿದ್ದೇವೆ. ನೋಡುತ್ತಿದ್ದೇವೆ. ಆದುದರಿಂದ ತಾವು ಉತ್ತರ ಕೊಡುತ್ತಿದ್ದೀರಿ ಕೊಡಿ. ಏತಕ್ಕೆಂದರೆ ಏನಾಗಿದೆ ನೋಡೋಣ.

ಶ್ರೀ ಟಿ.ಎನ್. ನರಸಿಂಹಮೂರ್ತಿ:- ಮಾನ್ಯ ಯಡಿಯೂರಪ್ಪನವರು, ಮಾನ್ಯ ನಾಗರಜ್‌ರವರು ಬಹಳ ಸಮರ್ಪಕವಾಗಿ ಕೇಳುತ್ತಿದ್ದಾರೆ. ಬಹಳ ಸಂತೋಷ. 86-87ರಲ್ಲಿ 24 ಎಕರೆ 7 ಗುಂಟೆ, 87-88ರಲ್ಲಿ 108 ಎಕರೆ 29 ಗುಂಟೆ, 88-89ರಲ್ಲಿ 781 ಎಕರೆ ಡಿನೋಟಿಫೈ ಮಾಡಿರತಕ್ಕಂಥ ಜನ, ಬಹುಶಃ ಇವತ್ತು ತಜ್ಞರ ಅಭಿಪ್ರಾಯ ಪಡೆದು ಮಾಡಿರತಕ್ಕಂಥಾದ್ದು...

ಶ್ರೀ ವಾಟಾಳ್ ನಾಗರಾಜ್:- ಇದರ ಬಗ್ಗೆ ಚರ್ಚೆ ನಡೆಸುವುದಕ್ಕೆ ಇನ್ನೂ ಎರಡು ದಿವಸ ಕೊಡುವುದಾದರೆ ಚರ್ಚೆ ಮಾಡಿ ಬಿಡೋಣ. ಬಹಳ ಸ್ವಾರಸ್ಯವಾಗಿದೆ, ಅಧ್ಯಕ್ಷರು, ಸರಕಾರ ಒಪ್ಪುವುದಾದರೆ ಇನ್ನು ಎರಡು ದಿವಸ ಚರ್ಚೆ ಮಾಡೋಣ.

ಶ್ರೀ ಟಿ.ಎನ್. ನರಸಿಂಹಮೂರ್ತಿ:- ಮಾನ್ಯ ಅಧ್ಯಕ್ಷರೇ 85-86 ರಲ್ಲಿ....

ಶ್ರೀ ಪಿ.ಜಿ.ಆರ್. ಸಿಂಧ್ಯ:- 79-80, 80-81 ರಲ್ಲಿ ಎಷ್ಟಾಗಿದೆ ಹೇಳಿ.

ಶ್ರೀ ಟಿ.ಎನ್. ನರಸಿಂಹಮೂರ್ತಿ:- ಆ ಮಾಹಿತಿ ಕೂಡಾ ನಾನು ಸಂಗ್ರಹಿಸುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- 83 ರಿಂದ 89 ರವರೆಗೆ ಹೇಳಿದರಲ್ಲ, 80-81 ರವರೆಗೆ ಏನಾಗಿದೆ ಅದನ್ನೂ ಹೇಳಿ.

ಶ್ರೀ ಟಿ.ಎನ್. ನರಸಿಂಹಮೂರ್ತಿ:- 1985-86ರಲ್ಲಿ 308 ಎಕರೆ 9 ಗುಂಟೆ ಜಮೀನನ್ನು ಡಿನೋಟಿಫೈ ಮಾಡಿ the same land were acquired by the Revenue Department for Vaiyalikaval House Building Co-operative Society; ವೈಯ್ಯಾಲಿಕಾವಲ್ ಹೌಸ್‌ಬಿಲ್ಡಿಂಗ್ ಸೊಸೈಟಿಗೆ ಕೊಡಲಿಕ್ಕಾಗಿ 300 ಎಕರೆ ಜಮೀನನ್ನು ಬಿ.ಡಿ.ಎ. ನಿಂದ ಡಿನೋಟಿಫೈ ಮಾಡಿರುವ ಬಗ್ಗೆ ತಾವೇ ಹೇಳಬೇಕು. 1987-88 ರಲ್ಲಿ 88 ಎಕರೆ 16 ಗುಂಟೆ ಜಮೀನನ್ನು ಡಿನೋಟಿಫೈ ಮಾಡಿದ್ದಾರೆ. ಅದು in favour of Shanthi Builders, Shanthi Engineering Constructions and Inspectorate of Electricals Employees House Building Co-operative Society; 1988-89ರಲ್ಲಿ 431 ಎಕರೆ 27 ಗುಂಟೆ ಜಮೀನನ್ನು ಹೆಣ್ಣೂರು – ಬಳ್ಳಾರಿ ರೋಡ್ ಲೇ ಔಟ್ ಥರ್ಡ್ ಸ್ಟೇಜ್‌ನಲ್ಲಿ ಮಾಡಿದ್ದಾರೆ.

SRI D.B. CHANDREGOWDA:- I rise on a point of order.

ಸತ್ಯಹರಿಶ್ಚಂದ್ರರು ಯಾರು, ಯಾರು ಅಲ್ಲ ಎನ್ನುವುದು ಅಲ್ಲ ಇಲ್ಲಿ ಪ್ರಶ್ನೆ ಇರುವುದು. ಹಿಂದೆ ಅಪರಾಧಗಳು ಆಗಿದ್ದರೆ, ನಾನು ಪ್ರಾರಂಭಕ್ಕೇ ಹೇಳಿದ್ದೇನೆ, ನಾನು ನರಸಿಂಹಮೂರ್ತಿಯವರು ಹೇಳಿದಹಾಗೆ, ನಾನು ಗುಡ್ಡ ಅಗೆದು ಇಲಿ ಹಿಡಿಯುವುದಕ್ಕೆ ಹೋದವನಲ್ಲ, ದೊಡ್ಡ ಕಾಡಿಗೆ ಹುಲಿ ಹಿಡಿಯುವ ಶಿಕಾರಿಗೂ ಹೋದವನಲ್ಲ, ನನಗೆ ಇಲ್ಲಿ ಸತ್ಯದ ಶೋಧನೆ ಆಗಬೇಕೆನ್ನುವ ಪ್ರಯತ್ನ ಮಾಡುತ್ತಿದ್ದೇನೆ. ಇವತ್ತು 83 ರಿಂದ 89ರವರೆಗೆ ಇದೆಯಲ್ಲ, ಅದರ ಬಗ್ಗೆ ಬೇಕಾದರೆ ದೀರ್ಘವಾಗಿ ಚರ್ಚೆ ಮಾಡೋಣ. ದಯವಿಟ್ಟು ಎಲ್ಲಾ ಪಟ್ಟಿ ತಂದಿಡಿ. ನನಗೂ ಆಸಕ್ತಿ ಇದೆ. ನಿಮಗಷ್ಟೇ ಅಲ್ಲ. ಯಾರು ಅಪರಾಧ ಮಾಡಿದ್ದರೂ ಅದು ಅಪರಾಧವೇ. ಇವತ್ತು ವಿರೋಧ ಪಕ್ಷದಲ್ಲಿ ಕುಳಿತಿದ್ದೇವೆಂದು ಹೇಳಿ ನಿರಪರಾಧ ಎಂದು ಹೇಳುವುದಾಗಲೀ, ಆಳುವ ಪಕ್ಷದಲ್ಲಿ ಇದ್ದರೆ ಅಪರಾಧ ಎಂದು ಹೇಳುವುದಕ್ಕಾಗಲೀ ನಾನು ಸಿದ್ಧನಿಲ್ಲ. ಆದರೆ ನಾವು ಇಲ್ಲಿ ಒಂದು ವ್ಯತ್ಯಾಸವನ್ನು ಏನು ನೋಡುತ್ತಿದ್ದೇವೆ ಅಂದರೆ ಶ್ರೀಮಾನ್ ಯಡಿಯೂರಪ್ಪನವರು ಒಂದು ಮಾತು ಹೇಳಿದರು, ನೀವು ನೀವು ಜಗಳ ಮಾಡಿಕೊಳ್ಳಿ, ನಮಗೆ ಯಾವಾಗ ಅನುಕೂಲ ಎಂದು, ಇದು ನನಗೂ ಏನೂ ಅನಾನುಕೂಲ ಇಲ್ಲ. ಆದ್ದರಿಂದ ಹಿಂದಿನ ಸರ್ಕಾರ ಅಪರಾಧ ಮಾಡಿದ್ದಾರೆ.....

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ವಿರೋಧಪಕ್ಷದ ನಾಯಕರು ಒಂದು ನಿಮಿಷ. ಇವತ್ತು ನಾನು ಬಹಳ ನೋಂದು ಒಂದು ಮಾತನ್ನು ಈ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಸುಮಾರು 6 ವರ್ಷಗಳ ಕಾಲ ಇಲ್ಲಿ ಕುಳಿತುಕೊಂಡಿದ್ದಂತಹ ಕಾಲದಲ್ಲಿ ಅವರು ಸಹ ಆಗ ಈ ಕಡೆ ಕುಳಿತಿದ್ದಾಗ ಇವರ ಬಗ್ಗೆಯೇ ಮಾತನಾಡುತ್ತಿದ್ದರು. ಅವರ ಬಗ್ಗೆ ಏನೂ ಹೇಳುವಂತಹ ಪರಿಸ್ಥಿತಿಯಲ್ಲಿರಲಿಲ್ಲ. ಆದರೆ ಅವರ ಕಾಲದಲ್ಲಿ ಸಹ ಆಗಿರತಕ್ಕಂಥ ಸಾವಿರಾರು ಪ್ರಕರಣಗಳಿವೆ. ಆದ್ದರಿಂದ ಅನೇಕ ಸಂದರ್ಭಗಳಲ್ಲಿ ಯಾವುದು ಮಾತನಾಡಬೇಕು ಯಾವುದನ್ನು ಮಾತನಾಡಬಾರದು ಎಂದು ಈ ಸದನದಲ್ಲಿ ಕುಳಿತು ಯೋಚನೆ ಮಾಡಬೇಕು ಎಂದು ನಾನು ಹೇಳಿದ್ದೇ ಹೊರತು ನನ್ನ ಜವಾಬ್ದಾರಿಯಿಂದ ಹಿಂದೆ ಸರಿದಿಲ್ಲ. ನಾವು ನೀವು ಎಲ್ಲಾ ಸೇರಿ ಪ್ರಾಮಾಣಿಕವಾಗಿ ಯಾರ ಕಾಲದಲ್ಲಿಯೇ ಅನ್ಯಾಯ ನಡೆದಿದ್ದರೆ ಆ ಸತ್ಯವನ್ನು ಹೊರಗೆ ತರುವುದಕ್ಕೆ ನಾವೆಲ್ಲರೂ ಪ್ರಯತ್ನ ಮಾಡಬೇಕಾಗುತ್ತದೆ. ಮತ್ತೆ ಇಂತಾದ್ದು ಆಗದಂತೆ ಏನು ಚರ್ಚೆಗಳು ಆಗಬೇಕೋ ಅದು ಆಗಬೇಕಾಗುತ್ತದೆ. ಅಂತಹ ಒಂದು ಸಂದರ್ಭ ಬಂದಾಗ ನಾವು ನೀವು ಸೇರಿ ನಮ್ಮ ಕರ್ತವ್ಯಗಳನ್ನು ಮಾಡಬೇಕಾಗುತ್ತದೆ. ಅವರು ಮಾಡಿರಲಿ ಹಿಂದೆ ನೀವು ಮಾಡಿರಲಿ, ಯಾರೇ ಮಾಡಿರಲಿ ಸತ್ಯವನ್ನು ಹೊರ ತಂದು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆನ್ನುವ ಹಿನ್ನೆಲೆಯಲ್ಲಿ ನಾನು ನಿನ್ನೆ ದಿವಸ ಇಲ್ಲಿಯೇ ಕುಳಿತುಕೊಂಡಿದ್ದು, ಆ ಹಿನ್ನೆಲೆಯಲ್ಲಿ ನಾನು ಕನಿಷ್ಠ ಪಕ್ಷ ಏನನ್ನು ಮಾತನಾಡದಿದ್ದರೂ ಸಹ ಏನು ನಡೆದಿದೆ, ಸತ್ಯಶೋಧನೆ ಮಾಡಲು ಇವರು ಏನು ಮಾಡಿದ್ದಾರೆ, ಕುಲದೀಪ್‌ಸಿಂಗ್ ವರದಿಯಲ್ಲಿ ಏನು ಹೇಳಿದ್ದಾರೆಂದು ಕುಳಿತುಕೊಂಡು ಕೇಳಿದ್ದೇ ಹೊರತು, ನಾನು ನನ್ನ ಜವಾಬ್ದಾರಿಯಿಂದ ಹೊರಗೆ ಇರುವಂತಹ ಪ್ರಶ್ನೆ ಇಲ್ಲವೇ ಇಲ್ಲ. ಇಂತಹ ಅನೇಕ ವಿಷಯಗಳು ಇವೆ, ಆ ಬಗ್ಗೆ ಬೇಕಾದರೆ ನಾವು ಚರ್ಚೆ ಮಾಡೋಣ.

† ಶ್ರೀ ಡಿ.ಬಿ. ಚಂದ್ರೇಗೌಡ:- ನಮ್ಮದು ಇಷ್ಟೇ. ನಾನು ಈ ವಿಚಾರವನ್ನು ಎತ್ತಿದ್ದಕ್ಕೆ ಕಾರಣಗಳನ್ನು ಹೇಳಿದ್ದೇನೆ. ಅವರಿಗೆ ಸಮಾಧಾನವಾದ ಹಾಗೆ ನನಗೆ ಕಾಣಲಿಲ್ಲ. ತಮ್ಮನ್ನು ಸಮಾಧನಾ ಮಾಡುವುದಕ್ಕೆ ತಾವು ಅವಕಾಶ ಕೊಟ್ಟರೆ ನಾನು ಮಾಡುತ್ತೇನೆ. ಆದರೆ ಇಲ್ಲಿ ಇರುವ ಪ್ರಶ್ನೆ ಏನು? ಯಾವ ಯಾವ ಕಾಲದಲ್ಲಿ ಎಷ್ಟೆಷ್ಟು ಡೀನೋಟಿಫಿಕೇಶನ್ ಆಯಿತು. ಸಂದರ್ಭಗಳು ಏನು? ಯಾವ ಯಾವ ಹಂತದಲ್ಲಿ ಆಗಿತ್ತು, ಇಲ್ಲಿ ಅಕ್ವಿಜಿಶನ್ ಪ್ರೊಸಿಡಿಂಗ್ಸ್ ಆಗಿ, ಇನ್ನೇನು ಭೂಮಿ ಎಲ್ಲಾ ಸರ್ಕಾರದ್ದು ಎಂದು ಆದ ಮೇಲೆ ಸೈಟ್‌ಗಳು ಹಂಚಿಕೆ ಆಗುವಾಗ ಸೈಟ್‌ಗಳ ಹಂಚಿಕೆಯಲ್ಲಿ ಅಪರಾಧಗಳು ಆಗಿವೆ ಎಂದು ಕೋರ್ಟ್‌ಗೆ ಹೋಗಿ, ಕೋರ್ಟ್‌ನಲ್ಲಿ ಅದು ತೀರ್ಮಾನ ಆದ ಮೇಲೆ ಡೀ ನೋಟಿಫೈ ಮಾಡತಕ್ಕಂಥ ಅಧಿಕಾರ ಸರ್ಕಾರಕ್ಕೆ ಇಲ್ಲ. ಇದು ಉಚ್ಚ ನ್ಯಾಯಾಲಯದ ತೀರ್ಪು, ಮತ್ತು ಕರ್ನಾಟಕ ರಾಜ್ಯದ ಹೈಕೋರ್ಟಿನ ತೀರ್ಪು ಎಂದು ಇದಕ್ಕೆ ಸಂಬಂಧಪಟ್ಟಂತೆ ಹೇಳುತ್ತಿದ್ದೇನೆ. ಉಳಿದ ಪ್ರಕರಣಗಳ ಬಗ್ಗೆ ಹೇಳುವುದಾದರೆ, ನಾನು ಕೊಟ್ಟಿರುವ ಹಾಗೆ ಸಾಹಿತ್ಯವನ್ನು ನೀವು ಸಹ ಕೊಡಲೇಬೇಕು. ಯಾವ ತಾರೀಖು ಫೋರ್ ಒನ್ ನೋಟಿಫಿಕೇಶನ್ ಆಯಿತು. ಯಾವ ತಾರೀಖು ಸಿಕ್ಸ್ ಒನ್ ನೋಟಿಫಿಕೇಶನ್ ಆಯಿತು. ಯಾವ ತಾರೀಖು ಆಕ್ವಿಜಿಷನ್ ಪ್ರೊಸಿಡಿಂಗ್ಸ್ ಮುಗಿಯಿತು? ಯಾವ ತಾರೀಖು ಭೂ ಮಾಲೀಕರಿಗೆ ಪರಿಹಾರ ಹಣ ಕೊಡಲಾಯಿತು? ಯಾವ ತಾರೀಖು ಬಿ.ಡಿ.ಎ. ಮತ್ತು ಬೇರೆ ಬೇರೆ ಇಲಾಖೆಗಳು ಸೈಟ್‌ಗಳ ಫಾರ್ಮೇಶನ್‌ಗೆ ಬೇಕಾಗಿರುವ ವ್ಯವಸ್ಥೆ ಮಾಡಿದರು? ಯಾವಾಗ ಸೈಟ್‌ಗಳನ್ನು ಹಂಚಿಕೆ ಮಾಡಿದರು? ಅಂತಹದ್ದು ಎಷ್ಟು ಡೀ ನೋಟಿಫೈ ಆಗಿದೆ ಎಂಬ ಲೆಕ್ಕ ನನಗೆ ಬೇಕು. ಸುಮ್ಮನೇ ಏನೋ ಜನರಲ್ ಆಗಿ ಒಂದನ್ನು ಮಾತನಾಡಿಕೊಂಡು ಹೋಗುವುದು ಅಲ್ಲ.

I want the whole details. Sofar as this case is concerned,

I have given the entire details. He cannot get away by saying or quoting so many instances here. If that is the case. ನಾನು ಒಂದು ಚಕಾರ ಶಬ್ದ ಅವರ ಚಾರಿತ್ರ್ಯದ ಮೇಲೆ ಮಾಡಿಲ್ಲ. ಒಂದೇ ಒಂದು ಶಬ್ದ ಮಾಡಿಲ್ಲ. ಆದರೆ ಇವರು ಏನು ಉತ್ತರ ಹೇಳುತ್ತಿದ್ದಾರೆ?

SRI P.G.R. SINDHIA :- You have no right to say like that.

SRI D.B. CHANDRE GOWDA:- If that is the case ನಾನು ಒಂದೇ ಒಂದು ವೈಯುಕ್ತಿಕವಾಗಿ ಹೇಳಿದ್ದೇನೆಯೇ? ನೀವು ಕುಳಿತುಕೊಂಡು ಕೇಳಿದಿರಿ. ಒಂದು ಚಕಾರ ಶಬ್ದ ಎತ್ತಿಲ್ಲ. ಏತಕ್ಕೆ ಎತ್ತಲಿಲ್ಲ? ನೋಡಿ ಸ್ವಾಮಿ ನಮಗೆ ನೋವು ಯಾವಾಗ ಆಗುತ್ತದೆ, ಸಾರ್ವಜನಿಕ ಜೀವನದಲ್ಲಿ ಪ್ರಾಮಾಣಿಕವಾಗಿ ಬದುಕುವುದೇ ಒಂದು ಅಪರಾಧ, ಅದಕ್ಕೆ ಶಿಕ್ಷೆ ಕೊಡಬೇಕು ಎನ್ನುವ ದೃಷ್ಟಿಯಲ್ಲಿ ನೀವು ಮತ್ತು ಮಾನ್ಯ ಸಭಾನಾಯಕರು ಮಾತನಾಡಿದರಲ್ಲಿ ಆಗ ನಮಗೆ ಹೊಟ್ಟೆ ಉರಿಯುತ್ತದೆ. ಅಷ್ಟೇ, ಮತ್ತೆ ಹಿಂದಿನ ಸರ್ಕಾರ ಮಾಡಿದ್ದರೆ....

ಶ್ರೀ ವೀರೇಂದ್ರ ಪಾಟೀಲ್:- ನಾನೇನಪ್ಪ ಮಾತನಾಡಿದೆ? ನಾನು ಸುಮ್ಮನೆ ಕುಳಿತುಕೊಂಡಿದ್ದೇನೆ. ನಾನು ಏನು ಮಾತನಾಡಿದೆ?

ಶ್ರೀ ವಾಟಾಳ್ ನಾಗಾರಾಜ್:- ಅವರು ನಿನ್ನೆ ತಾವು ಮಾಡಿದ ಭಾಷಣದ ಬಗ್ಗೆ ಇವತ್ತು ಬೆಳಿಗ್ಗೆಯಿಂದ ಮಾತನಾಡುತ್ತಿದ್ದಾರೆ....

ಶ್ರೀ ಡಿ.ಬಿ. ಚಂದ್ರೇಗೌಡ:- ತಾವು ನಿನ್ನೆ ಹೇಳಿದ್ದಿರಲ್ಲ. ನೂರು ಈರುಳ್ಳಿ ತಿನ್ನಿಸುವ ಬಗ್ಗೆ, ಈಗ ಎಷ್ಟು ಈರುಳ್ಳಿ ತಿನಿಸುತ್ತೀರಿ ಎನ್ನುವುದೇ ನಮ್ಮ ಪ್ರಶ್ನೆ. ನಾವು ಕೇಳತಕ್ಕಂಥಾದ್ದು ಬಿಟ್ಟು ಉಳಿದಿದ್ದು ಹೇಳಿ ಎಮೋಶನಲ್ ಆಗಿದ್ದರೆ ಪ್ರಯೋಜನ ಏನು? ನಾವು ಚರ್ಚೆ ಮಾಡೋಣ. ಒಂದು ವೇಳೆ ನನಗೆ ತಮ್ಮ ಮೂಲಕ ಅವರಿಗೆ ಅಥವಾ ಸರ್ಕಾರಕ್ಕೆ ಸಾರ್ವಜನಿಕರಿಗೆ ವಿಷಯಗಳನ್ನು ಪ್ರಸ್ತಾಪ ಮಾಡಿ ಕನ್‌ವಿನ್ಸ್ ಮಾಡಲು ಸಾಧ್ಯವಾಗದಿದ್ದರೆ ನಾನು ಒಪ್ಪಿಕೊಳ್ಳುವುದಕ್ಕೆ ತಯಾರು ಇದ್ದೇನೆ. ನಾನೇನು ಸರ್ವಜ್ಞನಲ್ಲ. ಅಥವಾ ಪ್ರತಿಭಾವಂತ ಅಲ್ಲ. ಈಗ ನನಗೆ ಬಂದಿರತಕ್ಕಂಥ ಮಾಹಿತಿಯನ್ನು ನಾನು ಸದನದಲ್ಲಿ ಇಟ್ಟಿದ್ದೇನೆ. ಅಂತಿಮವಾಗಿ ಜಮೀನು ನಿಮ್ಮ ವಶದಲ್ಲಿ ಇಟ್ಟುಕೊಂಡು ಮೇಲೆ ನೀವು ಸ್ವಾಧೀನಪಡಿಸಿಕೊಂಡ ಮೇಲೆ ಈಗ ಸ್ಟೇಟ್ ಮಾಡುವ ಹಂತದಲ್ಲಿ ಇರುವಾಗ......

ಅಧ್ಯಕ್ಷರು:- ಅವರು ಇನ್ನೂ ಉತ್ತರ ಹೇಳಿ ಮುಗಿಸಿಲ್ಲ.

ಶ್ರೀ ಟಿ.ಎನ್. ನರಸಿಂಹಮೂರ್ತಿ:- ನನ್ನ ಉತ್ತರ ಇನ್ನೂ ಮುಗಿದಿಲ್ಲ. ಈ ವಿಚಾರದಲ್ಲಿ ನಾನು ವಿಧಾನಪರಿಷತ್‌ನಲ್ಲಿ ಏನು ಒಂದು ನಿರ್ಧಾರ ತೆಗೆದುಕೊಂಡೆ. ಅದು 30ನೇ ತಾರೀಖು ಎಲ್ಲಾ ದೊಡ್ಡ ದೊಡ್ಡ ಪ್ರಮುಖ ಪತ್ರಿಕೆಗಳಲ್ಲೂ ಬಂದಿದೆ. ಈ ರಾಜ್ಯದಲ್ಲಿ ಕಾಂಗ್ರೆಸ್ ಐ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ನಡೆದಿರುವ ಅತಿ ದೊಡ್ಡ ಹಗರಣವನ್ನು ಬಹಿರಂಗಪಡಿಸುತ್ತಿದ್ದೇನೆ, ಎಂದೇ ವಿಷಯವನ್ನು ಪ್ರಸ್ತಾಪಿಸಿದ ಮಾನ್ಯ ನಾಣಯ್ಯನವರು ಸುಮಾರು 2 ಕೋಟಿ ರೂಪಾಯಿ ಬೆಲೆ ಬಾಳುವ ಈ ಭೂಮಿಯನ್ನು ಭೂ ಮಾಲೀಕರಿಗೆ ಹಿಂತಿರುಗಿಸುವ ಸನ್ನಾಹದಲ್ಲಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ನಡೆದು ಹೋಗಿದೆ. ತಾವು ಯೋಚನೆ ಮಾಡಿ. ಈ ಆಪಾದನೆಯನ್ನು ಹೇಳಿದಾಗ ಯಾವುದೇ ಒಬ್ಬ ವ್ಯಕ್ತಿ ಘನತೆ ಗೌರವ ಇರುವ ವ್ಯಕ್ತಿ ತಡೆದುಕೊಳ್ಳುವುದಕ್ಕೆ ಆಗುತ್ತದೆಯೇ?

ಶ್ರೀ ಹೆಚ್. ಏಕಾಂತಯ್ಯ:- ತಮ್ಮ ಮುಖ್ಯ ಮಂತ್ರಿಗಳೇ ಸದಸ್ಯರನ್ನು ಉದ್ದೇಶಿಸಿ ಈ ರೀತಿ ಹೇಳುತ್ತಾರೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ:- ಮಾನ್ಯ ಅಧ್ಯಕ್ಷರೇ, ನಾನು ಈ ಹಂತದಲ್ಲಿ ಇದನ್ನು ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಸತ್ಯಾಂಶವನ್ನು ಈ ಸಭೆಯ ಮುಂದೆ ಇಟ್ಟಿದ್ದೇನೆ. ಮತ್ತು ಈ ಭೂಮಿಯನ್ನು 1982ರಲ್ಲಿ ಸ್ವಾಧೀನಪಡಿಸಿಕೊಂಡ ಸಂದರ್ಭದಲ್ಲಿ ಹಾಗೂ 89ನೇ ಇಸವಿ ಮೇ ತಿಂಗಳವರೆಗೆ ನಾನು ಕಡತ ವಿಲೇವಾರಿ ಮಾಡುವವರೆಗೆ ಯಾರೆಲ್ಲಾ ಏನೆಲ್ಲಾ ಮಾಡಿದರು ಈ ಏಳೆಂಟು ವರ್ಷಗಳ ಕಾಲ ಅನ್ಯತಕ್ಕಂತಾದ್ದನ್ನು ಇತಿಹಾಸಕ್ಕೆ ಬಿಡುತ್ತೇನೆ. ಅಂತಿಮವಾಗಿ ಇದು ನಿಮ್ಮ ತೀರ್ಮಾನಕ್ಕೇ ಬಿಡುತ್ತೇನೆ. ಈ ಅಪಾದನೆ ನಿರಾಧಾರವಾದುದು, ರಾಜಕೀಯ ದುರುದ್ದೇಶದಿಂದ ಕೂಡಿರುವುದು ಮತ್ತು ಆಕ್ರೋಶದಂಥ ವಾತಾವರಣದಲ್ಲಿ ಇದನ್ನು ಪ್ರಸ್ತಾಪ ಮಾಡಿ, ಪ್ರಚಾರ ತೆಗೆದುಕೊಳ್ಳುವುದಕ್ಕೆ ಕೈಗೊಂಡಿರತಕ್ಕ ಒಂದು ವಾದ ಎಂದು ಇಷ್ಟನ್ನು ಮಾತ್ರ ಹೇಳಿ ಇವತ್ತು ನಾವು ಸದುದ್ದೇಶದಿಂದ, ನಾಗರೀಕರಿಗೆ ನಿವೇಶನ ಕೊಡುವ ಸುದುದ್ದೇಶದಿಂದ ಅಂತಿಮವಾಗಿ ಕೈಗೊಂಡಿರತಕ್ಕ

ಈ ನಿರ್ಧಾರ, ಏನಿದೆ, ಇದು ಜನತೆಯ ದೃಷ್ಟಿಯಿಂದ ಕೈಗೊಂಡಿರತಕ್ಕ ನಿರ್ಧಾರ ಮತ್ತು ಸಂಸದೀಯ ವ್ಯವಸ್ಥೆಯಲ್ಲಿ, ಶಾಸನ ಸಭೆಯಲ್ಲಿ ನಾವು ಕೊಡುವಂಥ ಮಾತಿಗೆ ಬೆಲೆ ಇರಬೇಕೆಂದು ಹೇಳಿದ ಈ ನಿರ್ಧಾರ ಅಚಲವಾಗಿದೆ. ಇವತ್ತು ಯಾರಿಗೆ ಅನ್ಯಾಯವಾಗಿದೆ ಅವರು ಶ್ರೇಷ್ಠ ನ್ಯಾಯಾಲಯ, ಸರ್ವೋಚ್ಚ ನ್ಯಾಯಾಲಗಳಿಗೆ ಹೋಗಿ ಅವರು ನ್ಯಾಯವನ್ನು ಪಡೆಯಬಹುದು. ಇದುವರೆಗೆ ನಮ್ಮ ಸ್ನೇಹಿತರು ಏನು ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಮತ್ತು ಅವರು ಏನು ರಚನಾತ್ಮಕ ಸಲಹೆಗಳನ್ನು ಕೊಟ್ಟಿದ್ದಾರೋ ಅವುಗಳು ನನಗೆ ಮುಂದೆ ಕೈಗನ್ನಡಿಯಾಗುತ್ತವೆ, ಹಾಗೂ ಎಲ್ಲಿಯವರೆಗೂ ನಾನು ಈ ಮಂತ್ರಿಮಂಡಲದಲ್ಲಿ ಸದಸ್ಯನಾಗಿರುತ್ತೇನೋ, ಈ ಇಲಾಖೆಯನ್ನು ನಿರ್ವಹಿಸುವುದಕ್ಕೆ ನಮ್ಮ ಮುಖ್ಯ ಮಂತ್ರಿಗಳು ಅವಕಾಶ ಕೊಡುತ್ತಾರೆ ಅಲ್ಲಿಯವರೆಗೆ ನಾನು ಸತ್ಯ, ಧರ್ಮ, ನ್ಯಾಯವಾಗಿ ಆದಷ್ಟೂ ಮಟ್ಟಿಗೆ ನಾನು ಹೋಗಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ಭರವಸೆ ಕೊಡುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ, ಒಂದೆರಡು ವಿಷಯ, ಅವರು ಬೇರೆ ಬೇರೆ ವಿಚಾರಗಳಲ್ಲಿ ಸ್ಪಷ್ಟವಾದ ತೀರ್ಪುಗಳು ಬಂದಿವೆಯೆಂದು ಹೇಳಿದರು. ಸಂತೋಷ. ಬಂದಿವೆ. ಅದು ತಪ್ಪೋ ಸರಿಯೋ ಎಂದು ಸಾರ್ವಜನಿಕವಾಗಿಯೂ ಚರ್ಚೆಯಾಗುತ್ತದೆ. ಇಲ್ಲಿ ತೀರ್ಪಿಗೆ ಕಾಯಬೇಕಾದುದಿಲ್ಲ. ನಾನು ತಪ್ಪು ಮಾಡಿದ್ದೇನೆಂದು ಹೇಳಿ ಮಂತ್ರಿಗಳೇ ಒಪ್ಪಿಕೊಂಡು ಅವರೇ ತೀರ್ಪು ಕೊಟ್ಟಿದ್ದಾರೆ. ಈಗ ನಾನು ಕೇಳುತ್ತಿರುವುದು ಏನು ಇಲ್ಲಿ ಮಾನ್ಯ ಮಂತ್ರಿಗಳೇ ಆಜ್ಞೆ ಮಾಡಿನಂತರ ಅದನ್ನು ವಾಪಸ್ ತೆಗೆದುಕೊಂಡು ತಪ್ಪು ಮಾಡಿದ್ದಾರೆ. ಆದ್ದರಿಂದ ಪ್ರತಿಯೊಂದು ಸ್ಟೇಜ್‌ನಲ್ಲೂ ಏನೇನು ನಡೆದಿದೆಯೆಂದು ತಾರೀಖುವಾರು ಈ ಸದನದ ಮುಂದೆ ಇಡಿ. 8 ವರ್ಷಗಳ ಕಾಲ ಶ್ರೀಮಾನ್ ಗುಂಡೂರಾಯರು ಮುಖ್ಯ ಮಂತ್ರಿಗಳು ಆಗಿದ್ದಾಗಿನಿಂದ ಇದು ಪ್ರಾರಂಭವಾಗಿದ್ದು, ಅಂದಿನಿಂದ ಇಲ್ಲಿಯವರೆಗೆ ಎಷ್ಟೇ ಒತ್ತಡಗಳು ಬಂದರೂ ಹಿಂದಿನ ಸರ್ಕಾರ ಡೀನೋಟಿಫೈ ಮಾಡದೆ ಶಾಸನದ ಎಲ್ಲ ಇತಿಮಿತಿಗಳನ್ನು ದಾಟಿ ಅಂತಿಮವಾಗಿ ಸೈಟ್‌ಗಳನ್ನು ಹಂಚತಕ್ಕ ಕಾಲದಲ್ಲಿ ಡೀನೋಟಿಫೈ ಮಾಡತಕ್ಕಂಥ ಅಧಿಕಾರ ಸರ್ಕಾರಕ್ಕೆ ಇಲ್ಲ.

SRI T.N. NARASIMHA MURTHY:- The then Minister Mr. Chandrasekhar as a minister in charge of the Urban Deveopment has already taken a decision to denotify.

SRI D.B. CHANDRE GOWDA:- Then why did you do it again?

SRI T.N. NARASIMHA MURTHY:- Because it was not implemented, because the sites were allotted and unless the sites alloted are cancelled, that notification could not be issued.

SRI D.B. CHANDRE GOWDA:- If Chandrasekhar had done it, why did you not say it in the other House? Why did you own it? Why the orders passed by the Government were withdrawn?

ಅಧ್ಯಕ್ಷರು:- ಮಾನ್ಯ ಚಂದ್ರಶೇಖರ್‌ರವರು ಬರೆದ ಕಾಗದವನ್ನೂ ಅವರು ಓದಿದರಲ್ಲಾ.

ಶ್ರೀ ಡಿ. ಬಿ. ಚಂದ್ರೇಗೌಡ:- ಚಂದ್ರಶೇಖರ್‌ರವರು ಬರೆದ ಕಾಗದವಲ್ಲ, ಅದು ಪ್ರೊ: ಮಧುದಂಡವತೆ ಅವರು ಬರೆದ ಕಾಗದ ಅದಕ್ಕೆ ನಾನು ಹೇಳುತ್ತೇನೆ, ಕಾಗದ ಬರೆದ ಹಾಗೆ ತೀರ್ಮಾನ ತೆಗೆದುಕೊಳ್ಳುವುದೋ ಅಥವಾ ಶಾಸನ ಇದ್ದ ಹಾಗೆ ತೀರ್ಮಾನ ತೆಗೆದುಕೊಳ್ಳುವುದೇ? ಇಬ್ಬರು ಅಡ್ವೋಕೇಟ್ ಜನರಲ್‌ರವರು ಒಪೀನಿಯನ್ ಕೊಟ್ಟರೆಂದು ಹೇಳಿದರು. ಅದಕ್ಕೆ ಹಿಂದೆ ಇದ್ದ ಅಡ್ವೋಕೇಟ್ ಜನರಲ್‌ರವರು ಏನು ಒಪೀನಿಯನ್ ಕೊಟ್ಟಿದ್ದರು? ಇದೇ ಕೇಸಿನ ಬಗ್ಗೆ ನಮ್ಮ ಹೈಕೋರ್ಟ್ ಏನು ತೀರ್ಮಾನ ಕೊಟ್ಟಿದೆ? ಅವರು ಹಾಕಿದ ಸ್ಟೇ ಅನ್ನು ವಜಾ ಮಾಡಿ ಈ ಕೇಸನ್ನು ವಾಪಸ್‌ಕಳಿಸಿದರು. ಸರ್ಕಾರಕ್ಕೆ ಕೊಡತಕ್ಕಂಥ ಅಧಿಕಾರ ಇಲ್ಲವೆಂದು ಸರ್ವೋಚ್ಚ ನ್ಯಾಯಲಯದಿಂದ ತೀರ್ಪು ಬಂದಿದೆ. ಇದೆಲ್ಲವನ್ನೂ ಮೀರಿ ನಾವು ಕೊಟ್ಟಿದ್ದೇವೆಂದರೆ ಅದು ಹೇಗೆ? ನೀವು ಕೊಟ್ಟ ಉತ್ತರದಿಂದ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆಯೇ ಹೊರತು ನಾನಾಗಿಯೇ ಈ

ವಿಚಾರಗಳನ್ನು ಪ್ರಸ್ತಾಪ ಮಾಡಲಿಲ್ಲ. ಇವರು ಬಳಸಿದ ಭಾಷೆಯು ಎಷ್ಟು ದೂರ ಹೋಗುತ್ತದೆ ಅಂದರೆ, ಇಲ್ಲಿ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಆಗಿದೆ ಎನ್ನುತ್ತಾರೆ; ಆದರೆ ನನಗೆ ಕೋಟಿ ಗೊತ್ತು ಕೋಟ್ಯಾಂತರ ರೂಪಾಯಿಗಳು ಗೊತ್ತಿಲ್ಲವೆಂದು ಹೇಳಿದರು. ಆದರೆ ಸರ್ಕಾರದಲ್ಲಿ ಕೋಟಿನ ವ್ಯವಹಾರವಾದರೂ ಅಷ್ಟೇ ದೊಡ್ಡದು. ಕೋಟ್ಯಾಂತರದ ವ್ಯವಹಾರವಾದರೂ ಅಷ್ಟೇ ದೊಡ್ಡದು. ಅದಕ್ಕಾಗಿಯೇ ಕನ್ನಡದ ಗಾದೆಯಿದೆ, ಏನೆಂದರೆ, ಅಡಿಕೆ ಕದ್ದರೂ ಕಳ್ಳ, ಆನೆ ಕದ್ದರೂ ಕಳ್ಳ? ಎಂದು. ಇಲ್ಲಿ ಒಂದೇ ಎಕರೆಯಾಗಿರಲಿ, 17 ಎಕರೆಯೇ ಆಗಿರಲಿ, ಅದರ ಬೆಲೆಯು ಕೇವಲ ಐದು ಲಕ್ಷಗಳು ಮಾತ್ರವೇ ಇರಲಿ, ಅದು ಶಾಸನ ವಿರುದ್ಧವಾಗಿ ಇದ್ದರೆ, ಅದು ಶಾಸನದ ವಿರುದ್ಧವೇ ಆಗುತ್ತದೆ. ಹಾಗೆ ನಡೆದಿದ್ದರೆ ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅದನ್ನು ಬಿಟ್ಟು ಬೇರೆ ಬರೀ ವಾದ ಮಾಡಿದರೆ, ಎಮೋಷನ್ ಆಗಿ ಆದರೆ, ನಿಮ್ಮ ಎಮೋಷನ್ ಬಗ್ಗೆ ಪ್ರಾಮಾಣಿಕತೆ ಬಗ್ಗೆ ನಾನು ಇಲ್ಲಿ ಪ್ರಶ್ನೆ ಮಾಡಲಿಲ್ಲ. ನಿಮ್ಮ ಉತ್ತರದಿಂದಲೇ ಇದು ಉದ್ಭವಿಸಿತು ಎಂದು ಹೇಳಿದ್ದೇನೆ. ನೀವು ಮೂರನೇ ತಾರೀಖು ಜುಲೈನಲ್ಲಿ ಇಲ್ಲಿ ಉತ್ತರಕೊಟ್ಟಾಗ ಸಾವಿರಾರು ಹಗರಣಗಳನ್ನು ಪ್ರಸ್ತಾಪ ಮಾಡಿದಿರಿ. ಅಲ್ಲಿಗೇ ನೀವು ಕನ್‌ಫೈನ್ ಆಗಿದ್ದರೆ ಈ ಪರಿಸ್ಥಿತಿಯು ಬರುತ್ತಿರಲಿಲ್ಲ. ಏನೋ ಸಾಮ್ರಾಜ್ಯ ನಡೆದುಹೋಗಿದೆ ಎಂಬ ರೀತಿಯಲ್ಲಿ ಹೇಳಿದ್ದೀರಿ. ಈಗ ಅಧಿಕಾರ ನಿಮ್ಮ ಕೈಯಲ್ಲಿದೆ, ಸರಕಾರ ನಿಮ್ಮ ಕೈಯಲ್ಲಿದೆ, ಶಾಸನ ನಿಮ್ಮ ಕೈಯಲ್ಲಿದೆ, ಅಂಥ ಅಪರಾಧಗಳು ಆಗಿದ್ದರೆ ಖಂಡಿತಾ ನೀವು ವಿಚಾರಣೆ ಮಾಡಿಸಿ. ಆದರೆ ತಾವು ತಂದ ವಿಚಾರದಲ್ಲಿ ಕ್ಯಾಮೋಫ್ಲಾಸ್ ಮಾಡಲಿಕ್ಕೆ ಹೋಗಬೇಡಿ. ರಾಜಕೀಯ ಮಾಡಿದ್ದರೆ, ತಪ್ಪು ಹೆಜ್ಜೆ ಇಟ್ಟಿದ್ದರೆ, ಅನ್ನುವುದಾದರೆ ವಿಚಾರಣೆ ಮಾಡಿಸಿ. ನಾವು ಡೀನೋಟಿಫೈ ಮಾಡದೇ ಇದ್ದರೆ ಭೂಮಾಲೀಕರ ಪರವಾಗಿ ಇದ್ದರು ಎಂದು ಡೀನೋಟಿಫೈ ಮಾಡಿಕೊಟ್ಟರೆ ವಿದೇಶಿ ಏಜೆಂಟರುಗಳಾಗಿದ್ದರು ಎಂದು ಹೇಳುವುದರ ಮೂಲಕ ಯಾವುದನ್ನು? ಎಲ್ಲಿಂದ? ಎಲ್ಲಿಗೆ? ಕೊಂಡೊಯ್ಯುತ್ತಾ ಇದ್ದೀರಿ? ಹೀಗೆಲ್ಲಾ ಮಾಡಿದರೆ ಯಾರ ನಾಲಿಗೆ ಕತ್ತರಿಸುತ್ತದೆಯೋ ಅಥವಾ ಇದೊಂದು ಕಟ್ಟು ಕಥೆಯೋ ಗೊತ್ತಿಲ್ಲ. ನಾನು ಒಂದು ಹೇಳುತ್ತೇನೆ. ನನ್ನ ಬದುಕಿನಲ್ಲಿ ನಾನು ಯಾರ ಚಾರಿತ್ರ್ಯಹರಣವನ್ನೂ ಮಾಡಲಿಕ್ಕೆ ಪ್ರಯತ್ನ ಎಂದೂ ಮಾಡಿಲ್ಲ. ಇಂದಿಗೂ ಮಾಡಿಲ್ಲ, ಮುಂದೆಯೂ ಮಾಡುವವನಲ್ಲ. ಮತ್ತು ಹಾಗೆ ಮಾಡುವ ಅಗತ್ಯತೆಯೂ ನನಗಿಲ್ಲ. ತೀರಾ ರಾಜಕೀಯವಾಗಿ ಮಂತ್ರಿಗಳಾಬೇಕೆನ್ನುವವರು, ಮುಖ್ಯಮಂತ್ರಿಗಳಾಗ ಬೇಕೆನ್ನುವವರು, ಇನ್ನೂ ಏನೇನೋ ಆಗಬೇಕೆನ್ನುವವರು ರಾಜಕೀಯ ಮಾಡುತ್ತಾರೆ. ಆದರೆ ನಾನು ಇಷ್ಟೊತ್ತು ತಂದಿರತಕ್ಕದ್ದು.

ಶ್ರೀ ಎಂ. ಮಹದೇವ್:- ಮಾನ್ಯ ಚಂದ್ರೇಗೌಡರೇ ನಿಮ್ಮದು ಯಾವುದೂ ಆಗಲೇ ಇಲ್ಲವಲ್ಲ?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ನಿಮ್ಮಷ್ಟು ನಿರಾಶಾವಾದಿಯೂ ಅಲ್ಲ, ದುರಾಸೆಯೂ ಇಲ್ಲ. ಆ ಕಾರಣದಿಂದ ನಾನು ಇಲ್ಲಿ ಪ್ರಸ್ತಾಪ ಮಾಡಿದ್ದನ್ನು ಇವರು ರಾಜಕೀಯ ಪ್ರಸಿದ್ಧಿಗಾಗಿ ಮಾಡಿದ್ದಾರೆ ಎನ್ನತಕ್ಕಂಥ ಆರೋಪವನ್ನು ಮಂತ್ರಿಗಳ ಮೇಲೆ ಮಾಡಿದ್ದನ್ನು ನಾನು ಮಾಡಿಲ್ಲ ಎಂದು ಸಾಬೀತು ಮಾಡಬೇಕೆ ಹೊರತು, ಹೀಗೆ ಮಾಡುವುದಿಲ್ಲ. ಹೀಗಾದರೆ ನಾವು ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡುವುದು ಹೇಗೆ? ನಮಗೆ ಬಂದಿರತಕ್ಕಂಥ ವಿಚಾರಗಳನ್ನು ನಾವು ಇಲ್ಲಿ ಪ್ರಸ್ತಾಪ ಮಾಡಬಾರದೆ? ಅದನ್ನು ರಾಜಕೀಯ ದುರುದ್ದೇಶದಿಂದ ಮಾಡಿದ್ದಾರೆ ಎಂದು ನೀವು ತಿಳಿದುಕೊಂಡರೆ ಹೇಗೆ? ಹಾಗಿದ್ದರೆ ನಿಮ್ಮಲ್ಲಿ ಪ್ರಾಮಾಣಿಕತೆ ಇಲ್ಲ. ನೀವು ಪ್ರಾಮಾಣಿಕರಾಗಿದ್ದರೆ, ನಾನು ಇಷ್ಟು ಮಾಡಿದ್ದೇನೆ, ನನ್ನ ಅಪರಾಧ ಆಗಿದ್ದರೆ ವಾಪಸ್ ತೆಗೆದುಕೊಳ್ಳುತ್ತೇನೆ ಎಂದು ಹೇಳಿದಿರಲ್ಲ, ಅಲ್ಲಿಗೆ ನಿಮ್ಮ ದೊಡ್ಡಸ್ತಿಕೆ ನಿಲ್ಲಬೇಕಾಗಿತ್ತು. ಅಲ್ಲಿಂದ ನೀವು ಮುಂದಕ್ಕೆ ಹೋಗಿದ್ದೀರಿಲ್ಲ? ಆ ಕಾರಣಕ್ಕಾಗಿ ಮತ್ತೆ ಅಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡುವುದಕ್ಕೆ ನೀವೇ ಅವಕಾಶವನ್ನು ಮಾಡಿಕೊಟ್ಟಿದ್ದೀರಿ, ನಾನಲ್ಲ; ಆದ್ದರಿಂದ ಭಾವುಕರಾಗಬೇಡಿ. ಭಾವುಕತೆಯಿಂದ ಈ ಸದನದಲ್ಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ.

ಏತಕ್ಕಾಗಿ ನೀವು ಭಾವೋದ್ರೇಕ ಆಗಬೇಕು? ಏನು ಮಾಡಿದ್ದೇವೆ. ನಿಮ್ಮ ಮೇಲೆ ನಾವು ಏನು ಚಾರ್ಜಸ್ ಮಾಡಿದ್ದೇವೆ. ತೆಗೆಯಿರಿ ಕಡತವನ್ನು?

ಶ್ರೀ ಕೆ.ಹೆಚ್. ಹನುಮೇಗೌಡ:- ದಯಮಾಡಿ ಒಂದು ನಿಮಿಷ. ನೀವು ಹೇಳಿದ್ದನ್ನು ನಾವು ಇಷ್ಟು ಹೊತ್ತು ಕೇಳಿದ್ದೇವೆ. ಇದಕ್ಕಿಂತ ಹೆಚ್ಚಿನ ವಿಚಾರಗಳು ನಿನ್ನೆ ಬಂದಾಗ ನೀವುಗಳು ಏತಕ್ಕಾಗಿ ಹೊರಗೆ ಹೋದಿರಿ. ಆಗ ನಿಮಗೆ ಏತಕ್ಕೆ ತಾಳ್ಮೆ ಇರಲಿಲ್ಲ?

ಶ್ರೀ ಡಿ.ಬಿ. ಚಂದ್ರೇಗೌಡ:- ನಾವು ಏತಕ್ಕೆ ಹೊರಗೆ ಹೋಗಿದ್ದೇವೆ ಎನ್ನುವುದನ್ನು ಸಾರ್ವಜನಿಕವಾಗಿ ವಿವರಿಸಿದ್ದೇವೆ. ಅದನ್ನು ನಿಮಗೆ ಹೇಳುವ ಅವಶ್ಯಕತೆ ಇಲ್ಲ. ನಿಮ್ಮನ್ನು ಕೇಳಿ ನಾವು ಹೋಗುವುದಿಲ್ಲ. ಆ ಬಗ್ಗೆ ಪತ್ರಿಕೆಗಳಲ್ಲಿಯೂ ಬರೆದಿದ್ದಾರೆ....

(ಗೊಂದಲ)

ಶ್ರೀ ಕೆ.ಹೆಚ್. ಹನುಮೇಗೌಡ:- ಮನಸ್ಸಿಗೆ ಬಂದ ಹಾಗೆ ಮಾತನಾಡುವುದೆ?...

ಶ್ರೀ ಡಿ.ಬಿ. ಚಂದ್ರೇಗೌಡ:- ಯಾರು ಮನಸ್ಸಿಗೆ ಬಂದ ಹಾಗೆ ಮಾತನಾಡುವುದು? ಅದನ್ನು ಕೇಳುವುದಕ್ಕೆ ನೀವ್ಯಾರು? ಮನಸ್ಸಿಗೆ ಬಂದ ಹಾಗೆ ಮಾತನಾಡುವುದು ಅಂದರೆ ಏನು? ಅದು ನಮ್ಮ ತೀರ್ಮಾನ.

(ಗೊಂದಲ)

ಶ್ರೀ ಕೆ.ಹೆಚ್. ಹನುಮೇಗೌಡ:- ಕಳಂಕ ಬಂದಿದ್ದರಿಂದ ಅದನ್ನು ಇಲ್ಲಿ ಇದ್ದೇ ಎದುರಿಸಬೇಕಾಗಿತ್ತು?.

ಶ್ರೀ ಡಿ.ಬಿ. ಚಂದ್ರೇಗೌಡ:- ಅವರು ಹೀಗೆ ಹೇಳಿದ್ದು ಸರಿಯಲ್ಲ, ಹೀಗೆ ಹೇಳಲು ಅವರ್ಯಾರು? ಇವರೇನು ಸತ್ಯಹರಿಶ್ಚಂದ್ರನ ಮೊಮ್ಮಕ್ಕಳಾಗಿ ಹುಟ್ಟಿದ್ದಾರಾ?....

ಅಧ್ಯಕ್ಷರು:- ಹನುಮೇಗೌಡ ದಯಮಾಡಿ ತಾವು ಕುಳಿತುಕೊಳ್ಳಿ.....

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ. ನನ್ನದ್ದು ಒಂದೇ ಒಂದು ಕ್ಲಾರಿಫಿಕೇಶನ್ ಇದೆ....

(ಗೊಂದಲ)

ಅಧ್ಯಕ್ಷರು:- ಹನುಮೇಗೌಡರೇ ಕುಳಿತುಕೊಳ್ಳಿ. ಎಲ್ಲರೂ ಕುಳಿತುಕೊಳ್ಳಿ. ನಿನ್ನೆ ವಿಚಾರ ಏಕೆ ಬೇಕು ಈಗ? ಸೂರ್ಯಾಸ್ತಮಯವಾದ ಮೇಲೆ ಅದು ಅಲ್ಲಿಗೇ ಮುಗೀತು. ಕರಿಯಣ್ಣನವರೇ, ನೀವು ದಯವಿಟ್ಟು ಸುಮ್ಮನಿರಿ.

ಶ್ರೀ ಕರಿಯಣ್ಣ:- ನಿನ್ನೆ ನೀವು ಪೀಠದಲ್ಲಿ ಇರಲಿಲ್ಲ. ಆಗ ಇವರು ಬಾಯಿಗೆ ಬಂದಹಾಗೆ ಮಾತನಾಡಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಬಾಯಿಗೆ ಬಂದಹಾಗೆ ಮಾತನಾಡುವುದನ್ನು ನಾವು ಇವರ ಹತ್ತಿರ ಕಲಿಯಬೇಕಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಈಗಲೂ ಹೇಳುತ್ತೇನೆ. ಇದರಲ್ಲಿ ಶಾಸನದ ವಿರುದ್ಧವಾಗಿ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದ ವಿರುದ್ಧವಾಗಿ ಮತ್ತು ಉದ್ದೇಶ ಪೂರ್ವಕವಾಗಿ ಈ ಆಜ್ಞೆ ಆಗಿದೆ ಎಂದು ನಾನು ಎಲ್ಲ ದಾಖಲೆಗಳನ್ನು ನೋಡಿ ತೀರ್ಮಾನಕ್ಕೆ ಬಂದಿದ್ದೇನೆ. ಈಗಲೂ ಹೇಳುತ್ತೇನೆ. ಅವರು ಕೆಲವು ಸತ್ಯಗಳನ್ನು ಹೇಳಿದ್ದಾರೆ. ಏನು ಸತ್ಯ? ಏನೋ ಎಮೋಷನಲ್ ಆಗಿ ಬೇರೆಯವರ ರಾಜೀನಾಮೆ ಕೇಳಿದ ಸಂದರ್ಭ ಬಳಸಿಕೊಂಡು ರಾಜೀನಾಮೆ ಕೇಳಿದ್ದೀರಿ ಎಂದು, ಅದು ಸ್ವಲ್ಪ ನಿಜ ಇರಬಹುದು. ಆದರೆ ನೀವು ಇನ್ನೊಬ್ಬರ ಮೇಲೆ ಆರೋಪ ಮಾಡುವಾಗ ತಾವೇ, ಸತ್ಯಹರಿಶ್ಚಂದ್ರರೆಂದು ಕೂಗಿದರಲ್ಲ. ನಮ್ಮದು ಆಪಾದನೆ ಇದ್ದರೆ ಈ ಮಿನಿಟ್‌ನಲ್ಲಿ ಯಾವುದೇ ರೀತಿಯ ತನಿಖೆಗೆ ಸಿದ್ಧವಾಗಿದ್ದೇವೆ. Don't become emotional and talk something

else. I demand through this House that I am prepared for any inquiry. Let him cite a single suchthing in my life time.

(INTERRUPTION)

ಅಧ್ಯಕ್ಷರು:- ಹನುಮೇಗೌಡರೇ, ನೀವು ಚಂದ್ರೇಗೌಡರ ವಿಚಾರ ಏನಾದರು ಹೇಳಿದಿರಾ?

ಶ್ರೀ ಕೆ.ಹೆಚ್. ಹನುಮೇಗೌಡ:- ನಾನು ಅವರ ಬಗ್ಗೆ ಏನು ಹೇಳಲಿಲ್ಲ.

ಅಧ್ಯಕ್ಷರು:- ಚಂದ್ರೇಗೌಡರೇ, ನಿಮ್ಮ ಬಗ್ಗೆ ಅವರು ಏನು ಹೇಳಲಿಲ್ಲ,

ಶ್ರೀ ಬಿ.ಹೆಚ್. ಬನ್ನಿಕೋಡ್:- ಮೊನ್ನೆಯಿಂದ ಈ ಸದನದಲ್ಲಿ....

ಅಧ್ಯಕ್ಷರು:- ನಿನ್ನೆಯದೇ ಸಾಕಾಗಿರುವಾಗ ಇವರು ಮೊನ್ನೆಗೆ ಹೋದರು, ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಹೆಚ್. ಏಕಾಂತಯ್ಯ:- ಅಧ್ಯಕ್ಷರೇ ಇಲ್ಲಿ ಎರಡು ಪ್ರಶ್ನೆ ಇದೆ. ನಾವು ಮಾಡಿದ ತಪ್ಪನ್ನು ಬೇರೆಯವರೂ ಮಾಡಿದ್ದಾರೆ ಎಂಬ ಆರೋಪ ಮಾಡಿ ಈ ತಪ್ಪಿನಿಂದ ತಪ್ಪಿಸಿಕೊಳ್ಳಲು ಸಾಧ್ಯ ಆಗುವುದಿಲ್ಲ. ನಾವು ಏನು ಆರೋಪ ಮಾಡಿದ್ದೇವೆ. ಒಂದು ಸಾರಿ ಸರ್ಕಾರ ಸ್ವಾಧೀನಕ್ಕೆ ತೆಗೆದುಕೊಂಡ ಮೇಲೆ There is no provision to denotify under Land Acquisition Act or under Section 19(1) of the Karnataka Urban Development Act. ಇವತ್ತಿನ ದಿವಸ ಅವರಿಗೆ ಅಧಿಕಾರ ಇದೆಯೆಂದು ಮಾಡಿ ಇದ್ದರೆ I would like to take a challenge. ಇವೊತ್ತಿನ ದಿವಸ ಏನು ಡಿನೋಟಿಫಿಕೇಶನನ್ನು ರದ್ದು ಮಾಡಿದ್ದೀರಿ ಅದನ್ನು ಪುನಃ ಕ್ಯಾನ್ಸಲ್ ಮಾಡಿ ಪುಲ್ಲಯ್ಯನವರಿಗೆ ಕೊಡಿರಿ. ಆಗ ನಿಮ್ಮ ಸದುದ್ದೇಶವನ್ನು ನಾನು ಒಪ್ಪುತ್ತೇನೆ. ಆದರೆ ತಾವು ಮಾಡಿದ್ದೀರಿ ಎಂದು ತಮಗೆ ಗೊತ್ತಾಗಿ ಅದನ್ನು ಸರಿಪಡಿಸಿಕೊಂಡಿದ್ದೀರಿ. ಅದಕ್ಕೆ ಕಾರಣ ಹೇಳುವುದಕ್ಕೆ ಬದಲು ನಮ್ಮ ಮೇಲೆ ಆರೋಪ ಮಾಡುತ್ತಿದ್ದೀರಿ. ಅದು ಎಷ್ಟರಮಟ್ಟಿಗೆ ಸರಿ. ಆದ್ದರಿಂದ ನಾನು ತಮ್ಮಲ್ಲಿ ಕೇಳುತ್ತೇನೆ. ಇವೊತ್ತಿನ ದಿವಸ ಉದ್ದೇಶಪೂರ್ವಕವಾಗಿ ಸಂಬಂಧಪಟ್ಟವರಿಗೆ ಲಾಭ ಮಾಡಬೇಕೆಂಬ ಉದ್ದೇಶದಿಂದ ಈ ಸರ್ಕಾರ ಅವರಿಗೆ ಡಿನೋಟಿಫಿಕೇಶನ್ ಮುಖಾಂತರ ಕೊಟ್ಟಿದೆ. ಇದರ ಬಗ್ಗೆ ವಿಚಾರಣೆ ಆಗಬೇಕು. ಮತ್ತು ಯಾರು ಏನು ತಪ್ಪು ಮಾಡಿದ್ದಾರೆ. ಅವರಿಗೆ ಮಾನ್ಯ ಮುಖ್ಯಮಂತ್ರಿಗಳು ಈರುಳ್ಳಿ ತಿನ್ನಿಸುತ್ತಾರೋ ಇನ್ನೇನು ಮಾಡುತ್ತಾರೋ ಗೊತ್ತಿಲ್ಲ. ಆ ಶಿಕ್ಷೆ ಕೊಡುವಂತಹ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ:- ಚಂದ್ರಶೇಖರ್‌ರವರು ಮಧುದಂಡವತೆ ಅವರು ಅವರ ಪರವಾಗಿದ್ದರಲ್ಲ...

ಶ್ರೀ ಹೆಚ್. ಏಕಾಂತಯ್ಯ:- ಪುನಃ ಪುನಃ ಇದೇ ಮಾತನ್ನು ಹೇಳುತ್ತಿದ್ದಾರೆ. 9-10-86ರಲ್ಲಿ ಇದು ಡೀನೋಟಿಫಿಕೇಶನ್ ಆಗಿದೆ. 9-10-86ರಲ್ಲಿ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ. ಅದಕ್ಕಿಂತ ಮೊದಲು ಯಾರೇ ಪತ್ರವನ್ನು ಕೊಟ್ಟಿದ್ದರೂ ಸಹಾ ಆ ಪತ್ರ ಹೋದ ಮೇಲೆ ಅವರು ಅದನ್ನು ಪರಿಗಣನೆ ಮಾಡಬಹುದಾಗಿತ್ತು. 9-10-86ರಲ್ಲಿ ಯಾರಾದರು ಪತ್ರವನ್ನು ಕೊಟ್ಟಿದ್ದಾರೆ ಎಂಬ ಒಂದೇ ಕಾರಣದ ಮೇಲೆ ಅವರು ಡೀನೋಟಿಫೈ ಮಾಡುತ್ತೀರಾ? ಹಾಗಾದರೆ ನಾನು ಹೇಳುತ್ತೇನೆ, ನಾನು ಬೆಳಿಗ್ಗೆ ಪತ್ರವನ್ನು ಕೊಡುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು ಡೀನೋಟಿಫೈ ಮಾಡುತ್ತಾರೆಯೇ? ಈ ವಾದವನ್ನು ಮಾಡಬೇಕಾಗಿಲ್ಲ. ಇದು ವಿತ್ತಂಡವಾದ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಈ ಚರ್ಚೆಯಲ್ಲಿ ನಾನು ಪಾಲುಗೊಂಡಿರಲಿಲ್ಲ. ಸಭಾನಾಯಕರು ಇರುವುದಕ್ಕೋಸ್ಕರ ನಾನು ಹೇಳತಕ್ಕಂಥಾದ್ದು ಇವತ್ತು ಇದು ಮಾಜಿ ಒಬ್ಬ ಲೋಕಸಭಾ ಸದಸ್ಯರಿಗೆ ಸಂಬಂಧಪಟ್ಟ ಜಮೀನು ಎಂದು ಹೇಳಿ 1982 ರಿಂದ ಈ ವ್ಯವಹಾರ ಪ್ರಾರಂಭವಾಗಿ ಇವತ್ತು ಬಡವರಿಗೆ ಹಂಚಬೇಕಾದಂಥ ಈ ಸೈಟನ್ನು ವಿತರಣೆ ಆಗದೇ ಇವತ್ತಿನವರೆಗೂ ಅದನ್ನು ತಳ್ಳಿಕೊಂಡು ಬಂದಂಥ ಕೆಲಸ ಇವತ್ತು ಈ ರಾಜ್ಯದಲ್ಲಿ ಲಕ್ಷಾಂತರ ಎಕರೆಯನ್ನು ಅಕ್ವೈರ್ ಮಾಡಿಕೊಂಡಿದ್ದೇವೆ, ಬಡವರಿಗೆ ಸೈಟನ್ನು ಹಂಚುವುದಕ್ಕೋಸ್ಕರ. ಬೇರೆ

ಯಾವುದರಲ್ಲೂ ಡಿಲೇ ಆಗಿಲ್ಲ. ಸಭಾನಾಯಕರಿಗೆ ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ. ಪ್ರಭಾವಿ ಇರತಕ್ಕಂಥ ಲೋಕಸಭಾ ಸದಸ್ಯರಾಗಲೀ, ಮಂತ್ರಿಗಳು ಇರಲಿ, ಶಾಸಕರು ಇರಲಿ, ನಮ್ಮ ವೈಯುಕ್ತಿಕ ಜಮೀನು ಆಸ್ತಿ ಪಾಸ್ತಿಯನ್ನು ಉಳಿಸುವುದರಲ್ಲಿ ನೆರವಾಗುವಂಥ ಮತ್ತು ನ್ಯಾಯ ಸಿಗತಕ್ಕಂಥದ್ದು ನಡೆಯುತ್ತಿದೆಯೇ ಹೊರತು ಅವನು ಕಡು ಬಡವ ಆಗಿದ್ದರೆ ಈ ರೀತಿ ಆಗುತ್ತಿರಲಿಲ್ಲ. 24 ಗಂಟೆಗಳಲ್ಲಿ ಅಕ್ವೈರ್ ಆದದ್ದನ್ನು ಸೈಟುಗಳನ್ನು ಮಾಡಿ ಹಂಚುತ್ತಿದ್ದರು. ಈ ರೀತಿ ಪ್ರಭಾವವನ್ನು ಬೀರಿ ಜಮೀನು ಉಳಿಸಿಕೊಳ್ಳುವಂಥ ಪ್ರಯತ್ನ ಏನು ಆಗುತ್ತಿದೆ, ಇದು ಆಗಬಾರದು. ಈಗ ಕೊನೆಗೆ ಇನ್ನು ಬಡವರಿಗೆ ಹಂಚುವಂಥ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೀರಿ, ಇದು ಒಳ್ಳೆಯದಾಯಿತು. ಈ ರೀತಿಯ ಒಂದು ಪ್ರಭಾವ ಮುಂದೆ ನಡೆಯುವುದಿಲ್ಲ ಎನ್ನುವ ಒಂದು ಕೆಲಸವನ್ನು ಮಾಡುತ್ತಿದ್ದೀರಿ. ಆದರೆ ಇವತ್ತು ನೀವು ಇಷ್ಟು ಅವಸರವಸರವಾಗಿ ಇಷ್ಟು ಬೇಗ ಮಾಡುವಂತ ಆಗತ್ಯವಿರಲಿಲ್ಲ. ನಿಧಾನವಾಗಿ ಇದರ ಬಗ್ಗೆ ಚರ್ಚೆ ಮಾಡಿ ಫೈಲನ್ನು ಡಿಸ್‌ಪೋಸ್ ಮಾಡುವುದಕ್ಕೆ ಮುಂಚೆ ಸ್ವಲ್ಪ ಎಚ್ಚರಿಕೆಯಿಂದ ಇದ್ದರೆ ತಾವು ಈ ಆಪಾದನೆಯಿಂದಲೂ ಸಹ ತಾವು ತಪ್ಪಿಸಿಕೊಳ್ಳಬಹುದಾಗಿತ್ತು. ಇನ್ನಾದರೂ ನಾವು ನೀವು ಸೇರಿ ಎಚ್ಚರಿಕೆಯಿಂದ ಕೆಲಸವನ್ನು ಮಾಡಬೇಕು ಎಂದು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಎರಡನೆಯದು ಸ್ವಾಮಿ, ಮಂಡ್ಯ ಜಿಲ್ಲೆಯಲ್ಲಿ ಒಂದು ಕೊಲೆಯಾಗಿದೆ. ಇದರ ಬಗ್ಗೆ ಸಿ.ಓ.ಡಿ. ತನಿಖೆಯಾಗಬೇಕು ಏನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಉತ್ತರ ಮುಗಿದಮೇಲೆ ದಯವಿಟ್ಟು ಇದರ ಬಗ್ಗೆ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೇ, ಈ ಒಂದು ಜಮೀನನ್ನು ಬಡವರಿಗೇ ಹಂಚಲು ಹಿಂದಕ್ಕೆ ತೆಗೆದುಕೊಳ್ಳುವ ತೀರ್ಮಾನಕ್ಕೆ ಬಂದಮೇಲೆ, ಇದರಿಂದ ಅವರು ದೋಷಮುಕ್ತರಾದರು ಎನ್ನುವ ಪ್ರಶ್ನೆ ಬರುತ್ತದೆ. ಅವರ ಮೇಲೆ ಆರೋಪಣೆ ಹೊರಿಸಿ ಕತ್ತು ತೆಗೆಯತಕ್ಕಂಥ ಪ್ರಶ್ನೆಯೂ ಇಲ್ಲ, ಆ ಕಥೆ ಮುಗಿದಿದೆ. ಈಗ ಪ್ರಶ್ನೆ ಏನಾಗಿದೆ ಎಂದು ಹೇಳಿದರೆ, ನಮ್ಮ ಸ್ನೇಹಿತರು ಈ ಕಡೆ, ಆ ಕಡೆ ಅವರು, ಅವರಿಗೆ ಏನಾದರು ನಾವು ಅಂದರೆ ಇವರು ಕೈಚಪ್ಪಾಳೆ ತಟ್ಟುತ್ತಾರೆ. ಇವರು ಏನಾದರೂ ಅಂದರೆ ಅವರು ಚಪ್ಪಾಳೆ ತಟ್ಟುತ್ತಾರೆ. ಈ ಇಕ್ಕಟ್ಟಿನಲ್ಲಿ ನಾನು ಸಿಕ್ಕಿದ್ದೇನೆ. ಆದರು ಸಹಾ.....

ಅಧ್ಯಕ್ಷರು:- ಒಂದು ಕೆಲಸ ಮಾಡಿ, ಅಲ್‌ಟರ್‌ನೇಟ್ ಮಾಡಿ. ಒಂದು ಸಲ ಅವರ ಕಡೆ ಮಾತನಾಡಿ, ಇನ್ನೊಂದು ಸಲ ಇವರ ಕಡೆ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್:- ಪಾಪ, ಅವರು ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಅದನ್ನು ಬಡವರಿಗೆ ಹಂಚಬೇಕು ಎಂದು ಹೇಳಿ ತೀರ್ಮಾನಕ್ಕೆ ಬಂದಾಗ ಅದರ ಕಥೆ ಮುಗಿಯಿತು.

ಶ್ರೀ ಡಿ.ಬಿ. ಚಂದ್ರೇಗೌಡ:- ಮುಗಿಯಿತು;

ಶ್ರೀ ವಾಟಾಳ್ ನಾಗರಾಜ್:- ಮುಗಿಯಿತು ಅಂದರೆ ನೀವು ಸಿಟ್ಟು ಮಾಡಬೇಡಿ, ನಾವು ನೀವು ಸ್ನೇಹಿತರು, ಏತಕ್ಕೆ ಸಿಟ್ಟುಗೊಳ್ಳುತ್ತೀರಿ? ಮಾನ್ಯ ದಂಡವತೆಯವರು ಒಂದು ಕಾಗದವನ್ನು ಬರೆದಿದ್ದಾರೆ ಹೌದಾ? ಏನೆಂದು ಬರೆದಿದ್ದಾರೆ?

ಅಧ್ಯಕ್ಷರು:- ನನಗೆ ಹೇಳಿ, ಅವರಿಗೆ ಹೇಳಬೇಡಿ.

ಶ್ರೀ ವಾಟಾಳ್ ನಾಗರಾಜ್:- ಸಚಿವರಾದಂಥ ಚಂದ್ರಶೇಖರ್‌ರವರು ಬರೆದಿದ್ದಾರೆ, ಇದೆಲ್ಲಾ ಇದೆ. ಅಂದಮೇಲೆ ಈಗ ತೀರ್ಮಾನ ಆಯಿತು. ಈಗ ಅವರನ್ನು ನೇತು ಹಾಕುವ ಮಟ್ಟಕ್ಕೆ ಹೋಗುವುದಕ್ಕಾಗುತ್ತದೆಯೇ? ಅದು ಇಲ್ಲ. ಇನ್ನೊಂದು ಪ್ರಶ್ನೆ, ನಾನು ತಮಗೆ ಹೇಳುತ್ತೇನೆ, ಬೆಂಗಳೂರು ನಗರದಲ್ಲಿ ಯಾರು ಏನೇ ಆಗಿರಲಿ, ಹತ್ತು ವರ್ಷಗಳಿಂದ ಈ ನೆಲಗಳ್ಳರ ಕಾಟ ಅದನ್ನು 1,2,3 ಎಂದು ಹೇಳುತ್ತಾ ಬಹಳ ಹಗರಣಗಳು ಈ ಬೆಂಗಳೂರು ನಗರದಲ್ಲಿ ನಡೆದವು. ಈ ಹಸಿರು ವಲಯದಲ್ಲಿ ಏನು ಇತ್ತು, ಇದು ಏನಾಯಿತು ಸ್ವಾಮಿ? ಇದು ಯಾರ ಕಾಲದಲ್ಲಿ ನಡೆದಿದೆ? ಅವರು ಎಷ್ಟೇ ದೊಡ್ಡವರಾಗಿರಲಿ, ಅದೆಲ್ಲಾ ಹೊರಗೆ ಬರಬೇಕಲ್ಲಾ. ಒಂದು ಸೈಟಿಗೋಸ್ಕರ 20 ವರ್ಷಗಳಿಂದ ಅರ್ಜಿ ಹಾಕಿರುವವರಿಗೆ ಸೈಟು ಇಲ್ಲ. ಕೃಷ್ಣಭಟ್ಟನ ಗೃಹನಿರ್ಮಾಣ

ಮಂಡಲಿಗಳು, ತ್ರಿನಾಮದಾರಿ ಎಂದು ವೈಯಾಲಿಕಾವಲ್ ಸೊಸೈಟಿ, ಈ ರೀತಿ ಬಹಳ ಹಗರಣಗಳು ಇವೆ. ತಾವು ಸರಿಯಾಗಿ ತನಿಖೆ ನಡೆದರೆ ಆ ಜನಗಳನ್ನು ಸೆಂಟ್ರಲ್ ಜೈಲ್ ಒಳಗೆ ಕಳುಹಿಸಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಎದೆ ತಟ್ಟಿ ತನಿಖೆ ನಡೆಸಿದರೆ ಈ ಗೃಹನಿರ್ಮಾಣ ಮಂಡಲಿಯವರು ನಿಮ್ಮ ಸುತ್ತ ಸುತ್ತುತ್ತಿದ್ದಾರೆ. ನನಗೆ ಗೊತ್ತು, ಅದರ ಬಗ್ಗೆ ಅವರು ಅವಕಾಶ ಕೊಟ್ಟರೆ ನಾನು ಈ ಸದನದಲ್ಲಿ...

(ಗೊಂದಲ)

ಶ್ರೀ ವೀರೇಂದ್ರ ಪಾಟೀಲ್:- ನನ್ನ ಬಗ್ಗೆ ಹೇಳಿದಿರಿ, ನಾನು ಅಧಿಕಾರಕ್ಕೆ ಬಂದಮೇಲೆ ಎಲ್ಲಾ ಗೃಹನಿರ್ಮಾಣ ಮಂಡಲಿಯವರಿಗೆ ಎಲ್ಲಾ ಹೌಸ್ ಬಿಲ್ಡಿಂಗ್ ಕೋಆಪರೇಟಿವ್ ಸೊಸೈಟಿಯವರಿಗೆ ಒಂದು ಸೈಟನ್ನು ವಿತರಣೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿಲ್ಲ, ಕಂಪ್ಲೀಟ್ ಬ್ಯಾನ್. ಅಲ್ಲಿಂದ ಹೊಸದಾಗಿ ಒಂದು ಹೌಸ್ ಬಿಲ್ಡಿಂಗ್ ಕೋಆಪರೇಟಿವ್ ಸೊಸೈಟಿಗೆ ರಿಜಿಸ್ಟರ್ ಮಾಡಬೇಡಿ ಎಂದು ಕಟ್ಟಪ್ಪಣೆ ಕೊಟ್ಟಿದ್ದೇನೆ. ಏಕೆಂದರೆ ಯಾವುದೋ ಒಂದು ಪ್ರಶ್ನೆಯನ್ನು ಹೇಳುತ್ತಿದ್ದಾರೆ. ಪ್ರತಿ ಹೌಸ್ ಬಿಲ್ಡಿಂಗ್ ಕೋ ಆಪರೇಟಿವ್ ಸೊಸೈಟಿನಲ್ಲಿ ಎಷ್ಟು ಹಗರಣಗಳನ್ನು ಹಿಡಿಯಲಿಕ್ಕೆ ಹೋಗುತ್ತೀರೋ ಅಷ್ಟು ಪಾತಾಳದವರೆಗೂ ಹೋಗತಕ್ಕಂಥ ಹಗರಣಗಳು ಹಿಂದಿನ ಕಾಲದಲ್ಲಿ ನಡೆದಿವೆ ಆದಕ್ಕೆ ನಾನು ಇವತ್ತು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಅದು ಹಗರಣ ಇದ್ದರೆ ಅದು ಹಗರಣವೇ. ನಮ್ಮ ಕಾಲದ್ದು ಇರಲಿ, ನಿಮ್ಮ ಕಾಲದ್ದು ಇರಲಿ ಅಥವಾ ನಿಮಗಿಂತ ಮೊದಲೇ ಇರಲಿ, ಅದು ಬೇರೆ ಮಾತು. ಆದರೆ ನಾನು ಬಂದ ಮೇಲೆ ಅನೇಕ ಜನಕ್ಕೆ ನನ್ನ ಮೇಲೆ ಸಿಟ್ಟು ಇರುವುದೇನೆಂದರೆ ಇವರು ಬಂದ ತಕ್ಷಣ ಎಲ್ಲಾ ಮುಗಿಸಿಬಿಟ್ಟರು. ಎಲ್ಲದಕ್ಕೂ ಬ್ಲಾಕ್ ಮಾಡಿದ್ದಾರೆ ಎನ್ನುವ ಪರಿಸ್ಥಿತಿ ಇದೆ. ವಯಾಲಿಕಾವಲ್ ಬಗ್ಗೆ ಹೇಳಿದ್ದೀರಿ. ಅದೇ ರೀತಿ ಇನ್ನೂ ಅನೇಕ ಕಾವಲುಗಳನ್ನು ನಾನು ಬೇಕಾದರೆ ಹೇಳುತ್ತೇನೆ. ಆದರೆ ಒಂದು ಹೌಸ್ ಬಿಲ್ಡಿಂಗ್ ಸೊಸೈಟಿಗೂ ಕೂಡ ಒಂದು ಸೈಟ್ ವಿತರಣೆ ಮಾಡುವುದಕ್ಕೆ ಅಲಾಟ್‌ಮೆಂಟ್ ಮಾಡುವುದಕ್ಕೆ ಮತ್ತು ಇನ್ನು ಏನಾದರು ಲೇ ಔಟ್ ಇದ್ದರೆ ಅಪ್ರೂವ್ ಮಾಡುವುದಕ್ಕೆ ವಿತರಣೆ ಮಾಡುವುದಕ್ಕೆ ಅಕ್ವಿಜಿಷನ್ ಇದ್ದರೆ ಅದನ್ನು ಕೂಡ ಪೂರ್ತಿಯಾಗಿ ನಾವು ತೆಗೆದುಕೊಂಡು ನಿಜವಾಗಿಯೂ ಪ್ರಾಮಾಣಿಕತೆಯಿಂದ ಸೈಟ್ ಇಲ್ಲದೆ ಮನೆ ಇಲ್ಲದೇ ಮನೆ ಕಟ್ಟಿಕೊಳ್ಳಬೇಕು ಎಂದು ಯಾವ ಜನ ಇದ್ದಾರೆ, ಅವರಿಗೆ ಮಾತ್ರ ಸೈಟ್ ಕೊಡಬೇಕು ಎಂಬ ಉದ್ದೇಶದಿಂದ ಪ್ರಯತ್ನಗಳು ನಡೆಯುತ್ತಾ ಇದೆ. ಈಗ ತಿರುಗಿ ಏಕೆ ಆಯಿತು...

ಶ್ರೀ ಡಿ.ಬಿ. ಚಂದ್ರೇಗೌಡ:- ಹಾಗಿದ್ದರೆ ಬಳ್ಳಾರಿ ಪ್ರಕರಣದಲ್ಲಿ ಏತಕ್ಕೆ ಡೀನೋಟಿಫೈ ಆಯಿತು. ಇಂತಹ ನಿಲುವು ಇದ್ದೂ ಕೂಡ ಅಲ್ಲಿ ಬದಲಾವಣೆ ಆಯಿತು. ಏತಕ್ಕೆ ಡೀನೋಟಿಫೈ ಆಯಿತು. ಅವರು ಏನು ಹೇಳಿದ್ದಾರೆ? ಶಾಸನಸಭೆಯಲ್ಲಿ ಚರ್ಚೆಗೆ ಬಂತು, ವಿತ್‌ಡ್ರಾ ಮಾಡಿದ್ದೀವಿ ಎಂದು; ಒಂದು ವೇಳೆ ಚರ್ಚೆಗೆ ಬರದಿದ್ದರೆ?

ಶ್ರೀ ಕಾಗೋಡು ತಿಮ್ಮಪ್ಪ:- ಹಾಗಿದ್ದರೆ ಸೈಟ್ ಅಲಾಟ್‌ಮೆಂಟ್ ಅನ್ನು ಏತಕ್ಕೆ ರದ್ದು ಮಾಡಿದಿರಿ?

MR. SPEAKER:- He cannot answer for that. He cannot answer for previous regime. He was not part of it.

ಶ್ರೀ ವಾಟಾಳ್ ನಾಗರಾಜ್:- ಈ ಗೃಹ ನಿರ್ಮಾಣ ಮಂಡಲಿಗಳ ಬಗ್ಗೆ ಏನು ದಿಟ್ಟ ನಿಲುವು ತೆಗೆದುಕೊಂಡಿದ್ದಾರೆ. ಅದಕ್ಕಾಗಿ ವೀರೇಂದ್ರ ಪಾಟೀಲರ ಸರ್ಕಾರವನ್ನು ಅಭಿನಂದಿಸುತ್ತೇನೆ. ನನಗೆ ಗೊತ್ತು ಏನೇನು ಇವರು ಮಾಡಿದ್ದಾರೆ ಎಂದು. ಕೆರೆಗಳನ್ನೂ ಬಿಟ್ಟಿಲ್ಲ. ಬೆಂಗಳೂರಿನ ಸುತ್ತ ಮುತ್ತ ದನಕರುಗಳು ನೀರು ಕುಡಿಯುತಕ್ಕ ಕೆರೆಗಳನ್ನು ಕೂಡ ಬಿಟ್ಟಿಲ್ಲ. ಒಂದು ಪ್ರದೇಶವನ್ನು ಸಹ ಬಿಟ್ಟಿಲ್ಲ. ಒಂದು ಭ್ರಷ್ಟಾಚಾರದ ಪಾತಾಳ ಕೂಪ ಇದರಲ್ಲಿ ಅಡಗಿದೆ. ಆದ್ದರಿಂದ ಒಂದು ಸಮಗ್ರವಾದ ಚರ್ಚೆ ಇದರ ಬಗ್ಗೆ ನಡೆಯಬೇಕು. ಈ ಸಭೆಯಲ್ಲಿ ಆಗದಿದ್ದರೂ ಸಹ ಮುಂದಿನ ಸಭೆಯಲ್ಲಿ ತಾವು ಚರ್ಚೆಗೆ ತರಬೇಕು. ಒಂದೊಂದು ಗೃಹ ನಿಮಾಣ ಮಂಡಲಿಯವರೂ ಸಹ....

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ನಮಗೆ ಏನು ಅಂದರೆ, ಯಾರಿಗೂ ಒಂದು ಅಂಗುಲ ಭೂಮಿ ಕೊಡದೇ ಇರುವುದನ್ನು ನೀವು ಚರ್ಚೆ ಮಾಡಿದರೆ ನಾವು ಇರುವುದಿಲ್ಲ. ಹೀಗೆ ಡೀನೋಟಿಫೈ ಮಾಡಿದ್ದು ಬಂದರೆ ಚರ್ಚೆಗೆ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ನಮ್ಮ ಕಾಲದ ಡೀನೋಟಿಫಿಕೇಶನ್ ಎಂದಲ್ಲ.. ಒಂದು ಎಕರೆ ಕೂಡ ಭೂಮಿ ಕೊಡದೇ ಒಂದು ರೂಪಾಯಿನ ವ್ಯವಹಾರವೂ ನಡೆಯದೆ ಇದ್ದರೂ ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರಿಂದ ತನಿಖೆ ಮಾಡಿಸಿ ನಂತರ ಇಲ್ಲಿ ಚರ್ಚೆ ಮಾಡುತ್ತೀರಿ. ಆದರೆ ಇಲ್ಲಿ ನೀವೇ ತೀರ್ಮಾನ ಮಾಡಿದ್ದೀರಿ? ನಿಮ್ಮ ಸರ್ಕಾರದ ಆಜ್ಞೆ ಏನಿದೆ, ಈ ಆಜ್ಞೆಯನ್ನು ನಾವು ಹೇಳಿದ ಕೂಡಲೇ ವಾಪಸ್ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೆ ಅದಕ್ಕೆ ಏನು ಶಿಕ್ಷೆ ಬೇಡವೇ? ಈರುಳ್ಳಿ ತಿನ್ನುವುದೂ ಬೇಡ, ಬೆಳ್ಳುಳ್ಳಿ ತಿನ್ನುವುದೂ ಬೇಡ.

ಶ್ರೀ ವಾಟಾಳ್ ನಾಗರಾಜ್:- ಈಗ ನನಗೆ ಅನಿಸುತ್ತದೆ, ಈ ಗೃಹ ನಿರ್ಮಾಣ ಮಂಡಲಿಯು ಇಲ್ಲಿಗೇ ಮುಕ್ತಾಯ ಆಗತಕ್ಕದ್ದಲ್ಲ. ಒಂದು ಸಣ್ಣ ವಿಚಾರದಲ್ಲಿ ಮಾತನಾಡಿ ಮುಕ್ತಾಯ ಮಾಡತಕ್ಕದ್ದು ಅಲ್ಲ, ಇದು ಬಹಳ ದೊಡ್ಡ ಗಹನವಾದ ವಿಷಯ.

ಅಧ್ಯಕ್ಷರು:- ಅದಕ್ಕೆ ಬೇರೆ ನೊಟೀಸ್ ಕೊಡಿ....

ಶ್ರೀ ವಾಟಾಳ್ ನಾಗರಾಜ್:- ಈಗ ಕಳಕಳಿಯಿಂದ ಮನವಿ ಮಾಡತಕ್ಕದ್ದು..

ಅಧ್ಯಕ್ಷರು:- ಈಗ ಬಳ್ಳಾರಿ ಬಗ್ಗೆ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್:- ಬಳ್ಳಾರಿಗೆ ಬರುತ್ತೇನೆ. ಬಳ್ಳಾರಿಗೆ ಬನ್ನಿ ಎಂದರೆ ರೇವಜೀತುಗೆ ಹೋಗುವುದು ಬೇಡವೇ?

ಅಧ್ಯಕ್ಷರು:- ಅದಕ್ಕೆ ಬೇರೆ ನೋಟೀಸ್ ಕೊಡಿ.

ಶ್ರೀ ವಾಟಾಳ್ ನಾಗರಾಜ್:- ಯಾವಾಗ ನೋಟೀಸ್ ಕೊಡುವುದು.

ಅಧ್ಯಕ್ಷರು:- ಮುಂದಿನ ಸೆಕ್ಷನ್‌ನಲಿ

ಶ್ರೀ ವಾಟಾಳ್ ನಾಗರಾಜ್:- ಒಂದೇ ಒಂದು ನಿಮಿಷದಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು:- ಒಂದು ನಿಮಿಷದಲ್ಲಿ ಮುಗಿಸುವುದಕ್ಕಾಗುತ್ತದೆಯೇ, ಅದೂ ನಿಮ್ಮಿಂದ...

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ದಯಮಾಡಿ.... ಆದರೂ ನೀವು ಸೇರಿಸಿಲ್ಲ, ಅವರ ಮಂತ್ರಿತನದ ಬದಲಾವಣೆಗೆ ಪ್ರಯತ್ನ ನಡೆಯುತ್ತಿದೆ. ಇದರ ಬಗ್ಗೆ ಸ್ವಲ್ಪ ಎಚ್ಚರಿಕೆಯಿಂದ ಇರಬೇಕು. ತಮ್ಮಲ್ಲಿ ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ. ಇರುವುದರಲ್ಲಿ ಮಂತ್ರಿಮಂಡಲದಲ್ಲಿ ಉತ್ತರ ಗಿತ್ತರ ಸ್ವಲ್ಪ ಜೋರಾಗಿ, ನಗುನಗುತ್ತಾ ಕೊಡುತ್ತಾರೆ. ಅವರನ್ನು ಹಿಡಿದು ಕಟ್ಟಿ ಒಂದು ಪ್ರಜಾಪ್ರಭುತ್ವ ಲಕ್ಷಣದಲ್ಲಿ ಮಾನ್ಯ ನರಸಿಂಹಮೂರ್ತಿಯವರಿಗೆ ಒಂದು ಒಳ್ಳೆಯ ಸಂಪ್ರಾದಯ ಇದೆ. ಆದ್ದರಿಂದ ಅವರನ್ನು ಯಾವುದೇ ಒಂದು ವಿಷಯಕ್ಕೆ ಸಿಕ್ಕಿಸಿ ಒಂದು ಹೊಸ ರೂಪ ಕೊಡುವುದು ಬೇಡ. ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಒಂದು ಕಳಕಳಿ ಇದೆ. ಬಡವರಿಗೆ ಕೊಡಬೇಕು ಎಂದು. ಅದನ್ನು ಅವರು ಹೇಳಿಯೂ ಇದ್ದಾರೆ. ಮಂತ್ರಿಮಂಡಲದಲ್ಲಿ ಸ್ವಲ್ಪ ಚುರುಕಾಗಿ ಕೆಲಸ ಮಾಡುತ್ತಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನೂ ಸಲ್ಲಿಸುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ:- ಮಾನ್ಯ ವಿರೋಧ ಪಕ್ಷದ ನಾಯಕರು ಮೂರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮತ್ತು ಮಾನ್ಯ ಏಕಾಂತಯ್ಯನವರು ಹೇಳಿದ್ದು ಏನು ಎಂದರೆ ಸರ್ಕಾರಕ್ಕೆ ಅಧಿಕಾರ ಇಲ್ಲದೇ ಇರುವಾಗ ಇಂತಹ ಒಂದು ಅಧಿಕಾರವನ್ನು ಚಲಾಯಿಸಿದ್ದಾರೆ ಎಂದು ಇವೊತ್ತು ನಮ್ಮಲ್ಲಿ ಭೂಶಾಸನ ಕಾಯಿದೆ ಪ್ರಕಾರ ಅನೇಕ ಕಾಯಿದೆಗಳು ಇದ್ದಾವೆ. ಇವೊತ್ತು ನಗರ ಪ್ರಾಧಿಕಾರ ಕಾಯಿದೆ. ಪ್ರಕಾರ 19(7)ರ ರೀತ್ಯಾ ಡೀನೋಟಿಫೈ ಮಾಡುವುದಕ್ಕೆ ಪ್ರಾಧಿಕಾರಗಳಿಗೆ ಬಹುಶಃ ಸರ್ಕಾರಕ್ಕೆ ಪೂರ್ಣವಾದ ಅಧಿಕಾರ ಇರುವುದರಿಂದ ಈ ಅಧಿಕಾರವನ್ನು....

ಶ್ರೀ ಡಿ.ಬಿ. ಚಂದ್ರೇಗೌಡ:- ಕುಲದೀಪ್‌ಸಿಂಗ್ ಕಮೀಷನ್‌ನಲ್ಲಿ this is the major question.

ಶ್ರೀ ಟಿ.ಎನ್. ನರಸಿಂಹಮೂರ್ತಿ:- ಬೆಂಗಳೂರು ಪ್ರಾಧಿಕಾರಕ್ಕೆ ಕಾನೂನಿನಲ್ಲಿ ಸಂಬಂಧಪಟ್ಟ ಹಾಗೇ ಡೀನೋಟಿಫೈ ಮಾಡಲಿಕ್ಕೆ ಇವೊತ್ತು ಕಾಯಿದೆಯಲ್ಲಿ ಅಧಿಕಾರ ಇಲ್ಲ. ಆದರೆ ಪ್ರಾಧಿಕಾರ ಏನು ಇದೆ, ನಗರದ ಪ್ರಾಧಿಕಾರ, ಅರ್ಬನ್ ಡೆವಲಪ್‌ಮೆಂಟ್ ಇದರಲ್ಲಿ 19(7)ರ ಪ್ರಕಾರ ಸರ್ಕಾರಕ್ಕೆ ಅಧಿಕಾರ ಇದೆ. ಆ ಅಧಿಕಾರವನ್ನು ನಾನು ಚಲಾಯಿಸಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದನ್ನು ಹೇಳಿದರು. ಏನೆಂದರೆ ಕೊನೆಯಲ್ಲಿ ಅವರು ಒಂದು ಪದವನ್ನು ಸ್ಟೇಟ್‌ಮೆಂಟ್ ಮಾಡುವಾಗ ಉಪಯೋಗಿಸಿದರು. ಅದು ನಮಗೆ ಪ್ರಚೋದನೆ ಆಯಿತು ಎಂಬ ಮಾತು ಹೇಳಿದರು. This is an complete contrast to the manner in which the previous government has been dealing with numerous scandals which is now part of the history. ಎನ್ನುವ ಪದದಿಂದ ಹೇಗಾಯಿತು. ಇಲ್ಲದಿದ್ದರೆ ಇದನ್ನು ಪ್ರಸ್ತಾಪ ಮಾಡುತ್ತಾ ಇರಲಿಲ್ಲವೆನ್ನುವ ಮಾತನ್ನು ಕೂಡ ಅವರು ಹೇಳಿದ್ದಾರೆ. ಇದರ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಈಗ ಡೀನೋಟಿಫೈ ಎನ್ನುವ ಪ್ರಶ್ನೆ ಎತ್ತಿದ್ದಾರೆ, ನಾನು ಹೇಳುವುದು 24-6-1988ರಲ್ಲಿ ಅಂದಿನ ನಗರಾಭಿವೃದ್ಧಿ ಸಚಿವರಾಗಿದ್ದ ಶ್ರೀಮಾನ್ ಚಂದ್ರಶೇಖರ್ ಅವರು ಡೀನೋಟಿಫೈ ಮಾಡಿದ್ದಾರೆ, ಆದರೆ ಜಾರಿಗೆ ಕೊಡುವುದಕ್ಕೆ ಆಗಲಿಲ್ಲ. ಕಾರಣ ಏನು ಎಂದರೆ ಸೈಟ್ ಅಲಾಟ್‌ಮೆಂಟ್ ಆಗಿತಲ್ಲ ಅದನ್ನು ರದ್ದು ಮಾಡುವವರೆಗೂ ಕೂಡ ಡೀನೋಟಿಫೈ ಮಾಡುವುದಿಲ್ಲ ಎಂದು ಆಗಿದೆಯೇ ಹೊರತು ಇದು ನನ್ನ ಕಾಲದಲ್ಲಿ ಆಗಿರತಕ್ಕ ಮೊದಲನೆಯ ಒಂದು ಕ್ರಿಯೆ ಅಲ್ಲ ಆದ್ದರಿಂದ ಏನಾದರು ಇದು ನಡೆದಿದೆ ಎಂದರೆ, ಹಿಂದಿನ ಸರ್ಕಾರದ ಸರಮಾಲೆಯಲ್ಲಿ ಆಗಿರತಕ್ಕದ್ದು ನಮಗೆ ತಿಳಿದಂತಹ ಮಾಹಿತಿಯ ಹಿನ್ನೆಲೆಯಲ್ಲಿ ಈ ಸ್ಪಷ್ಟೀಕರಣ ಕೊಟ್ಟಿದ್ದೇನೆ. ಆದ್ದರಿಂದ ಈ ವಿಚಾರವನ್ನು ಇಲ್ಲಿಗೆ ಮುಕ್ತಾಯ ಮಾಡಬೇಕು ಎಂದು ಪ್ರಾರ್ಥಿಸುತ್ತೇನೆ.

+ ಶ್ರೀ ಡಿ.ಬಿ. ಚಂದ್ರೇಗೌಡ:- ಅದಕ್ಕೆ ನಾನು ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ. Let him go through this. ಜಸ್ಟೀಸ್ ಕುಲ್‌ದೀಪ್‌ಸಿಂಗ್ ಆಯೋಗದಲ್ಲಿ ಅವರು ಹೇಳಿರುವ ಮಾತೇ ಇದು. ಇವರು ಏನು ಹೇಳುತ್ತಾರೆ, ಅಧಿಕಾರ ಪ್ರಾಧಿಕಾರಗಳಿಗೆ ಇಲ್ಲ ಎಂದು, ಅವರು ಉಂಟು ಎಂದು ಹೇಳಿದ್ದಾರೆ.That is the basic difference. ನಾನು ಇದರ ಡೀಟೇಲ್ಸ್‌ಗೆ ಹೋಗುವುದಕ್ಕೆ ತಯಾರಿಲ್ಲ. ನಾವು ಏನು ಹೇಳುತ್ತಿದ್ದೇವೆ ಎಂದರೆ, ಇಷ್ಟೆಲ್ಲಾ ಆದಮೇಲೆ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ನಿಮಗೆ ಮಾಡತಕ್ಕ ಅಧಿಕಾರ ಇಲ್ಲ. ಇವೊತ್ತು ಹೊಸದು ಹೇಳುತ್ತಿದ್ದೀರಿ. ಹಿಂದೆ ಆ ಸಮಯದಲ್ಲಿ ಮಾಡಿದ್ದರು ಎಂದು, ಆ ಸಭೆಯಲ್ಲಿ ನಾನು ಮಾಡಿದೆ, ವಾಪಸ್ ತೆಗೆದುಕೊಂಡಿದ್ದೇನೆ ಎಂದು ಹೇಳಿದರು. ಈ ಸಭೆಯಲ್ಲಿ ಶ್ರೀಮಾನ್ ಚಂದ್ರಶೇಖರ್ ಅವರು ಮಾಡಿದ್ದರು. ನಾನು ಮಾಡಲಿಲ್ಲವೆಂದರೆ ಈ ಸದನವನ್ನು ಯಾರು ತಪ್ಪು ದಾರಿಗೆ ಎಳೆಯುತ್ತಿದ್ದಾರೆ, ಎನ್ನುವ ತೀರ್ಮಾನವನ್ನು ತಮಗೇ ಬಿಡುತ್ತೇನೆ. I demand the resignation of the Minister. I demand the Government's resignation. I still stand by it or else the Hon.Chief Minister should explain as to how this is well within the meaning of the law.

ಶ್ರೀ ಎಲ್.ಆರ್. ಶಿವರಾಮೇಗೌಡ:- ಮಾನ್ಯ ಅಧ್ಯಕ್ಷರೇ..

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಂಡ್ಯಾ ಜಿಲ್ಲೆಯಲ್ಲಿ ಏನು ಒಂದು ಕೊಲೆ ಆಗಿದೆ, ಅದರ ಬಗ್ಗೆ ಸಿ.ಓ.ಡಿ. ತನಿಖೆ...

ಶ್ರೀ ಡಿ.ಬಿ. ಚಂದ್ರೇಗೌಡ:- ಇದರ ಬಗ್ಗೆ ನೀವೂ ಏನೂ ಹೇಳುವುದಕ್ಕೆ ಸಿದ್ಧ ಇಲ್ಲವೇ, ನಾನು ಕೇಳುತ್ತಿದ್ದೇನೆ. ನಿಮ್ಮ ಮಂತ್ರಿ ತಪ್ಪು ಮಾಡಿದ್ದಾರೆ.......

ಶ್ರೀ ವೀರೇಂದ್ರ ಪಾಟೀಲ್:- ಮಂತ್ರಿಗಳು ಉತ್ತರ ಕೊಟ್ಟಮೇಲೆ, I have nothing to add. The concerned Minister has made a statement. He has already explained

the position. You should be satisfied with it. Even if you are not satisfied since you are on the Opposition, you pretend as if you are not satified.

SRI D.B. CHANDRE GOWDA:- That is not well within the law. ಸ್ವಾಮಿ ತಾವು ಇಷ್ಟು ಹೇಳಿ.ಬೇರೆ ಏನು ಹೇಳುವುದಕ್ಕೆ ಆಗದಿದ್ದರು ಸಭಾ ನಾಯಕರಾಗಿ ನೀವು ಮಾಡಿದಂತಹ ಆಜ್ಞೆಯನ್ನು ವಾಪಸ್ ತೆಗೆದುಕೊಳ್ಳುವಾಗ ತಪ್ಪು ಆಯಿತು ಎಂದು ತಿಳಿದು ಮಾಡಿದ್ದೀರಿ ತಾನೇ? ಅಷ್ಟಾದರು ಬೇಕಲ್ಲ...

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ನಾನು ಇದನ್ನು ಪ್ರಸ್ತಾಪ ಮಾಡಿದ್ದೆ. ಇವರದ್ದು ಆದ ಮೇಲೆ ನನಗೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೀರಿ. ಮಂಡ್ಯಾ ಜಿಲ್ಲೆಯ ಬೆಳ್ಳೂರು ಕೊಲೆ ಪ್ರಕರಣದ ಬಗ್ಗೆ..

ಶ್ರೀ ಡಿ.ಬಿ.ಚಂದ್ರೇಗೌಡ:- ಯಡಿಯೂರಪ್ಪನವರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳುವುದಕ್ಕೆ ತಯಾರಾಗಿಲ್ಲ, ನನ್ನ ಛಾರ್ಜ್ ಇದೆ.

MR. SPEAKER:- Under rule 68, the discussion in directed towards the Hon.Minister for Urban Development. He has made an attempt to give an elaborate reply. Some clarifications were sought and he tried to clarify.

SRI D.B. CHANDRE GOWDA:- My main question is, while having passed orders, you withdrew. It means, you have committed a mistake. Therefore, I demanded his resignation.

ಅಧ್ಯಕ್ಷರು:- ಅದಕ್ಕೆ ನೀವು ಹೇಳಿ ಸ್ವಾಮಿ;

SRI T.N. NARASIMHA MURTHY:- All that I have made statement at every stage, there is nothing more to add to it.

ಶ್ರೀ ಬಿ.ಎಂ. ಇದಿನಬ್ಬ:- ಮಾನ್ಯ ಮಂತ್ರಿಗಳು ಬೇಕಾದಷ್ಟು ಉತ್ತರ ಹೇಳಿದ್ದಾರೆ.

SRI D.B. CHANDRE GOWDA:- If this is the case I resist to this and stage a walk out.

(At this stage, all the hon.Members present belonging to the Janata Dal staged a walk out and withdrew from the House.)

ಮಂಡ್ಯ ಜಿಲ್ಲೆ ಬೆಳ್ಳೂರಿನಲ್ಲಿ ಪದ್ಮರಾಜಯ್ಯ ಎನ್ನುವ ವ್ಯಾಪಾರಿಯನ್ನು ಕೊಲೆ ಮಾಡಿರುವ ಬಗ್ಗೆ.

+ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆ, ಬೆಳ್ಳೂರಿನಲ್ಲಿ 5-7-90ರಂದು ಬೆಳಿಗ್ಗೆ 11 ಗಂಟೆಗೆ ಪದ್ಮರಾಜಯ್ಯ ಎನ್ನವಂಥ ಒಬ್ಬ ವ್ಯಾಪಾರಸ್ಥನನ್ನು ಒಬ್ಬ ವ್ಯಕ್ತಿ ಬಂದು ತನ್ನ ಮನೆ ಹತ್ತಿರ ಕರೆದುಕೊಂಡು ಹೋಗಿದ್ದಾರೆ.. ಕರೆದುಕೊಂಡು ಹೋದಂಥ ವ್ಯಕ್ತಿ ಎಲ್ಲಿದ್ದಾನೆ ಎನ್ನುವುದು ಯಾರಿಗೂ ಪತ್ತೆ ಇಲ್ಲ. ಅದೇ ದಿನ ರಾತ್ರಿ 11 ಗಂಟೆಯಲ್ಲಿ ಅದೇ ವ್ಯಕ್ತಿ ಒಂದು ಚೀಲ ಹಿಡಿದುಕೊಂಡು ಬೆಳ್ಳೂರು ರಸ್ತೆಯಲ್ಲಿ ಹೋಗುತ್ತಿದ್ದಾಗ, ಗೂರ್ಖ ಒಬ್ಬ ಆತನನ್ನು ತಡೆದು, ಚೀಲದಲ್ಲಿ ಏನಿದೆ ಎಂದು ಪ್ರಶ್ನೆ ಮಾಡಿದಾಗ, ಅಲ್ಲಿದ್ದಂಥ ಜನ ಮುತ್ತಿಕೊಂಡಿದ್ದಾರೆ. ಅವನು ವಾಪಸ್ಸು ತನ್ನ ಮನೆ ಕಡೆ ಓಡಿದ್ದಾನೆ. ಗೂರ್ಖ ಬೆನ್ನತ್ತಿ ಹೋಗಿ ಚೀಲ ಕಿತ್ತುಕೊಂಡಾಗ, ಪದ್ಮರಾಜಯ್ಯ ಎನ್ನುವ ವ್ಯಾಪಾರಸ್ಥನನ್ನು ಬೆಳಿಗ್ಗೆ 11 ಗಂಟೆಗೆ ಕರೆದುಕೊಂಡು ಹೋಗಿದ್ದ. ಆತನ ರುಂಡ ಅಂದರೆ ತಲೆ ಮಾತ್ರ ಚೀಲದಲ್ಲಿ ಸಿಕ್ಕಿದೆ. ಕೈಕಾಲು ಬೇರೆ ಅವನ ಮನೆಯ ಪಕ್ಕದಲ್ಲಿಯೇ ಇವೆ. ರಾತ್ರಿ 11 ಗಂಟೆಗೆ ಈ ಘಟನೆ ನಡೆದು, 12 ಗಂಟೆಗೆ ಅಲ್ಲಿನ ಜನರು ಕಂಪ್ಲೇಂಟ್